ಭಾನುವಾರ, ಡಿಸೆಂಬರ್ 10, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 340 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆದಾಯ ಪಡೆಯಲು ವಿಶ್ವವಿದ್ಯಾಲಯಗಳು ವಿಫಲ • ಸರ್ಕಾರದಿಂದಲೂ ಸಿಗದ ಅನುದಾನ

‘ಪ್ರಪಾತ’ಕ್ಕೆ ಸರ್ಕಾರಿ ವಿ.ವಿಗಳು

• ಚಂದ್ರಹಾಸ ಹಿರೇಮಳಲಿ

ಒಳನೋಟ

ಬೆಂಗಳೂರು: ‘ಅಗತ್ಯ ಹಣಕಾಸಿನ ನೆರವು, ಮೂಲ ಸೌಕರ್ಯ ಕಲ್ಪಿಸದೇ ರಾಜಕೀಯ ಲಾಭಕ್ಕಾಗಿ ಹಳೆಯ ವಿಶ್ವ-ವಿದ್ಯಾಲಯಗಳನ್ನು ಮನಸ್ಸಿಗೆ ಬಂದಂತೆ ವಿಭಜಿಸಿ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸುವ ಪರಿಪಾಠ ಭವಿಷ್ಯದಲ್ಲಿ ಇನ್ನಷ್ಟು ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ’


–ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಈ ಮಾತು ರಾಜ್ಯದ ವಿಶ್ವವಿದ್ಯಾಲಯಗಳ ಪ್ರಸ್ತುತ ಸ್ಥಿತಿಗತಿ, ಸಾಗುತ್ತಿರುವ ಅಧೋಗತಿಯ ದಾರಿಗೆ ಹಿಡಿದ ಕನ್ನಡಿ. ರಾಜ್ಯ ಸರ್ಕಾರ ಉನ್ನತ ಶಿಕ್ಷಣಕ್ಕೆ ಕಳೆದ ಏಳು ವರ್ಷಗಳಲ್ಲಿ ನೀಡಿದ ಅನುದಾನ ಗಮನಿಸಿದರೆ ಸಾಕು ವಿಶ್ವ-ವಿದ್ಯಾಲಯಗಳ ಆರ್ಥಿಕ ದುಸ್ಥಿತಿಯನ್ನು ಸುಲಭವಾಗಿ ಅಳೆಯಬಹುದು. ಒಂದು ಕಡೆ ಆದಾಯ ಹಾಗೂ ಮತ್ತೊಂದು ಕಡೆ ಅನುದಾನದ ಕೊರತೆಯಿಂದ ನೆಲಕಚ್ಚುತ್ತಿದ್ದರೆ, ಮಗದೊಂದು ಕಡೆ ಖಾಸಗಿ ವಿಶ್ವವಿದ್ಯಾಲಯಗಳ ಪೈಪೋಟಿ ಎದುರಿಸಲಾಗದೆ ಹಲವು ದಶಕಗಳಿಂದ ಶಿಕ್ಷಣ ಕ್ರಾಂತಿಯನ್ನೇ ಸೃಷ್ಟಿಸಿದ್ದ ಹಳೆಯ ವಿಶ್ವವಿದ್ಯಾಲಯಗಳೂ ಕೈಚೆಲ್ಲಿ ಕುಳಿತಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2023-24ನೇ ಸಾಲಿಗೆ ಮಂಡಿಸಿದ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ ನೀಡಿರುವ ಅನುದಾನ ಬಜೆಟ್‌ನ ಶೇ 1.76 ಮಾತ್ರ. 2016–17ರ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ ಶೇ 6 ರಷ್ಟು ಹಣ ನೀಡಲಾಗಿತ್ತು. ಅದು ಪ್ರತಿ ವರ್ಷ ಇಳಿಮುಖವಾ-ಗುತ್ತಾ ಬಂದಿದೆ. ಕಳೆದ ವರ್ಷ ಬಜೆಟ್‌ನ ಶೇ 3.5 ಅನುದಾನವಿತ್ತು. ಈ ಹಣ ವಿಶ್ವ-ವಿದ್ಯಾಲಯ, ಪದವಿ ಕಾಲೇಜುಗಳ ಬೋಧಕ, ಬೋಧಕೇತರು ಹಾಗೂ ನಿವೃತ್ತರ ಪಿಂಚಣಿಗಷ್ಟೇ ಸಾಲುತ್ತದೆ. ಶೈಕ್ಷಣಿಕ–ಮೂಲ ಸೌಕರ್ಯ ಅಭಿವೃದ್ಧಿಗೆ ನಯಾಪೈಸೆಯೂ ಇಲ್ಲವಾಗಿದೆ.

ವಿಶ್ವವಿದ್ಯಾಲಯಗಳ ಕಾಯಂ ಬೋಧಕ ಹಾಗೂ ಬೋಧಕೇತರರ ವೇತನವಷ್ಟೇ ಸರ್ಕಾರದಿಂದ ಸಿಗುತ್ತಿದೆ. ಹಳೆಯ ವಿಶ್ವವಿದ್ಯಾಲಯಗಳಿಗೆ ಹೊರೆಯಾಗಿರುವ ನಿವೃತ್ತರ ಪಿಂಚಣಿ ಮೊತ್ತದಲ್ಲಿ ಪ್ರತಿ ವರ್ಷ ಶೇ 25ರಿಂದ 50ರಷ್ಟು ಬಿಡುಗಡೆ ಮಾಡಲಾಗುತ್ತದೆ. ವೇತನ, ಪಿಂಚಣಿ, ಮೂಲಸೌಕರ್ಯ, ಶೈಕ್ಷಣಿಕ ಅಭಿವೃದ್ಧಿ ಗಾಗಿ ಕಳೆದ ಏಳು ವರ್ಷಗಳಲ್ಲಿ ವಿವಿಧ ವಿಶ್ವವಿದ್ಯಾಲಯ-ಗಳು ಬೇಡಿಕೆ ಸಲ್ಲಿಸಿದ್ದು ₹10 ಸಾವಿರ ಕೋಟಿಗೂ ಹೆಚ್ಚು. ಸರ್ಕಾರ ನೀಡಿದ ನೆರವು ₹2,070.06 ಕೋಟಿ ಮಾತ್ರ.

ದಶಕಗಳಿಂದ ನೇಮಕಾತಿ ಪ್ರಕ್ರಿಯೆಗಳು ನಡೆಯದ ಕಾರಣ ಅತಿಥಿ ಉಪನ್ಯಾಸಕರು, ಹೊರಗುತ್ತಿಗೆ ನೌಕರರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. ವಿವಿಧ ಕಾಲೇಜುಗಳ ಸಂಯೋಜನೆ, ಪರೀಕ್ಷೆ, ಇತರೆ ಶುಲ್ಕಗಳಿಂದ ಬರುತ್ತಿರುವ ಆದಾಯವು ಪಿಂಚಣಿ, ಅತಿಥಿ ಉಪನ್ಯಾಸಕರು, ಹೊರಗುತ್ತಿಗೆ ನೌಕರರ ವೇತನ–ಭತ್ಯೆ ಭರಿಸು ವುದಕ್ಕೆ ಸಾಲುತ್ತಿಲ್ಲ. ಹಳೆಯ ವಿಶ್ವವಿದ್ಯಾಲಯಗಳಿಗೆ ನಿವೃತ್ತರ ಪಿಂಚಣಿಗಳ ಭಾರ ಹೆಚ್ಚಾಗಿದೆ. ಜಿಲ್ಲೆಗೊಂದರಂತೆ ವಿಶ್ವವಿ-ದ್ಯಾಲಯಗಳ ಸ್ಥಾಪನೆ ಪರಿಣಾಮ ಹಳೇ ವಿಶ್ವವಿದ್ಯಾಲಯಗಳಿಗೆ ಸಂಯೋಜಿತ ಕಾಲೇಜುಗಳ ಸಂಖ್ಯೆ ಕಡಿಮೆಯಾಗಿ, ಆದಾಯದ ಕೊರತೆ ಕಾಡುತ್ತಿದೆ. ಅನುದಾನ ನಿರೀಕ್ಷೆ ಯಂತೆ ದೊರೆಯದೆ ಶೈಕ್ಷಣಿಕ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ. ಅವಶ್ಯಕತೆ ಇರುವ ಕಡೆ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದರೆ ಅದರ ಶೇ 25ರಷ್ಟೂ ನೆರವೂ ಸಿಗುತ್ತಿಲ್ಲ. ಹೊಸ ವಿಶ್ವವಿದ್ಯಾಲಯಗಳಿಗೆ ಅಗತ್ಯ ಅನುದಾನವನ್ನೇ ಸರ್ಕಾರ ನೀಡಿಲ್ಲ. ಹಾಗಾಗಿ, ಶೇ 90ರಷ್ಟು ವಿಶ್ವವಿದ್ಯಾಲಯಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿವೆ. ಇಂತಹ ಬಿಕ್ಕಟ್ಟಿನ ಸ್ಥಿತಿಯಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮೀನುಗಾರಿಕೆ ವಿಶ್ವ ವಿದ್ಯಾಲಯ ಆರಂಭಕ್ಕೆ ಇರುವ ಬೇಡಿಕೆಯನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ.

4ನೇ ಪುಟ ನೋಡಿ



ಕಲೆ: ಭಾವು ಪತ್ತಾರ್

2023–24ರಲ್ಲಿ ವಿ.ವಿಗಳಿಗೆ ಸರ್ಕಾರ ನೀಡಿದ ಅನುದಾನ (ಕೋಟಿಗಳಲ್ಲಿ)

₹25.45	ಹೊಸ 7 ವಿ.ವಿಗಳಿಗೆ
₹864.34	ಹಳೆಯ ವಿ.ವಿಗಳಿಗೆ
₹2.13	ಪರಿಶಿಷ್ಟ ಜಾತಿ ಉಪಯೋಜನೆ
₹1.92	ಗಿರಿಜನ ಉಪ ಯೋಜನೆ
₹2,674	ವಿ.ವಿಗಳು ಕೇಳಿದ ನೆರವು



ಅಂತಿಮ ನಮನ

ಬೆಂಗಳೂರು ಬಳಿಯ ನೆಲಮಂಗಲದ ಅಂಬೇಡ್ಕರ್ ಮೈದಾನದಲ್ಲಿ ಶನಿವಾರ ಸಾರ್ವಜನಿಕರು ಹಿರಿಯ ನಟಿ ಲೀಲಾವತಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು ಪ್ರಜಾವಾಣಿ ಚಿತ್ರ : ಕಿಶೋರ್ ಕುಮಾರ್ ಬೋಳಾರ್ 6

ವಿವಿಧೆಡೆ ಎನ್‌ಐಎ ದಾಳಿ 15 ಶಂಕಿತ ಉಗ್ರರ ಬಂಧನ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮತ್ತು ಕರ್ನಾಟಕದ 44 ಸ್ಥಳಗಳಲ್ಲಿ ಶನಿವಾರ ದಾಳಿ ನಡೆಸಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಐಎಸ್ ಉಗ್ರ ಸಂಘಟನೆಯ 15 ಮಂದಿ ಕಾರ್ಯಕರ್ತರನ್ನು ಬಂಧಿಸಿದ್ದಾರೆ.

ಐಎಸ್ ಘಟಕವೊಂದರ ನಾಯಕ ಸಕೀಬ್ ನಚನ್ ಕೂಡ ಬಂಧಿತರಲ್ಲಿ ಸೇರಿದ್ದಾನೆ. ಈತ ಹೊಸದಾಗಿ ಸಂಘಟನೆ ಸೇರಿದವರಿಗೆ, ಸಂಘಟನೆಗೆ ನಿಷ್ಠವಾಗಿ ಇರುತ್ತೇವೆ ಎಂಬ ಪ್ರಮಾಣ ಮಾಡಿಸುತ್ತಿದ್ದ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

5ನೇ ಪುಟ ನೋಡಿ

ಎಲ್ಲೆಲ್ಲಿ ದಾಳಿ?

ಮಹಾರಾಷ್ಟ್ರದ ಠಾಣೆಯ ಪಡಗಾ–ಬೊರಿವಲಿ, ಪುಣೆ ಹಾಗೂ ಕರ್ನಾಟಕದ ಬೆಂಗಳೂರು ಸೇರಿ 44 ಸ್ಥಳಗಳಲ್ಲಿ

ಏನೇನು ವಶಕ್ಕೆ?

ಭಾರಿ ಪ್ರಮಾಣದಲ್ಲಿ ನಗದು, ಶಸ್ತ್ರಾಸ್ತ್ರ, ಹರಿತವಾದ ಆಯುಧಗಳು, ಮಹತ್ವದ ಕೆಲವು ದಾಖಲೆಗಳು, ಸ್ಮಾರ್ಟ್‌ಫೋನ್ ಮತ್ತು ಇತರ ಕೆಲವು ಡಿಜಿಟಲ್ ಉಪಕರಣಗಳನ್ನು ದಾಳಿ ಸಂದರ್ಭದಲ್ಲಿ ವಶಕ್ಕೆ ಪಡೆಯಲಾಗಿದೆ

ಆರೋಪವೇನು?

‘ಬಂಧಿತರೆಲ್ಲರೂ ಐಎಸ್‌ನ ಮಹಾರಾಷ್ಟ್ರ ಘಟಕದ ಸದಸ್ಯರು. ಇವರು ಪಡಗಾ–ಬೊರಿವಲಿಯಿಂದ ಕಾರ್ಯಾಚರಣೆ ನಡೆಸುತ್ತಿದ್ದರು. ದೇಶದಾದ್ಯಂತ ಹಿಂಸಾತ್ಮಕ ಕೃತ್ಯಗಳನ್ನು ನಡೆಸಲು, ಭಯೋತ್ಪಾದನೆಯನ್ನು ಹರಡಲು ಅಲ್ಲಿಂದ ಸಂಚು ರೂಪಿಸುತ್ತಿದ್ದರು’ ಎಂದು ಎನ್‌ಐಎ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂದುವರಿದ ಎಣಿಕೆ • 40 ಯಂತ್ರಗಳ ಬಳಕೆ

ಜಪ್ತಿ ಹಣ ₹290 ಕೋಟಿಗೆ

ನವದೆಹಲಿ/ಭುವನೇಶ್ವರ (ಪಿಟಿಐ): ತೆರಿಗೆ ವಂಚನೆ ಪ್ರಕರಣ ಸಂಬಂಧ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಒಡಿಶಾದ ಭುವನೇಶ್ವರದಲ್ಲಿ ಜಪ್ತಿ ಮಾಡಿರುವ ಹಣ ₹290 ಕೋಟಿಗೆ ಏರುವ ಸಾಧ್ಯತೆಯಿದೆ. ಎಣಿಕೆ ನಡೆಯುತ್ತಿದೆ.

ಅಧಿಕಾರಿಗಳ ಪ್ರಕಾರ, ಒಂದು ನಿರ್ದಿಷ್ಟ ಕಾರ್ಯಾಚರಣೆಯಲ್ಲಿ ಜಪ್ತಿ ಮಾಡಿರುವ ಅತ್ಯಧಿಕ ಮೊತ್ತದ ‘ಕಪ್ಪುಹಣ’ ಇದಾಗಿದೆ. ಭುವನೇಶ್ವರದ ಬೌದ್ ಡಿಸ್ಟಿಲರಿ ಪ್ರೈವೇಟ್ ಲಿಮಿಟೆಡ್‌ನ ವಿವಿಧ ಕಚೇರಿ ಮೇಲೆ ಡಿ.6ರಂದು ದಾಳಿ ನಡೆದಿತ್ತು.

ಹಣ ಎಣಿಕೆ ಕಾರ್ಯ ಶನಿವಾರವೂ ಮುಂದುವರಿಯಿತು. ಎಣಿಕೆ ಕಾರ್ಯಕ್ಕಾಗಿ 40 ದೊಡ್ಡ ಮತ್ತು ಸಣ್ಣ ಗಾತ್ರದ ಎಣಿಕೆ ಯಂತ್ರಗಳ ನೆರವು ಪಡೆದಿದ್ದು, ಇಲಾಖೆ ಮತ್ತು ಬ್ಯಾಂಕ್‌ಗಳ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಜಪ್ತಿಯಾದ ಮೊತ್ತವನ್ನು ಎಣಿಕೆ ಬಳಿಕ ಬ್ಯಾಂಕ್‌ಗಳಿಗೆ ಸಾಗಣೆ ಮಾಡಲು ಹೆಚ್ಚಿನ ವಾಹನಗಳನ್ನು ಒದಗಿಸುವಂತೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮನವಿ ಮಾಡಿದ್ದಾರೆ. ಬೊಲಾಂಗಿರ್‌ನಲ್ಲಿರುವ ಎಸ್‌ಬಿಐನ ಕೇಂದ್ರ ಶಾಖೆಗೆ ಜಮೆ ಮಾಡಲು ಅಧಿಕಾರಿಗಳು ಶುಕ್ರವಾರ ಒಟ್ಟು 156 ಚೀಲದಲ್ಲಿ ಹಣವನ್ನು ಒಯ್ದರು.



ಮತ್ತೊಂದು ಡಿಸ್ಟಿಲರಿ ಮೇಲೆ ದಾಳಿ: ₹50 ಕೋಟಿ ಜಪ್ತಿ

‘ದಾಖಲೆರಹಿತ’ ಮೊತ್ತದ ಬೆನ್ನತ್ತಿರುವ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶನಿವಾರ ಇಲ್ಲಿನ ಮತ್ತೊಂದು ಡಿಸ್ಟಿಲರಿ ಸಮೂಹದ ಮೇಲೆ ದಾಳಿ ಮಾಡಿದ್ದು, 20 ಚೀಲದಲ್ಲಿ ದೊಡ್ಡ ಮೊತ್ತ ಜಪ್ತಿ ಮಾಡಿದೆ.

ಬೊಲಾಂಗಿರ್ ಜಿಲ್ಲೆಯ ಸುದಾಪರ ವಲಯದಲ್ಲಿರುವ ದೇಶಿ ಮದ್ಯ ತಯಾರಿಕಾ ಕಂಪನಿಯ ಕಚೇರಿ ಮೇಲೆ ದಾಳಿ ನಡೆದಿದೆ. ಜಪ್ತಿ ಮಾಡಿದ ಹಣದ ಮೊತ್ತ ಅಂದಾಜು ₹ 50 ಕೋಟಿ ಇರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿ ನಡೆಸಿದ್ದ ಸ್ಥಳಗಳಲ್ಲಿ ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯ, ಜಾರ್ಖಂಡ್‌ನ ಧೀರಜ್ ಪ್ರಸಾದ್ ಸಾಹು ಅವರಿಗೆ ಸೇರಿದ ಸ್ಥಳವೂ ಇದೆ ಎಂದು ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

₹44 ಸಾವಿರ ಕೋಟಿ ಜಿಎಸ್‌ಟಿ ವಂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ತೆರಿಗೆ ಅಧಿಕಾರಿಗಳು ರಾಜ್ಯದ ಅಧಿಕಾರಿಗಳ ಸಹಕಾರದಲ್ಲಿ 2019ರ ಏಪ್ರಿಲ್‌ನಿಂದ ಈ ವರ್ಷದ ಅಕ್ಟೋಬರ್‌ವರೆಗೆ ಕರ್ನಾಟಕದಲ್ಲಿ ₹44,170 ಕೋಟಿ ಜಿಎಸ್‌ಟಿ ವಂಚನೆಯನ್ನು ಪತ್ತೆ ಹಚ್ಚಿದ್ದಾರೆ.

ವಿವಿಧ ರಾಜ್ಯಗಳಲ್ಲಿ ಜಿಎಸ್‌ಟಿ ವಂಚನೆ ಪತ್ತೆ ಬಗ್ಗೆ ಕೇಂದ್ರ ಹಣಕಾಸು ಸಚಿವರು ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದಾರೆ. ಈ ಅವಧಿಯಲ್ಲಿ ರಾಜ್ಯದಲ್ಲಿ 30 ಆರೋಪಿಗಳನ್ನು ಬಂಧಿಸಿ ₹9,187 ಕೋಟಿ ವಸೂಲಿ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ. ಈ ಪ್ರಕಾರ, ವಸೂಲಾತಿ ಪ್ರಮಾಣವು ಶೇ 20ರಷ್ಟು ಇದೆ.

ದೇಶದಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ವಂಚನೆಯಲ್ಲೂ ಈ ಎರಡು ರಾಜ್ಯಗಳು ಅಗ್ರಪಟ್ಟಿಯಲ್ಲಿವೆ. ನಂತರದ ಸ್ಥಾನದಲ್ಲಿ ಗುಜರಾತ್, ಹರಿಯಾಣ, ಪಶ್ಚಿಮ ಬಂಗಾಳ ಇವೆ.

ಬೆಂಗಳೂರಿನಲ್ಲಿ ಐಐಟಿ ಪದವೀಧರ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಷೇಧಿತ ಭಯೋತ್ಪಾದನಾ ಸಂಘಟನೆ ಐಎಸ್ (ಇಸ್ಲಾಮಿಕ್ ಸ್ಟೇಟ್) ಜೊತೆ ನಂಟು ಹೊಂದಿ, ಸಂಘಟನೆ ಸೇರುವಂತೆ ಯುವಕರನ್ನು ಪ್ರಚೋದಿಸು-ತ್ತಿದ್ದ ಆರೋಪದಲ್ಲಿ ಅಲಿ ಹಫೀಜ್ ಅಲಿಯಾಸ್ ಅಲಿ ಅಬ್ಬಾಸ್‌ನನ್ನು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು ಶನಿವಾರ ವಶಕ್ಕೆ ಪಡೆದಿದ್ದಾರೆ. ವೈದ್ಯೆ ಆಗಿರುವ ಆತನ ಪತ್ನಿಯನ್ನೂ ವಿಚಾರಣೆ ನಡೆಸುತ್ತಿದ್ದಾರೆ.


‘ಮುಂಬೈ ಐಐಟಿ ಪದವೀಧರನಾದ ಅಲಿ ಹಫೀಜ್, 2019ರಲ್ಲಿ ಪತ್ನಿ ಹಾಗೂ ಮೂವರು ಮಕ್ಕಳ ಜೊತೆ ಬೆಂಗಳೂರಿಗೆ ಬಂದಿದ್ದ. ಪುಲಿಕೇಶಿನಗರ ಠಾಣೆ ವ್ಯಾಪ್ತಿಯ ಮೋರ್ ರಸ್ತೆಯ ಮನೆಯೊಂದರಲ್ಲಿ ವಾಸವಿದ್ದ. ತನ್ನ ಹೆಸರನ್ನು ಅಲಿ ಅಬ್ಬಾಸ್ ಎಂಬುದಾಗಿ ಬದಲಾಯಿಸಿಕೊಂಡಿದ್ದ’ ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ

ಜೆಡಿಎಸ್‌ನಿಂದ ಇಬ್ರಾಹಿಂ ಸಿ.ಕೆ. ನಾಣು ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಅಮಾನತು-ಗೊಂಡಿದ್ದ ಸಿ.ಎಂ. ಇಬ್ರಾಹಿಂ ಹಾಗೂ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಸಿ.ಕೆ. ನಾಣು ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.



ಇಬ್ರಾಹಿಂ

ಶನಿವಾರ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ನಂತರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಉಚ್ಚಾಟನೆ ನಿರ್ಧಾರ ಪ್ರಕಟಿಸಿದರು.

‘ಪಕ್ಷದ ಹಿತಕ್ಕಾಗಿ ಬಿಜೆಪಿ ಜತೆಗಿನ ಮೈತ್ರಿ ನಿರ್ಧಾರವನ್ನು ಅವರಿಬ್ಬರ ಸಮ್ಮುಖದಲ್ಲಿಯೇ ಕೈಗೊಳ್ಳಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಈ ಇಬ್ಬರೂ ಮೈತ್ರಿಯನ್ನು ವಿರೋಧಿಸಿದರು. ಪಕ್ಷ ಹಾಗೂ ಪಕ್ಷದ ನಾಯಕರ ವಿರುದ್ಧ ಅಪಪ್ರಚಾರ ನಡೆಸಿದರು. ಪಕ್ಷ ವಿರೋಧಿ ಚಟುವಟಿಕೆಯ ಕಾರಣಕ್ಕೆ ಉಚ್ಚಾಟನೆಯ ನಿರ್ಧಾರ ತೆಗೆದು-ಕೊಳ್ಳಲಾಯಿತು‘ ಎಂದು ಅವರು ವಿವರಿಸಿದರು.

ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಎಚ್.ಡಿ. ಕುಮಾರಸ್ವಾಮಿ ಹಾಗೂ ವಿವಿಧ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ವಿಧಾನ ಪರಿಷತ್ ಸದಸ್ಯ ಬಿ.ಎಂ. ಫಾರೂಕ್, ಶಾಸಕ ಎಚ್.ಡಿ. ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ, ಉನ್ನತ ನಾಯಕರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್, ಎಚ್.ಕೆ. ಕುಮಾರಸ್ವಾಮಿ, ವೆಂಕಟರಾವ್ ನಾಡಗೌಡ, ಲೀಲಾದೇವಿ ಆರ್. ಪ್ರಸಾದ್ ಉಪಸ್ಥಿತರಿದ್ದರು.

ಡ್ಯಾನಿಶ್ ಅಲಿ ಅಮಾನತು

ನವದೆಹಲಿ: ಪಕ್ಷ ವಿರೋಧಿ ಚಟುವಟಿಕೆಯ ಆರೋಪದ ಮೇರೆಗೆ ಸಂಸದ ಡ್ಯಾನಿಶ್ ಅಲಿ ಅವರನ್ನು ಬಹುಜನ ಸಮಾಜ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಗೊಳಿಸಲಾಗಿದೆ. 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆರೆಗೆ ಕಾರು ಬಿದ್ದು ನಾಲ್ವರು ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಹೊರವಲಯ ರಾಷ್ಟ್ರೀಯ ಹೆದ್ದಾರಿ 44ರ ಬಳಿ ಇರುವ ಅಮಾನಿ ಗೋಪಾಲಕೃಷ್ಣ ಕೆರೆಗೆ ಶನಿವಾರ ರಾತ್ರಿ ಕಾರು ಬಿದ್ದು, ಅದರಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ.

ಕ್ರೇನ್ ಸಹಾಯದಿಂದ ಕಾರನ್ನು ಕೆರೆಯಿಂದ ಮೇಲೆತ್ತಲಾಗಿದೆ. ಕಾರಿನಲ್ಲಿದ್ದ ಎಲ್ಲರೂ ಒಳಗಡೆಯೇ ಮೃತಪಟ್ಟಿದ್ದಾರೆ. ಇವರೆಲ್ಲ ಬೆಂಗಳೂರಿನವರು ಎನ್ನಲಾಗಿದ್ದು, ಗುರುತು ಪತ್ತೆ ಆಗಿಲ್ಲ.

ಕಾರು ಬೆಂಗಳೂರಿನಿಂದ ಬಾಗೇಪಲ್ಲಿಯತ್ತ ಹೊರಟಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಶವಗಳನ್ನು ಜಿಲ್ಲಾ ಆಸ್ಪತ್ರೆಯಲ್ಲಿ ಇರಿಸಲಾಗಿದೆ.

ಇಂದು–ನಾಳೆ ನಮ್ಮ ಜಾತ್ರೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಭಾನುವಾರ ಮತ್ತು ಸೋಮವಾರ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ 'ನಮ್ಮ ಜಾತ್ರೆ' ಹಮ್ಮಿಕೊಂಡಿದೆ.

ಶನಿವಾರ ಮತ್ತು ಭಾನುವಾರ ನಡೆಯಬೇಕಿದ್ದ ಈ ಜಾತ್ರೆಯನ್ನು ಚಲನ ಚಿತ್ರ ನಟಿ ಲೀಲಾವತಿ ಅವರ ನಿಧನ ದಿಂದ ಒಂದು ದಿನ ಮುಂದೂಡ ಲಾಗಿತ್ತು. 'ಅನ್ ಬಾಕ್ಸಿಂಗ್ ಬಿಎಲ್‌ಆರ್ ಹಬ್ಬ'ದ ಅಡಿ ಈ ಜಾತ್ರೆ ಆಯೋಜಿಸಲಾಗುತ್ತಿದೆ. ಭಾನುವಾರ ಬೆಳಿಗ್ಗೆ 9.30ಕ್ಕೆ ವಿಧಾನಸೌಧದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಕಲಾ ತಂಡಗಳ ಮೆರವಣಿಗೆ ನಡೆಯಲಿದ್ದು, ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಆನೆ, ರಥ, ಹೂವಿನ ಪಲ್ಲಕ್ಕಿ ಹಾಗೂ ಎತ್ತಿನಗಾಡಿಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಎರಡು ದಿನಗಳ ಜಾತ್ರೆ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದೆ ಎಂದು ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ತಿಳಿಸಿದ್ದಾರೆ.

ಎರಡು ದಿನಗಳ ಈ ಜಾತ್ರೆಯು ಹಲವು ವೈಶಿಷ್ಟ್ಯ ಒಳಗೊಂಡಿದೆ. ನೈಜ ಜಾನಪದ ಸಂಪ್ರದಾಯವನ್ನು ಈ ಜಾತ್ರೆಯಲ್ಲಿ ಅನುಭವಿಸಬಹುದಾಗಿದೆ. ಎರಡು ನೂರು ಕಲಾವಿದರಿಂದ ಜಾನದಪ ನೃತ್ಯ ಪ್ರದರ್ಶನ ನಡೆಯಲಿದೆ. ಕರಕುಶಲ ಮಳಿಗೆಗಳು ಜಾತ್ರೆಯಲ್ಲಿ ಇರಲಿದ್ದು, ತಯಾರಕರಿಂದ ನೇರವಾಗಿ ಕರಕುಶಲ ವಸ್ತುಗಳನ್ನು ಖರೀದಿಸಬಹುದು. ಉಚಿತವಾಗಿ ಎತ್ತಿನ ಗಾಡಿಯ ಸವಾರಿಯನ್ನೂ ಅನುಭವಿಸಬಹುದು. ಸ್ಥಳೀಯ ಆಹಾರ ವೈವಿಧ್ಯತೆಯನ್ನು ಆಸ್ವಾದಿಸಬಹುದು ಎಂದು ಹೇಳಿದ್ದಾರೆ.

ಸಂಜೆ 6 ಗಂಟೆಯಿಂದ ಸಂಸ ಬಯಲು ರಂಗಮಂದಿರದಲ್ಲಿ ಬೊಂಬೆಯಾಟ, ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ ಪ್ರದರ್ಶನಗಳು ನಡೆಯಲಿವೆ. ನಮ್ಮ ಹಳ್ಳಿಜೀವನ, ಆಚರಣೆಯ ಈ ಜಾತ್ರೆಗೆ ಉಚಿತ ಪ್ರವೇಶವಿದೆ.

'ಭೂಮಿಕಾ ಕ್ಲಬ್'ನ 13ನೇ ಆವೃತ್ತಿಯಲ್ಲಿ ಅಡುಗೆ ಪ್ರಾತ್ಯಕ್ಷಿಕೆ • ಹಾಡು, ಕುಣಿತದಿಂದ ಪುಳಕಿತರಾದ ಮಹಿಳೆಯರು

ಚಳಿಗಾಲದಲ್ಲಿ ಆರೋಗ್ಯ ಕಾಪಾಡಲು ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಳಿಗಾಲದಲ್ಲಿ ಹೆಚ್ಚುವ ಅಲರ್ಜಿ, ಶೀತ, ಕೆಮ್ಮುಗಳ ಬಗ್ಗೆ ಅರಿವು, ಅಕ್ಕಿ ರೊಟ್ಟಿಯ ಪ್ರಾತ್ಯಕ್ಷಿಕೆಗಳ ನಡುವೆ ಹಾಡು, ಕುಣಿತಗಳು ಮಹಿಳೆಯರನ್ನು ಪುಳಕಗೊಳಿಸಿದವು.

ವಿಜಯನಗರದ ಗೋವಿಂದರಾಜನಗರ ವಾರ್ಡ್‌ನಲ್ಲಿರುವ ವೈಟ್ ಪೆಟಲ್ಸ್‌ನಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 13ನೇ ಆವೃತ್ತಿಯ ಕಾರ್ಯಕ್ರಮ ಇದಕ್ಕೆ ವೇದಿಕೆಯಾಯಿತು.

'ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್', 'ಮಣಿಪಾಲ್ ಆಸ್ಪತ್ರೆಗಳ ಸಮೂಹ' ಹಾಗೂ 'ಸ್ಟಾರ್ ಬಜಾರ್' ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ನಟಿ ಗಾನವಿ ಲಕ್ಷ್ಮಣ್ ಚಾಲನೆ ನೀಡಿದರು.

'ಮಹಿಳೆಯರು ಎಲ್ಲ ವಿಷಯಗಳಲ್ಲಿಯೂ ಸ್ವಾತಂತ್ರ್ಯ ಪಡೆಯಬೇಕು. ದ್ವೇಷ, ಅಸೂಯೆ, ಯಾಂತ್ರಿಕ ಬದುಕುಗಳಿಂದಲೂ ಮುಕ್ತರಾಗಬೇಕು' ಎಂದು ಸಲಹೆ ನೀಡಿದರು.

'ಮಹಿಳೆಗೆ ಆತ್ಮಸ್ಥೈರ್ಯ ಇರಬೇಕು. ಯಾರು ಏನು ಅನ್ನುತ್ತಾರೆ ಎಂಬುದರ ಬಗ್ಗೆ ಚಿಂತಿಸದೇ ನಮ್ಮ ಕೆಲಸವನ್ನು ನಾವು ಮಾಡಬೇಕು. ಜೀವನ ಪೂರ್ತಿ ಬೇರೆಯವರ ಸೇವೆ ಮಾಡುತ್ತಾ ಇರುತ್ತೇವೆ. ನಮ್ಮ ಬಗ್ಗೆ ನಾವು ಕಾಳಜಿ ವಹಿಸುವುದನ್ನು ರೂಢಿಸಿಕೊಳ್ಳಬೇಕು. ಲೋಕವನ್ನು ಕಣ್ಣುಬಿಟ್ಟು ನೋಡುವುದನ್ನು ಕಲಿತರೆ ಜೀವನ ಸುಂದರವಾಗಿರುತ್ತದೆ. ಕನಸು ಕಾಣುವುದು ನಿರಂತರವಾಗಿರಬೇಕು' ಎಂದು ತಿಳಿಸಿದರು.

'ನಾನು ನಟನಾ ಕ್ಷೇತ್ರಕ್ಕೆ ಬರುತ್ತೇನೆ ಎಂದು ಅಂದುಕೊಂಡಿರಲಿಲ್ಲ. ಕ್ರೀಡೆ ಮತ್ತು ನೃತ್ಯದಲ್ಲಿ ತೊಡಗಿಸಿಕೊಂಡಿದ್ದೆ. ನೃತ್ಯವೇ ನನ್ನನ್ನು ನಟಿಯನ್ನಾಗಿ ಮಾಡಿತು' ಎಂದು ತಿಳಿಸಿದರು.

ಚಳಿಗಾಲದ ಅಲರ್ಜಿಗಳ ಬಗ್ಗೆ ಮಿಲ್ಲರ್ಸ್ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಶ್ವಾಸಕೋಶ ವಿಜ್ಞಾನದ ಸಲಹೆಗಾರ ಡಾ. ವಸುನೇತ್ರ ಕಾಸರಗೋಡು ಅರಿವು ಮೂಡಿಸಿದರು. ಚಳಿಗಾಲದಲ್ಲಿ ತಣ್ಣಗಿನ ಗಾಳಿ ಕೆಳಗಿದ್ದು, ಬಿಸಿಗಾಳಿ ಮೇಲಿರುತ್ತದೆ. ಬೆಂಗಳೂರಿನಂಥ ನಗರದಲ್ಲಿ ಹೊಗೆಯೂ ಅದರೊಂದಿಗೆ ಸೇರಿಕೊಂಡಿರುತ್ತದೆ. ಇವೆಲ್ಲ ಆರೋಗ್ಯದ ಸಮಸ್ಯೆ ಉಂಟು ಮಾಡುತ್ತದೆ ಎಂದು ಮಾಹಿತಿ ನೀಡಿದರು.

ದೂಳು ಬಹುತೇಕರಿಗೆ ಅಲರ್ಜಿ ಉಂಟು ಮಾಡುತ್ತದೆ. ಕೆಲವರಿಗೆ ಕೆಲವು ವಸ್ತುಗಳು, ತರಕಾರಿಗಳು ಅಲರ್ಜಿಯಾಗುತ್ತವೆ. ಎಲ್ಲರಿಗೂ ಒಂದೇ ರೀತಿಯ ವಸ್ತುಗಳಿಂದ ಅಲರ್ಜಿಯಾಗುತ್ತದೆ ಎಂದು ಸಾರ್ವಜನಿಕಗೊಳಿಸಲು ಆಗುವುದಿಲ್ಲ. ಭಿನ್ನ ಭಿನ್ನ ಕಾರಣಗಳಿರುತ್ತವೆ. ಅಲರ್ಜಿ ಶ್ವಾಸಕೋಶದ ನಾಳಗಳಿಗೆ ಹೋದರೆ ಅಸ್ತಮವಾಗುತ್ತದೆ ಎಂದು ವಿವರಿಸಿದರು.

ಚಳಿಗಾಲದಲ್ಲಿ ಚರ್ಮ ಮತ್ತು ಕೂದಲ ರಕ್ಷಣೆ ಬಗ್ಗೆ ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯ ಚರ್ಮರೋಗ ತಜ್ಞೆ ಡಾ. ರಿತಿಕಾ ಷಣ್ಮುಗಂ ಮಾಹಿತಿ ನೀಡಿ, 'ಚಳಿಗಾಲದಲ್ಲಿ ಚರ್ಮದ ಸಮಸ್ಯೆ ಅಧಿಕಗೊಳ್ಳುತ್ತದೆ. ಚಳಿ ಇದೆ ಎಂದು ಅಧಿಕ ಬಿಸಿಯಾದ ನೀರನ್ನು ಬಳಸಬಾರದು. ಕೊಬ್ಬರಿ ಎಣ್ಣೆಯನ್ನಷ್ಟೇ ಹಚ್ಚಿಕೊಳ್ಳಬೇಕು. ಚರ್ಮದ ಸಮಸ್ಯೆ ಇದ್ದವರ ಬೆಡ್, ಬಟ್ಟೆಗಳನ್ನು ಬೇರೆಯವರು ಬಳಸದೇ ಎಚ್ಚರವಹಿಸಬೇಕು. ಸೊಳ್ಳೆ ಪರದೆ ಬಳಸಬೇಕು' ಎಂದು ಸಲಹೆ ನೀಡಿದರು.

ಆರೋಗ್ಯಕರ ಆಹಾರ ತಯಾರಿಸುವುದರ ಬಗ್ಗೆ ಪೂಜಾ ಪಾಟೀಲ ಪ್ರಾತ್ಯಕ್ಷಿಕೆಯೊಂದಿಗೆ ವಿವರಗಳನ್ನು ನೀಡಿದರು. ಅಕ್ಕಿರೊಟ್ಟಿ ತಯಾರಿಸಿ ನೆರೆದವರ ಬಾಯಲ್ಲಿ ನೀರೂರಿಸಿದರು. ದಿವ್ಯಾ ರಾಮಚಂದ್ರ ಅವರ ಕಂಚಿನ ಕಂಠದ ಸಂಗೀತ ಕಾರ್ಯಕ್ರಮ ಹುಚ್ಚೆಬ್ಬಿಸಿತು. ಮಹಿಳೆಯರು ಕುಣಿದು ಸಂಭ್ರಮಿಸಿದರು. ನಟಿ ಕೃತಿ ಭಟ್ ಸ್ಫೂರ್ತಿ ತುಂಬಿದರು. ನಿರೂಪಕಿ ನಿಖಿತಾ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು. ಗೆದ್ದವರಿಗೆ ಅಚ್ಚರಿಯ ಉಡುಗೊರೆಗಳನ್ನು ನೀಡಲಾಯಿತು.



ನಟಿ ಗಾನವಿ ಲಕ್ಷ್ಮಣ್ ಮಾತನಾಡಿದರು



ವಿಜಯನಗರದ ಗೋವಿಂದರಾಜನಗರ ವಾರ್ಡ್‌ನಲ್ಲಿರುವ ವೈಟ್ ಪೆಟಲ್ಸ್‌ನಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 13ನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಕಲಾವಿದೆ ದಿವ್ಯಾ ರಾಮಚಂದ್ರ ಅವರ ಹಾಡಿಗೆ ಪ್ರೇಕ್ಷಕರು ಹೆಜ್ಜೆ ಹಾಕಿದರು



ಆರೋಗ್ಯಕರ ಆಹಾರ ತಯಾರಿಸುವುದರ ಬಗ್ಗೆ ಪೂಜಾ ಪಾಟೀಲ ಪ್ರಾತ್ಯಕ್ಷಿಕೆ ನೀಡಿದರು. ನಿಖಿತಾ ನಿರೂಪಿಸಿದರು

Freedom Healthy Cooking Oils presents ಭೂಮಿಕಾ ಕ್ಲಬ್ powered by manipalhospitals LIFE'S ON

ಸ್ಪರ್ಧಾತ್ಮಕ ಪರೀಕ್ಷೆಗೆ ಮಾರ್ಗದರ್ಶಿ 'ಸ್ಪರ್ಧಾವಾಣಿ'

ಕನ್ನಡ ನೆಲದಲ್ಲಿ ಹುಟ್ಟಿದವರು ಉನ್ನತ ಅಧಿಕಾರಿಗಳಾಗುವ ಕನಸನ್ನು 'ಪ್ರಜಾವಾಣಿ' ಬಿತ್ತುತ್ತಾ ಬಂದಿದೆ. ಈಗ ಸುದ್ದಿಯನ್ನು ತೆಗೆದು ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾದ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡಲು 'ಸ್ಪರ್ಧಾವಾಣಿ' ಆರಂಭಿಸಲಾಗಿದೆ ಎಂದು 'ಪ್ರಜಾವಾಣಿ' ಮುಖ್ಯ ಉಪಸಂಪಾದಕಿ ರಶ್ಮಿ ಎಸ್. ಹೇಳಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಕನ್ನಡಿಗರು ಈಗಲೂ 'ಪ್ರಜಾವಾಣಿ'ಯ ಕೊಡುಗೆಯನ್ನು ನೆನಪು ಮಾಡಿಕೊಳ್ಳುತ್ತಾರೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾಗಬೇಕು ಎಂಬುದು 'ಸ್ಪರ್ಧಾವಾಣಿ'ಯ ಗುರಿ ಎಂದು ತಿಳಿಸಿದರು.



ಚಳಿಗಾಲದ ಅಲರ್ಜಿಗಳ ಬಗ್ಗೆ ಮಿಲ್ಲರ್ಸ್ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಶ್ವಾಸಕೋಶ ವಿಜ್ಞಾನದ ಸಲಹೆಗಾರ ಡಾ. ವಸುನೇತ್ರ ಕಾಸರಗೋಡು ಮಾಹಿತಿ ನೀಡಿದರು



ಚಳಿಗಾಲದಲ್ಲಿ ಚರ್ಮ ಮತ್ತು ಕೂದಲ ರಕ್ಷಣೆ ಬಗ್ಗೆ ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯ ಚರ್ಮರೋಗ ತಜ್ಞೆ ಡಾ. ರಿತಿಕಾ ಷಣ್ಮುಗಂ ಮಾಹಿತಿ ನೀಡಿದರು

ಖರ್ಗೆ, ಸೋನಿಯಾ, ರಾಹುಲ್ ಗಾಂಧಿ ರಾಜೀನಾಮೆಗೆ ಆಗ್ರಹ

ಬೆಂಗಳೂರು: 'ಜಾರ್ಖಂಡ್‌ನ ರಾಜ್ಯಸಭಾ ಸದಸ್ಯ ಧೀರಜ್ ಸಾಹು ಮನೆಯಲ್ಲಿ ₹ 300 ಕೋಟಿಗೂ ಹೆಚ್ಚು ಮೊತ್ತದ ನಗದು ಪತ್ತೆಯಾಗಿರುವ ಪ್ರಕರಣದ ನೈತಿಕ ಹೊಣೆ ಹೊತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಲಿ' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ನಗದು ಪತ್ತೆ ಪ್ರಕರಣದ ಕುರಿತು ಸಮಗ್ರ ತನಿಖೆಗೆ ಆಗ್ರಹಿಸಿ ರಾಜ್ಯದಾದ್ಯಂತ ಬಿಜೆಪಿ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಗುವುದು' ಎಂದರು.



ಕನ್ನಡ ಪುಸ್ತಕಗಳನ್ನು ಬಿಡುಗಡೆ ಮಾಡಿದ ಸುಧಾಮೂರ್ತಿ ಅವರು ಪುಸ್ತಕಗಳನ್ನು ವೀಕ್ಷಿಸಿದರು. (ಎಡದಿಂದ) ಸಪ್ನ ಪುಸ್ತಕ ಮಳಿಗೆಯ ಆರ್. ದೊಡ್ಡೇಗೌಡ, ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಸಾಹಿತಿ ಕೆ. ಮರುಳಸಿದ್ದಪ್ಪ, ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ, ಸಿನಿಮಾ ನಿರ್ದೇಶಕ ಯೋಗರಾಜ್ ಭಟ್, ಸಪ್ನ ಪುಸ್ತಕ ಮಳಿಗೆ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಇದ್ದರು — ಪ್ರಜಾವಾಣಿ ಚಿತ್ರ

ಸಪ್ನ ಪುಸ್ತಕ ಮಳಿಗೆಯಿಂದ 68 ಕನ್ನಡ ಪುಸ್ತಕ ಬಿಡುಗಡೆ

'ಕನ್ನಡ ಮಾತನಾಡಿ, ಗರ್ವಪಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿನ ಯುವ ಜನರು ಕನ್ನಡದಲ್ಲಿ ಹೆಚ್ಚಾಗಿ ಮಾತನಾಡುವುದನ್ನು ರೂಢಿಸಿಕೊಳ್ಳಬೇಕು. ಎರಡು ಸಾವಿರ ವರ್ಷದಷ್ಟು ಇತಿಹಾಸವಿರುವ ನಮ್ಮ ಕನ್ನಡ ಭಾಷೆ ಬಗ್ಗೆ ನಾವೆಲ್ಲರೂ ಗರ್ವ ಪಡಬೇಕು' ಎಂದು ಮೂರ್ತಿ ಫೌಂಡೇಷನ್ ಅಧ್ಯಕ್ಷೆ ಸುಧಾಮೂರ್ತಿ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಸಪ್ನ ಪುಸ್ತಕ ಮಳಿಗೆ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 68 ಕನ್ನಡ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಾವು ಎಷ್ಟೇ ಭಾಷೆ ಕಲಿತರೂ ಕನ್ನಡವೇ ನಮ್ಮ ತಾಯಿ ಭಾಷೆ. ಈ ತಾಯಿ ಭಾಷೆಯನ್ನು ಪ್ರೀತಿಸಬೇಕು. ಲೇಖಕರು, ಸಾಹಿತಿಗಳು ತಮ್ಮ ಜೀವನವನ್ನೇ ಕನ್ನಡಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ಕನ್ನಡಿಗರು ಸಾಹಿತ್ಯ ಕೃತಿಗಳನ್ನು ಕೊಂಡು ಓದಬೇಕು' ಎಂದರು.

ಪುಸ್ತಕ ಪರಿಚಯ ಮಾಡಿಕೊಟ್ಟ ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, 'ಶಿಕ್ಷಣ, ಬಣ್ಣದ ಲೋಕ, ಹಾಸ್ಯ ಬರಹಗಳು, ವ್ಯಕ್ತಿತ್ವ ವಿಕಸನ, ಕೃಷಿ, ವಿಜ್ಞಾನ, ನಾಟಕ, ಜಾನಪದ, ಬುಡಕಟ್ಟು ಜನಾಂಗದ ವಿಚಾರಗಳ ಕುರಿತ 68 ಪುಸ್ತಕಗಳು ವೈವಿಧ್ಯತೆಯಿಂದ ಕೂಡಿವೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಕೆ. ಮರುಳಸಿದ್ದಪ್ಪ, 'ಪುಸ್ತಕಗಳು ಒಂದು ಭಾಷೆಯ ದೊಡ್ಡ ಸಾಧನ. ಏಕಕಾಲದಲ್ಲಿ 68 ಪುಸ್ತಕಗಳನ್ನು ಹೊರತರುವುದು ಸುಲಭವಲ್ಲ. ಸಪ್ನ ಪುಸ್ತಕ ಮಳಿಗೆ ಈ ಸಾಧನೆ ಮಾಡಿದೆ' ಎಂದರು.

ಬಿಡುಗಡೆಗೊಂಡಿರುವ 68 ಪುಸ್ತಕಗಳು ಸಪ್ನ ಪುಸ್ತಕ ಮಳಿಗೆಯಲ್ಲಿ ಲಭ್ಯವಿದೆ. ಜೊತೆಗೆ, www.sapnaonline.com ಮೂಲಕವೂ ಪುಸ್ತಕಗಳನ್ನು ಖರೀದಿಸಬಹುದು.


'ಸೀತಾಫಲ ಕಂಡು ಭೂಮಿ ಖರೀದಿಸಿದ್ದ ಲೀಲಾವತಿ'

ಬೆಂಗಳೂರು: 'ಒಮ್ಮೆ ಕಾರಿನಲ್ಲಿ ತೆರಳುತ್ತಿರುವಾಗ ಏಳು ಪುಟ್ಟ ಪುಟ್ಟ ಗುಡ್ಡಗಳಲ್ಲಿ ಸೀತಾ ಫಲದ ಗಿಡಗಳನ್ನು ಕಂಡ ಲೀಲಾವತಿ, ಮಗನಿಗೆ ಆ ಭೂಮಿಯನ್ನು ಖರೀದಿಸಲು ಸೂಚಿಸಿದರು. ಗುಡ್ಡವಾಗಿದ್ದ ಸೋಲದೇವನಹಳ್ಳಿಯ ಆ ಜಾಗವನ್ನು ನಂದನ ವನವನ್ನಾಗಿಸಿದ ಅವರು, ಅದೇ ಜಾಗದಲ್ಲಿ ಮಣ್ಣಲ್ಲಿ ಮಣ್ಣಾಗಿದ್ದಾರೆ' ಎಂದು ಪತ್ರಕರ್ತ ಗಣೇಶ್ ಕಾಸರಗೋಡು ಹೇಳಿದರು.

ಸ್ನೇಹ ಬುಕ್ ಹೌಸ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಿ.ಎಸ್. ವೆಂಕಟೇಶ ರಾವ್ ಅವರ 'ಸಿನಿ ಮಾಯೆ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಹೆಣ್ಣುಗಳಲ್ಲಿ ಸೀತಾ ಮಾತೆ, ಹಣ್ಣುಗಳಲ್ಲಿ ಸೀತಾಫಲ ತುಂಬಾ ಇಷ್ಟವೆಂದು ಹೇಳಿದ್ದ ಲೀಲಾವತಿ, ತಮ್ಮ ಜೀವನದ ಕೆಲ ಘಟನೆಗಳನ್ನು ಹಂಚಿಕೊಂಡಿದ್ದರು. ಏಳು ಗುಡ್ಡಗಳ ಜಾಗ ಖರೀದಿಸಬೇಕೆಂಬ ಲೀಲಾವತಿ ಅವರ ನಿರ್ಧಾರದಿಂದ ವಿನೋದ್ ಆಘಾತಕ್ಕೆ ಒಳಗಾಗಿದ್ದರು. ಚೆನ್ನೈ ಸೇರಿ ಹಲವೆಡೆ ನಮಗೆ ಜಮೀನು ಇದೆ ಎಂದು ಮನವರಿಕೆ ಮಾಡಿಸಲು ಪ್ರಯತ್ನಿಸಿದ್ದರು. ಆದರೂ ಲೀಲಾವತಿ ಅವರು ಕೇಳದಿದ್ದರಿಂದ ಆ ಜಾಗವನ್ನು ವಿನೋದ್ ಖರೀದಿಸಿದ್ದರು' ಎಂದು ನೆನಪಿಸಿಕೊಂಡರು.

ಕೃತಿಯ ಬಗ್ಗೆ ಮಾತನಾಡಿದ ಚಿತ್ರ ಸಾಹಿತಿ ಹೃದಯ ಶಿವ, 'ಸಿನಿಮಾ ರಂಗದಲ್ಲಿ ಕೆಲಸ ಮಾಡುವ ಆಕಾಂಕ್ಷೆಯೊಂದಿಗೆ ಬಂದವರಿಗೆ ಸರಿಯಾದ ಮಾರ್ಗದರ್ಶನ ಸಿಗುವುದು ಅಪರೂಪ. ಸಿನಿಮಾ ರಂಗ ಪ್ರವೇಶಿಸುವವರಿಗೆ ಈ ಕೃತಿ ಕೈಪಿಡಿಯಾಗಲಿದೆ' ಎಂದು ಹೇಳಿದರು



ಕಾರ್ಯಕ್ರಮದಲ್ಲಿ 'ಸಿನಿ ಮಾಯೆ' ಕೃತಿಯನ್ನು ಗಣೇಶ್ ಕಾಸರಗೋಡು ಬಿಡುಗಡೆ ಮಾಡಿದರು. ಕಿರುತೆರೆ ನಿರ್ದೇಶಕ ಬ.ಲ ಸುರೇಶ್, ಸಾಕ್ಷ್ಯಚಿತ್ರ ನಿರ್ದೇಶಕ ಬಿ.ಎಸ್. ಮನೋಹರ್ ಹಾಗೂ ಲೇಖಕ ಬಿ.ಎಸ್. ವೆಂಕಟೇಶ ರಾವ್ ಭಾಗವಹಿಸಿದ್ದರು.

ನಗರದಲ್ಲಿ ಇಂದು

ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ, ಕನ್ನಡಕ ವಿತರಣಾ ಶಿಬಿರ: ಆಯೋಜನೆ: ಸ್ನೇಹ ಸಮ್ಮಿಲನ ಫೌಂಡೇಷನ್, ಸ್ಥಳ: ಶ್ರೀರಾಮ್ ಪಬ್ಲಿಕ್ ಸ್ಕೂಲ್, ಇಟ್ಟಂಗೂರು ರಸ್ತೆ, ಸರ್ಜಾಪುರ, ಬೆಳಿಗ್ಗೆ 8.30ರಿಂದ


ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಜಿ. ಪರಮೇಶ್ವರ, ಶಿವರಾಜ ತಂಗಡಗಿ, ಎಂ.ಸಿ. ವೇಣುಗೋಪಾಲ್, ಕೆ. ನಾರಾಯಣ್, ತೇಜಸ್ವಿ ಸೂರ್ಯ, ಉಮಾಶ್ರೀ, ಎಂ.ಡಿ. ಲಕ್ಷ್ಮೀನಾರಾಯಣ, ಶ್ರೀನಿವಾಸ ಬಳ್ಳಿ, ಉಪಸ್ಥಿತಿ: ಕೆ.ಆರ್. ಶ್ರೀನಿವಾಸ್, ರವೀಂದ್ರ ಕಲಬುರ್ಗಿ, ಭಾಸ್ಕರಯ್ಯ, ಕೋದಂಡರಾಮ, ಟಿ. ರಾಮಬಾಬು, ಅಧ್ಯಕ್ಷತೆ: ಜಿ. ರಮೇಶ್, ಆಯೋಜನೆ: ದೇವಾಂಗ ಸಂಘ, ಸ್ಥಳ: ಪುಟ್ಟಣ್ಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಗುರುರಾಜ್ ಎಸ್. ದಾವಣಗೆರೆ ಅವರ 'ಪಂಚಾಯತ್ ಪವರ್', 'ವಿರಾಟ್ ವಿಜ್ಞಾನ', 'ಹಸಿರು ಮಂಥನ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಡಾ.ಕೆ.ಎಸ್. ಚೈತ್ರಾ, ರಘುನಾಥ ಚ.ಹ., ಕಾಡಶೆಟ್ಟಿಹಳ್ಳಿ ಸತೀಶ್, ಆಯೋಜನೆ: ನದಿ ಪ್ರಕಾಶನ, ವಸಿಷ್ಠ ಬುಕ್ಸ್, ಸ್ಥಳ: ಗ್ರೀನ್ ಪಾತ್, ಹಸಿರು ತೋಟ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣದ ಎದುರು, ಶೇಷಾದ್ರಿಪುರ, ಬೆಳಿಗ್ಗೆ 10

ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ಟೆಸ್ಸಿ ಥಾಮಸ್, ಆಯೋಜನೆ ಮತ್ತು ಸ್ಥಳ: ಅಲಯನ್ಸ್ ವಿಶ್ವವಿದ್ಯಾಲಯ, ಆನೇಕಲ್, ಬೆಳಿಗ್ಗೆ 10

ಶಿಶಿರ ರಂಗೋತ್ಸವ: ಅತಿಥಿಗಳು: ಲಕ್ಷ್ಮೀಚಂದ್ರಶೇಖರ್, ವಸುಂಧರ, ಸುಷ್ಮಾ ಎಸ್.ವಿ., 'ಅಧಿನಾಯಕಿ' ನಾಟಕ ಪ್ರದರ್ಶನ: ಪ್ರಸ್ತುತಿ: ಎಂ.ಎಸ್. ಲಕ್ಷ್ಮೀ ಕಾರಂತ, ನಿರ್ದೇಶನ: ಬೇಲೂರು ರಘುನಂದನ್, 'ತಾಯಿಯಾಗುವುದೆಂದರೆ' ನಾಟಕ ಪ್ರದರ್ಶನ: ಪ್ರಸ್ತುತಿ: ಪೂಜಾ ರಘುನಂದನ್, ನಿರ್ದೇಶನ: ಕೃಷ್ಣಮೂರ್ತಿ ಕವತ್ತಾರ್, 'ಸುಕುಬಾಯಿ ಕಾಮ್‌ವಾಲಿ' ನಾಟಕ ಪ್ರದರ್ಶನ: ಪ್ರಸ್ತುತಿ: ನುಡಿ ಸುದರ್ಶನ, ನಿರ್ದೇಶನ: ಹುಲುಗಪ್ಪ ಕಟ್ಟೀಮನಿ, ಆಯೋಜನೆ: ಪದ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ವಲ್ಲಭ ಶ್ರೀನಿವಾಸನ್, ಆಯೋಜನೆ ಮತ್ತು ಸ್ಥಳ: ಭಗವಾನ ರಮಣ ಮಹರ್ಷಿ ರೀಸರ್ಚ್ ಸೆಂಟರ್, ಸಂಜಯನಗರ, ಬೆಳಿಗ್ಗೆ 10.30



ವಲ್ಲಭ ಶ್ರೀನಿವಾಸನ್

ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ಭಾಗ್ಯಲಕ್ಷ್ಮಿ ಮಗ್ಗೆ, ಉದ್ಘಾಟನೆ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿ: ಕೋ.ಲ. ರಂಗನಾಥರಾವ್, ಉಪಸ್ಥಿತಿ: ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ವಿ. ಚೆನ್ನಯ್ಯ, ಚಂದ್ರಶೇಖರ್, ಪದ್ಮಾವತಿ ಚಂದ್ರು, ವೇದಾ ಮಂಜುನಾಥ್, ಸಿ.ಪಿ. ರಾಧಾ, ಗೀತಾ ವಿಜಯಕುಮಾರ್, ಮಧುಮಾಲತಿ ರುದ್ರೇಶ್, ಸಿ. ಸುಶೀಲ, ಆ.ನ. ವಸಂತಕುಮಾರಿ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಕೆ.ಜಿ. ಕೃಪಾಲ್ 'ಷೇರು ಸಂಜೀವಿನಿ' ಪುಸ್ತಕ ಬಿಡುಗಡೆ: ಸೇತು ಗುರುರಾಜನ್, ಅಧ್ಯಕ್ಷತೆ: ಕೃಷ್ಣರಾಜು, ಅತಿಥಿಗಳು: ಹ.ಚ. ನಟೇಶ್ ಬಾಬು, ಗಣಪತಿ ಆರ್. ಭಟ್, ಆಯೋಜನೆ: ವಿಕ್ರಮ ಪ್ರಕಾಶನ, ಸ್ಥಳ: ಎಚ್.ಎನ್. ನರಸಿಂಹಯ್ಯ ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ, ಈಡಿಗ ಮತ್ತು 25 ಪಂಗಡಗಳ ಬೃಹತ್ ಜಾಗೃತ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಮಧುಬಂಗಾರಪ್ಪ, ಬಿ.ಕೆ. ಹರಿಪ್ರಸಾದ್, ಶಿವರಾಜ್ ಕುಮಾರ್, ಕಾಗೋಡು ತಿಮ್ಮಪ್ಪ, ಜನಾರ್ದನ ಪೂಜಾರಿ, ಎಚ್.ಜಿ. ರಾಮುಲು, ಕೆ.ಎನ್. ತಿಲಕ್ ಕುಮಾರ್, ಗೋಕುಲಮ್ ಗೋಪಾಲನ್, ಕೋಟ ಶ್ರೀನಿವಾಸ ಪೂಜಾರಿ, ವಿ. ಸುನಿಲ್ ಕುಮಾರ್, ಬೇಲೂರು ಗೋಪಾಲಕೃಷ್ಣ, ಉಮಾನಾಥ ಕೋಟ್ಯಾನ್, ಭೀಮಣ್ಣ ನಾಯ್ಕ್, ಎಚ್. ಆರ್. ಗವಿಯಪ್ಪ, ಕೆ. ಹರೀಶ್‌ಕುಮಾರ್, ಜಿ.ಎಚ್. ನಾಗರಾಜ್, ರಾಮಪ್ಪ, ಜೆ.ಪಿ. ಸುಧಾಕರ್, ನವೀನ್‌ಚಂದ್ರ ಡಿ. ಸುವರ್ಣ, ವೇದಕುಮಾರ್, ನಳಿನಾಕ್ಷಿ ಸಣ್ಣಪ್ಪ, ರಾಜಶೇಖರ ಕೋಟ್ಯಾನ್, ಎಚ್. ಸಾಯಿರಾಂ, ಚಿನ್ನೇಗೌಡ, ಅಧ್ಯಕ್ಷತೆ: ಎಂ. ತಿಮ್ಮೇಗೌಡ, ಆಯೋಜನೆ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಸ್ಥಳ: ಕೃಷ್ಣ ವಿಹಾರ್, ಗೇಟ್ ನಂ. 1, ಅರಮನೆ ಮೈದಾನ, ಬೆಳಿಗ್ಗೆ 11

ಕೆ.ಟಿ. ಅಪ್ಪಣ್ಣ ಸ್ಮಾರಕ ಉಪನ್ಯಾಸ: ಸುವ್ರತ ವಿನೋದ್, ಸಮ್ಮೋದ ಆಚಾರ್ಯ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಟಿ.ಎನ್. ಸೀತಾರಾಮ್ ಅವರ ಆತ್ಮಕಥೆ 'ನೆನಪಿನ ಪುಟಗಳು' ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: 'ಮುಖ್ಯಮಂತ್ರಿ' ಚಂದ್ರು, ಎಚ್.ಎಲ್. ಪುಷ್ಪ, ರವಿ ಹೆಗಡೆ, ಜೋಗಿ, ಮೊದಲ ಪ್ರತಿ ಸ್ವೀಕಾರ: ಐ.ಎಂ. ವಿಠ್ಠಲಮೂರ್ತಿ, ಹಂಸಲೇಖ, ಸುಭಾಷ್ ಭರಣಿ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10



ಟಿ.ಎನ್. ಸೀತಾರಾಮ್

ವಿ. ಕೃಷ್ಣಮೂರ್ತಿರಾವ್ ಸಮಗ್ರ ಕಾವ್ಯಸಂಪುಟ 'ಕಡಲ ನಡುವೆ' ಬಿಡುಗಡೆ: ಸಿದ್ಧಲಿಂಗ ಪಟ್ಟಣಶೆಟ್ಟಿ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ, ಅತಿಥಿ: ಶ್ಯಾಮಸುಂದರ ಬಿದಿರಕುಂದಿ, ಸಂಪುಟದ ಕುರಿತು: ವಸಂತಕುಮಾರ್ ಪೆರ್ಲ, ಉಪಸ್ಥಿತಿ: ವಿ. ಕೃಷ್ಣಮೂರ್ತಿರಾವ್, ಆಯೋಜನೆ: ಉದಯ ಪ್ರಕಾಶನ, ವಿ. ಕೃಷ್ಣಮೂರ್ತಿರಾವ್ ಅಭಿಮಾನಿ ಬಳಗ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಸಿದ್ಧಲಿಂಗ ಪಟ್ಟಣಶೆಟ್ಟಿ

'ಅಂತರರಾಷ್ಟ್ರೀಯ ಸಿರಿಧಾನ್ಯ ಸಾವಯವ ಹಾಗೂ ನೈಸರ್ಗಿಕ ಕೃಷಿ' ಕುರಿತ ವಿಚಾರಸಂಕಿರಣ, ಸಿರಿಧಾನ್ಯಗಳ ಮೇಳ: ಸಾನ್ನಿಧ್ಯ: ಶ್ರೀ ಶ್ರೀ ರವಿಶಂಕರ್, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎಸ್.ಟಿ. ಸೋಮಶೇಖರ್, ಅಶೋಕ್ ದಳವಾಯಿ, ಎಸ್.ವಿ. ಸುರೇಶ, ರಂಗನಾಥ್ ಪ್ರಸಾದ್, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್, ಕನಕಪುರ ರಸ್ತೆ, ಸಂಜೆ 4

ನೃತ್ಯನಿರಾಜನ: ಕಥಕ್ ನೃತ್ಯ ಪ್ರದರ್ಶನ: ನಿರುಪಮಾ ರಾಜೇಂದ್ರ, ಟಿ.ಡಿ. ರಾಜೇಂದ್ರ, ಅತಿಥಿಗಳು: ಆರ್. ಗಣೇಶ, ಸಿ. ಚೆಲುವರಾಜು, ಅಧ್ಯಕ್ಷತೆ: ಎಚ್.ಎನ್. ಸುರೇಶ, ಆಯೋಜನೆ: ಅನನ್ಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.30

'ಪುರಂದರಅಮೃತ' ಸಂಗೀತ ಕಛೇರಿ: ಗಾಯನ: ಎಂ.ಬಿ. ಹರಿಹರನ್, ಎಸ್. ಅಶೋಕ್, ಪಿಟೀಲು: ಕಾರ್ತಿಕೇಯ ಆರ್., ಮೃದಂಗ: ಫಣೀಂದ್ರಾ ಭಾಸ್ಕರ್, ತ್ರಿಪುನಿತುರ ಕಣ್ಣನ್, ಆಯೋಜನೆ: ಪುರಂದರ ದಾಸ ಸ್ಮಾರಕ ಟ್ರಸ್ಟ್, ಸ್ಥಳ: ಪುರಂದರ ಮಂಟಪ, ಇಸ್ರೊ ಬಡಾವಣೆ, ದೇವರಕೆರೆ, ಸಂಜೆ 6

ರಂಗೋತ್ಸವ: 'ಅಲಿಬಾಬ ಮತ್ತು 40 ಕಳ್ಳರು' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಮಂತ ಸುರೇಶ, 'ವೈಶಂಪಾಯನತೀರಾ' ನಾಟಕ ಪ್ರದರ್ಶನ: ರಚನೆ: ಎಚ್.ಎನ್. ಮುಕುಂದರಾಜ್, ನಿರ್ದೇಶನ: ಸವಿತ ಪ್ರಸನ್ನ, ಆಯೋಜನೆ: ಉತ್ಸಾಹಿ ವೇದಿಕೆ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6ರಿಂದ

'ಕೊಳಲು' ಜುಗಲಬಂದಿ: ರಾಕೇಶ್ ಚೌರಾಸಿಯಾ, ಶಶಾಂಕ್ ಸುಬ್ರಮಣಿಯಂ, ತಬಲಾ: ಸತ್ಯಜಿತ್ ತಲ್ವಾಲಕರ್, ಘಟ: ಗಿರಿಧರ್ ಉಡುಪ, ಆಯೋಜನೆ: ಉತ್ತರದಕ್ಷಿಣ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6.30

ಕಾಮಗಾರಿ ತನಿಖೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019–20ರಿಂದ 2022–23ರ ಅವಧಿಯಲ್ಲಿ ನಡೆದಿರುವ ಕಾಮಗಾರಿಗಳ ತನಿಖೆಗೆ ಸರ್ಕಾರ ನೇಮಿಸಿದ್ದ ಏಕವ್ಯಕ್ತಿ ತನಿಖಾ ಆಯೋಗದ ಎಲ್ಲ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ.

ಮೂರು ವರ್ಷಗಳ ಅವಧಿಯಲ್ಲಿ ನಡೆದಿರುವ ಕಾಮಗಾರಿಗಳ ತನಿಖೆ ಹಾಗೂ ವಿಚಾರಣೆಗೆ ಸರ್ಕಾರ ವಿಶೇಷ ತನಿಖಾ ಘಟಕವನ್ನು ರಚಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ 45 ಗುತ್ತಿಗೆದಾರರು ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದರು.

ಈ ಬಗ್ಗೆ ಆದೇಶ ಹೊರಡಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು, 'ಸರ್ಕಾರ ಬದಲಾದ ಮೇಲೆ ವಿಭಿನ್ನ ನಿಲುವನ್ನು ರಾಜ್ಯ ತೆಗೆದುಕೊಂಡಿರುವುದು ಕಂಡುಬಂದಿದೆ. ರಾಜ್ಯ ಸರ್ಕಾರ ತನ್ನ ಈ ಪ್ರಕ್ರಿಯೆ ಬಗ್ಗೆ, ಏಕ ವ್ಯಕ್ತಿ ತನಿಖಾ ಆಯೋಗ ರಚನೆ ಅಥವಾ ಆದೇಶದ ಬಗ್ಗೆ ಸಮರ್ಥನೆ ನೀಡುವವರೆಗೆ, ಎಲ್ಲ ತನಿಖೆ ಪ್ರಕ್ರಿಯೆಗಳಿಗೆ ತಡೆ ನೀಡಲಾಗಿದೆ' ಎಂದು ಆದೇಶದಲ್ಲಿ ಹೇಳಿದ್ದಾರೆ.

ನಗರಾಭಿವೃದ್ಧಿ ಇಲಾಖೆ ಹಾಗೂ ಬಿಬಿಎಂಪಿಗೆ ನೋಟಿಸ್ ಜಾರಿ ಮಾಡಲಾಗಿದೆ. ಡಿ.19ರಂದು ಈ ಪ್ರಕರಣ ವಿಚಾರಣೆಗೆ ಬರಲಿದೆ.

ಜಾಗತಿಕ ಸಿರಿಧಾನ್ಯ ಮೇಳದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿಕೆ

'ಕಲುಷಿತ ಆಹಾರ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅತಿಯಾದ ರಾಸಾಯನಿಕ ಬಳಕೆಯಿಂದ ಕೃಷಿ ಭೂಮಿಗೆ ಆಪತ್ತು
- ಸದೃಢ ಆರೋಗ್ಯಕ್ಕೆ ಸಿರಿಧಾನ್ಯ ಬಳಕೆ ಉತ್ತಮ
- ಜನರಲ್ಲಿ ಆರೋಗ್ಯ ಕಾಳಜಿ ವೃದ್ಧಿ

ಬೆಂಗಳೂರು: 'ಸತತ ರಾಸಾಯನಿಕ ಬಳಕೆಯಿಂದ ಕೃಷಿ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿದ್ದು, ಕಲುಷಿತ ಆಹಾರ ಉತ್ಪಾದನೆ ಹೆಚ್ಚಾಗುತ್ತಿದೆ' ಎಂದು ಕೃಷಿ ಸಚಿವ ಚಲುವನಾರಾಯಣಸ್ವಾಮಿ ಹೇಳಿದರು.

ನಗರದಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷದ ಅಂಗವಾಗಿ ಆರ್ಟ್ ಆಫ್ ಲಿವಿಂಗ್ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಶನಿವಾರದಿಂದ ಪ್ರಾರಂಭವಾದ ಮೂರು ದಿನಗಳ 'ಜಾಗತಿಕ ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.


'ಉತ್ತಮ ಆರೋಗ್ಯ ಬೇಕಾದರೆ, ಸಿರಿಧಾನ್ಯ ಮತ್ತು ಸಾವಯವ ಕೃಷಿಯಲ್ಲಿ ಬೆಳೆದ ಆಹಾರ ಉತ್ಪನ್ನಗಳನ್ನು ಹೆಚ್ಚಾಗಿ ಸೇವಿಸಬೇಕು. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚಾಗುತ್ತಿದ್ದು, ರಾಸಾಯನಿಕ ಮುಕ್ತ ಆಹಾರಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಅದರಲ್ಲಿ ಮುಖ್ಯವಾಗಿ ಸಿರಿಧಾನ್ಯಗಳ ಸೇವನೆ ಹೆಚ್ಚಾಗಿದೆ. ಇದರಿಂದ, ರೈತರು ಹೆಚ್ಚು ಲಾಭ ಗಳಿಸುತ್ತಿದ್ದು, ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ಸಹಾಯಕವಾಗಿದೆ' ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, ಜಿಕೆವಿಕೆನ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಬಿ. ಬೋರಯ್ಯ, ಅಖಿಲ ಭಾರತೀಯ ಸುಸಂಘಟಿತ ಸಂಶೋಧನಾ ಪ್ರಾಯೋಜನದ ಮುಖ್ಯಸ್ಥ ನಾಗರಾಜ ಟಿ. ಈ., ಶ್ರೀ ಶ್ರೀ ನೈಸರ್ಗಿಕ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ್ ಪ್ರಸಾದ್, ಸಿರಿಧಾನ್ಯ ಮತ್ತು ತೈಲ ಬೀಜ ಪರಿಣಿತ ಉದಯ ಕುಮಾರ್ ಕೊಳ್ಳಿಮಠ ಭಾಗವಹಿಸಿದ್ದರು.



ಮೂರು ದಿನಗಳ ಜಾಗತಿಕ ಸಿರಿಧಾನ್ಯ ಮೇಳಕ್ಕೆ ಕೃಷಿ ಸಚಿವ ಚಲುವರಾಯಸ್ವಾಮಿ ಶನಿವಾರ ಚಾಲನೆ ನೀಡಿದರು. ಎಸ್‌.ವಿ. ಸುರೇಶ, ರಂಗನಾಥ್ ಪ್ರಸಾದ್ ಭಾಗವಹಿಸಿದ್ದರು

'ಪ್ರಪಾತ'ಕ್ಕೆ ಸರ್ಕಾರಿ ವಿ.ವಿಗಳು



ಒಂದನೇ ಪುಟದಿಂದ...

ರಾಜ್ಯದ ಯಾವುದೇ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವ ಅಥವಾ ಆಡಳಿತ ವಿಭಾಗದ ಸದಸ್ಯರನ್ನು ಮಾತನಾಡಿಸಿದರೂ ತಮ್ಮ ವಿಶ್ವವಿದ್ಯಾಲಯ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದೆ. ಬಾಗಿಲುಮುಚ್ಚುವ ಸ್ಥಿತಿ ಎದುರಿಸುತ್ತಿದ್ದೇವೆ ಎನ್ನುವ ವಿಷಯವನ್ನೇ ಪ್ರಧಾನವಾಗಿ ಪ್ರಸ್ತಾಪಿಸುತ್ತಿದ್ದಾರೆ.

ಒಂದು ಕಾಲದಲ್ಲಿ ಬೆಂಗಳೂರು, ಶಿವಮೊಗ್ಗ, ಮಂಗಳೂರು ವಿಭಾಗದವರೆಗೆ ಕಾರ್ಯವ್ಯಾಪ್ತಿ ಇದ್ದ ಶತಮಾನದ ಮೈಸೂರು ವಿಶ್ವವಿದ್ಯಾಲಯವೀಗ ಮೈಸೂರಿಗಷ್ಟೇ ಸೀಮಿತಗೊಂಡಿದೆ. ಪಿಂಚಣಿಗೆ ಸರ್ಕಾರದಿಂದ ಬರುವ ಹಣ ಕಡಿಮೆಯಾಗಿದ್ದು, ವಾರ್ಷಿಕ ₹ 50 ಕೋಟಿ ಕೊರತೆಯನ್ನು ಈ ವಿಶ್ವವಿದ್ಯಾಲಯ ಎದುರಿಸುತ್ತಿದೆ. ಸಂಪನ್ಮೂಲದ ಹರಿವೂ ಕಡಿಮೆಯಾಗಿದೆ. ಹಾಸನ, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಕಾಲೇಜುಗಳು ಮೈಸೂರು ವಿಶ್ವವಿದ್ಯಾಲಯದಿಂದ ಬೇರ್ಪಟ್ಟಿವೆ. ಕಟ್ಟಡಗಳ ನಿರ್ವಹಣೆಯೇ ದುಬಾರಿಯಾಗಿ ಪರಿಣಮಿಸಿ, ಅತಿಥಿ ಉಪನ್ಯಾಸಕರಿಂದಲೇ ಪಾಠ, ಪ್ರವಚನ ನಡೆಯುತ್ತಿದೆ.

'2007ರಿಂದಲೂ ಬೋಧಕ ಸಿಬ್ಬಂದಿ ನೇಮಕಾತಿ ನಡೆದಿಲ್ಲ. ನಿವೃತ್ತರ ಸಂಖ್ಯೆಯೂ ಹೆಚ್ಚಿದೆ. ನೇಮಕಾತಿಗೆ ಸರ್ಕಾರ ಅನುಮತಿಯನ್ನೇ ನೀಡುತ್ತಿಲ್ಲ. 2019–20ರಲ್ಲಿ ನೇಮಕಾತಿ ನಡೆಯಬೇಕಿತ್ತು, ಆದರೆ ಕೋವಿಡ್ ಹಾಗೂ ಆರ್ಥಿಕ ಕಾರಣಗಳಿಗಾಗಿ ಮತ್ತೆ ವಿಷಯ ಹಿನ್ನೆಲೆಗೆ ಸರಿಯಿತು' ಎಂದು ವಿ.ವಿಯ ಕಠಿಣ ಸ್ಥಿತಿ ಬಿಚ್ಚಿಟ್ಟರು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್.

ಅಮೃತ ಮಹೋತ್ಸವ ಹೊಸ್ತಿಲಲ್ಲಿರುವ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ತನ್ನ ನಿವೃತ್ತರಿಗೆ ಪಿಂಚಣಿ ನೀಡಲೂ ಸಾಧ್ಯವಾಗದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ವಿಶ್ವವಿದ್ಯಾಲಯದ 578 ಬೋಧಕ ಹುದ್ದೆಗಳಲ್ಲಿ 359 ಹುದ್ದೆಗಳು ಖಾಲಿ ಇವೆ. ಬಹುತೇಕ ವಿಭಾಗಗಳಲ್ಲಿ ಅತಿಥಿ ಉಪನ್ಯಾಸಕರೇ ಹೆಚ್ಚಿದ್ದಾರೆ. ವಿದ್ಯಾರ್ಥಿಗಳು ಪಾವತಿಸುವ ಶುಲ್ಕದ ಹೊರತಾಗಿ ವಿಶ್ವವಿದ್ಯಾಲಯಕ್ಕೆ ಯಾವ ಆದಾಯವೂ ಇಲ್ಲ ಎನ್ನುವುದು ವಿಶ್ವವಿದ್ಯಾಲಯದ ಅಧಿಕಾರಿಗಳ ಅಳಲು.

ಆರು ದಶಕ ಪೂರೈಸಿರುವ ಬೆಂಗಳೂರು ವಿಶ್ವವಿದ್ಯಾಲಯದ್ದು 'ಮನೆಯೊಂದು ಮೂರು ಬಾಗಿಲು' ಎನ್ನುವ ಕಥೆ. ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಭಜಿಸಿ ಬೆಂಗಳೂರು ನಗರ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯವನ್ನು ಹೊಸದಾಗಿ ರಚಿಸಲಾಗಿದೆ. ಹೊಸ ಎರಡು ವಿಶ್ವವಿದ್ಯಾಲಯಗಳಿಗೆ ಕಾಲೇಜುಗಳು ಹಂಚಿಕೆಯಾದ ಪರಿಣಾಮದಿಂದ ಮೂಲ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಸಂಪನ್ಮೂಲದ ಕೊರತೆ ಕಾಡುತ್ತಿದೆ. ಬಹುತೇಕ ಸಿಬ್ಬಂದಿ ಬೆಂಗಳೂರು ವಿಶ್ವವಿದ್ಯಾಲಯದಲ್ಲೇ ಉಳಿದ ಕಾರಣ ಹೊರೆ ಹೆಚ್ಚಾಗಿದೆ. 1,536 ನಿವೃತ್ತರ ಪಿಂಚಣಿಗೇ ವಾರ್ಷಿಕ ₹ 70 ಕೋಟಿ ವ್ಯಯಿಸಲಾಗುತ್ತಿದೆ. ₹ 67 ಕೋಟಿ ನೀಡುವಂತೆ ಕೋರಿ ಉನ್ನತ ಶಿಕ್ಷಣ ಇಲಾಖೆಗೆ ಪ್ರಸ್ತಾವ ಸಲ್ಲಿಸಿದರೆ, ನೀಡಿದ್ದು ₹ 15 ಕೋಟಿ ಮಾತ್ರ.

ಮಂಗಳೂರು ವಿಶ್ವವಿದ್ಯಾಲಯಕ್ಕೆ ಯುಜಿಸಿಯಿಂದ ಬರುವ ಅನುದಾನ ನಿಂತಿದೆ. ನಾಲ್ಕೈದು ವರ್ಷಗಳಿಂದ ರಾಜ್ಯ ಸರ್ಕಾರದಿಂದ ಬರುವ ಅನುದಾನವೂ ಕಡಿಮೆಯಾಗಿದೆ. ಹೀಗಾಗಿ, ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಕಠಿಣವಾಗಿದೆ ಎನ್ನುತ್ತಾರೆ ಮಂಗಳೂರು ವಿಶ್ವವಿದ್ಯಾಲಯ ಪ್ರಭಾರಿ ಕುಲಪತಿ ಜಯರಾಜ್ ಅಮೀನ್.

'ಆರ್ಥಿಕ ಮುಗ್ಗಟ್ಟಿನ ಕಾರಣಕ್ಕೆ ವೆಚ್ಚ ಕಡಿತಗೊಳಿಸುವ ನಿಟ್ಟಿನಲ್ಲಿ ದೊಡ್ಡ ಸೆಮಿನಾರ್‌ಗಳು, ವಿಭಾಗವಾರು ನಡೆಸುತ್ತಿದ್ದ ಶೈಕ್ಷಣಿಕ ಚಟುವಟಿಕೆಗಳನ್ನು ಕಡಿತಗೊಳಿಸಲಾಗಿದೆ. ತುರ್ತು ಅಗತ್ಯದ ದುರಸ್ತಿ ಕೆಲಸ ಹೊರತುಪಡಿಸಿ, ಉಳಿದವನ್ನು ಸಾಧ್ಯವಾದಷ್ಟು ಮುಂದೂಡಲಾಗಿದೆ' ಎನ್ನುತ್ತಾರೆ ಅಮೀನ್.

'ವಿಶ್ವವಿದ್ಯಾಲಯ ಹಾಗೂ ಏಳು ಘಟಕ ಕಾಲೇಜುಗಳು ಸೇರಿ ಬೋಧಕ ವಿಭಾಗದಲ್ಲಿ 145 ಕಾಯಂ ಪ್ರಾಧ್ಯಾಪಕರು ಇದ್ದರೆ, 128 ಹುದ್ದೆಗಳು ಖಾಲಿ ಇವೆ. ಅಗತ್ಯಕ್ಕೆ ಅನುಗುಣವಾಗಿ 400ಕ್ಕೂ ಹೆಚ್ಚು ಸಿಬ್ಬಂದಿಯನ್ನು ಹೊರಗುತ್ತಿಗೆಯಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ಸಿಬ್ಬಂದಿಗೆ ವೇತನ ನೀಡುವುದು ವಿಶ್ವವಿದ್ಯಾಲಯಕ್ಕೆ ಸವಾಲಾಗಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 27 ವರ್ಷಗಳಿಂದ ಬೋಧಕ ಹುದ್ದೆಯ ನೇಮಕಾತಿ ನಡೆದಿಲ್ಲ. ವಾಸ್ತವವಾಗಿ ಕಲ್ಯಾಣ ಕರ್ನಾಟಕದ ವ್ಯಾಪ್ತಿಯಲ್ಲಿ ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆಯ ಅನುಮೋದನೆ ಬೇಕಿಲ್ಲ. ಆದರೂ, ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ನೇಮಕಾತಿಗೆ ಒಪ್ಪಿಗೆ ದೊರೆತಿಲ್ಲ. 2014ರಿಂದಲೇ ನೇಮಕಾತಿ ಪ್ರಕ್ರಿಯೆಗೆ ಅನುಮೋದನೆ ಪಡೆಯಲು ಪ್ರಕ್ರಿಯೆಗಳು ನಡೆದಿದ್ದರೂ, ಇದುವರೆಗೂ ಪೂರ್ಣಪ್ರಮಾಣ ಒಪ್ಪಿಗೆ ಸಿಕ್ಕಿಲ್ಲ. ಖಾಲಿ ಇರುವ ಸುಮಾರು 700 ಬೋಧಕೇತರ ಸಿಬ್ಬಂದಿ ನೇಮಕಕ್ಕೆ ಇತ್ತೀಚೆಗಷ್ಟೇ ಉನ್ನತ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ 32 ಸ್ನಾತಕೋತ್ತರ ವಿಭಾಗಗಳಿವೆ. 20 ವಿಭಾಗಗಳಿಗೆ ಮಾತ್ರ ಬೋಧಕ ಸಿಬ್ಬಂದಿ ನೇಮಕಕ್ಕೆ ಅನುಮೋದನೆ ನೀಡಿದ್ದು, ಉಳಿದ 12 ವಿಭಾಗಗಳಿಗೆ ಈವರೆಗೆ ಬೋಧಕ ಸಿಬ್ಬಂದಿ ನೇಮಕಕ್ಕೆ ಸರ್ಕಾರದ ಅನುಮತಿ ದೊರೆತಿಲ್ಲ. ವಿ.ವಿ ಅಧೀನದ ಮಂಡ್ಯ, ಸಿಂದನೂರು, ಶಿವಮೊಗ್ಗ ಜಿಲ್ಲೆ ಉಡುತಡಿ ಸ್ನಾತಕೋತ್ತರ ಕೇಂದ್ರದಲ್ಲಿ ತಲಾ ಒಂದು ವಿಭಾಗವಿದ್ದು, ಯಾವ ವಿಭಾಗಕ್ಕೂ ಕಾಯಂ ಬೋಧಕ ಸಿಬ್ಬಂದಿ ಇಲ್ಲ.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಕುವೆಂಪು ವಿಶ್ವವಿದ್ಯಾಲಯಕ್ಕೆ ₹5 ಕೋಟಿ ಅನುದಾನ ನೀಡಿದ್ದರು. ಇದರ ಪೈಕಿ ಕಳೆದ ಹಣಕಾಸು ವರ್ಷದಲ್ಲಿ (2022–23) ₹ 37 ಲಕ್ಷ ಬಿಡುಗಡೆಯಾಗಿದೆ. ಯುಜಿಸಿ ಅನುದಾನ 2014ರ ನಂತರ ಸಂಪೂರ್ಣ ಸ್ಥಗಿತಗೊಂಡಿದೆ. ಹೀಗಾಗಿ ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ವಿದ್ಯಾರ್ಥಿಗಳ ಶುಲ್ಕದ ರೂಪದಲ್ಲಿ ಸಂಗ್ರಹವಾಗುವ ಹಣ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಅಭಿವೃದ್ಧಿಯಲ್ಲಿ ಕಲ್ಯಾಣ ಕರ್ನಾಟಕ ಕಡೆಗಣಿಸಿದಂತೆ ಶಿಕ್ಷಣ ಕ್ಷೇತ್ರದಲ್ಲೂ ಕಡೆಗಣಿಸಲಾಗಿದೆ ಎನ್ನುವ ದೂರುಗಳು ಸಾಕಷ್ಟು ಕೇಳಿ ಬರುತ್ತಿವೆ. 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ'ಗೆ (ಕೆಕೆಆರ್‌ಡಿಬಿ) ನೀಡುವ ಅನುದಾನದಲ್ಲಿ ಕನಿಷ್ಠ ಶೇ 10 ರಷ್ಟನ್ನು ನೇರವಾಗಿ ಆ ಭಾಗದ ವಿಶ್ವವಿದ್ಯಾಲಯಗಳ ಬಳಕೆಗೆ ಮೀಸಲಿಡಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಈಚೆಗೆ ನಿರ್ದೇಶನ ನೀಡಿರುವುದು ಇಂತಹ ದೂರಿಗಳಿಗೆ ಮತ್ತಷ್ಟು ಸಾಕ್ಷ್ಯ ಒದಗಿಸಿದಂತಾಗಿದೆ.

ಹಗರಣಗಳ ಸರಮಾಲೆ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಒಯು) ನಡೆದಿದೆ ಎನ್ನಲಾದ ₹250 ಕೋಟಿಯಷ್ಟು ಹಣ ದುರ್ಬಳಕೆ ಮಾಡಿಕೊಂಡ ಆರೋಪ ಪ್ರಕರಣದ ತನಿಖೆಯನ್ನು ಸಿಬಿಐ ಆರಂಭಿಸಿದೆ. 2009–10ರಿಂದ 2015–16ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ ಕುಲಪತಿ, ಕುಲಸಚಿವ ಹಾಗೂ ಇತರೆ ಎಲ್ಲ ಅಧಿಕಾರಿ, ಸಿಬ್ಬಂದಿಗೆ ಸಿಬಿಐ ಕೆಲ ದಿನಗಳ ಹಿಂದಷ್ಟೇ ನೋಟಿಸ್ ನೀಡಿದೆ. ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕ, ಪರೀಕ್ಷೆ, ಅಧ್ಯಯನ ಕೇಂದ್ರಗಳ ಸ್ಥಾಪನೆ ಸೇರಿದಂತೆ ಹಣ ದುರ್ಬಳಕೆ ಆರೋಪಗಳು ವಿಶ್ವವಿದ್ಯಾಲಯದಲ್ಲಿ ನಡೆದಿರಬಹುದಾದ ಭ್ರಷ್ಟಾಚಾರದ ಕರಾಳಮುಖವನ್ನು ಅನಾವರಣಗೊಳಿಸಿದೆ.

ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಹೊಂದಿದ್ದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಅಕ್ರಮಗಳು ನಡೆದರೂ, ಇದನ್ನು ತಡೆಯಲು ಯಾವುದೇ ಕ್ರಮ ಕೈಗೊಂಡಿಲ್ಲ. ದೊಡ್ಡ ಮೊತ್ತದ 'ಕಪ್ಪ-ಕಾಣಿಕೆ'ಯನ್ನು ಇಂತಹ ಕೇಂದ್ರಗಳು ವಿ.ವಿ ಆಡಳಿತ ಮಂಡಳಿಗೆ ಸಲ್ಲಿಸುತ್ತಿದ್ದದ್ದೇ ಇದಕ್ಕೆ ಕಾರಣ ಎಂಬ ಆರೋಪಗಳು ಕೇಳಿ ಬಂದಿದ್ದವು. ಆರೋಪಗಳಿಗೆ ಬಲವಾದ ಸಾಕ್ಷ್ಯವೇನು ಇರಲಿಲ್ಲ. ಕೊನೆಗೆ ಕೆಎಸ್‌ಒಯು ಹೊರತುಪಡಿಸಿ ಉಳಿದ ವಿಶ್ವವಿದ್ಯಾಲಯಗಳ ದೂರ ಶಿಕ್ಷಣ ನಿರ್ದೇಶನಾಲಯಗಳನ್ನು ಮುಚ್ಚುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಹೀಗಾಗಿ ಎಲ್ಲಾ ವಿ.ವಿಗಳ ಆದಾಯದ ಮೂಲವೇ ಮುಚ್ಚಿದಂತಾಗಿದೆ.

ನೇಮಕಾತಿಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳದ ಆರೋಪಗಳು ಹಲವು ವಿಶ್ವವಿದ್ಯಾಲಯಗಳ ಮೇಲಿದೆ. ನೇಮಕಾತಿಯಲ್ಲಿ ನಿಯಮಗಳನ್ನು ಸರಿಯಾಗಿ ಪಾಲಿಸದ ಕಾರಣ ನೀಡಿ ಸರ್ಕಾರ ಈಚೆಗೆ ಕೆಎಸ್‌ಒಯು, ಜಾನಪದ ವಿಶ್ವವಿದ್ಯಾಲಯಗಳ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿದಿದೆ. ಒಟ್ಟಾರೆ ಬಿಗಿ ಆಡಳಿತ ಮತ್ತು ಆರ್ಥಿಕ ಶಿಸ್ತು ಜಾರಿಯಾಗದಿದ್ದರೆ ವಿ.ವಿಗಳ ಸ್ಥಿತಿ ಮತ್ತಷ್ಟು ಕೆಟ್ಟದಾಗಲಿದೆ.

(ಪೂರಕ ಮಾಹಿತಿ: ಜಿ.ಎಚ್.ವೆಂಕಟೇಶ, ಸಂಧ್ಯಾ ಹೆಗಡೆ, ಧನ್ಯಪ್ರಸಾದ ಬಿ.ಜೆ, ಬಸವರಾಜ ಸಂಪಳ್ಳಿ, ಸಿದ್ದು ಆರ್.ಜಿ ಹಳ್ಳಿ, ಎಂ.ಜಿ.ಬಾಲಕೃಷ್ಣ, ಮನೋಜ್‌ಕುಮಾರ್ ಗುದ್ದಿ, ಎಂ.ಮಹೇಶ, ಸಿ.ಮೋಹನ್‌ಕುಮಾರ)

ಸದ್ಯಕ್ಕಿಲ್ಲ ಹೊಸ ವಿ.ವಿ ಸ್ಥಾಪನೆ: ಸಚಿವ ಸುಧಾಕರ್



ಬೇಕಾಬಿಟ್ಟಿಯಾಗಿ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದರಿಂದಲೇ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಸಂಕಷ್ಟಕ್ಕೆ ಸಿಲುಕಿವೆ. ಈಗಿರುವ ಎಲ್ಲ ವಿಶ್ವವಿದ್ಯಾಲಯಗಳೂ ಬಲವರ್ಧನೆಯಾಗುವವರೆಗೆ ಯಾವುದೇ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ನೀಡುವುದಿಲ್ಲ ಎನ್ನುತ್ತಾರೆ ಉನ್ನತ ಶಿಕ್ಷಣ ಸಚಿವ ಸುಧಾಕರ್.

ಹೊಸ ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಸರ್ಕಾರ ಐದು ವರ್ಷಗಳ ಅವಧಿಗೆ ಕನಿಷ್ಠ ₹342 ಕೋಟಿ ನೀಡಬೇಕು. 100ರಿಂದ 200 ಎಕರೆ ಭೂಮಿ ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಮಿತಿ ಶಿಫಾರಸು ಮಾಡಿದೆ. ಅಗತ್ಯವಾದ ಹಣಕಾಸಿನ ನೆರವು, ಮೂಲ ಸೌಕರ್ಯ ದೊರಕದೆ ಹೊಸ ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟದಲ್ಲಿವೆ. ಹಲವು ಕುಲಪತಿಗಳು ಬಾಡಿಗೆ ಕಾರು ಬಳಸುತ್ತಿದ್ದಾರೆ. ಸಿಬ್ಬಂದಿ ಕೊರತೆ ಇದೆ. ಕಟ್ಟಡಗಳಿಲ್ಲದೆ ಪರಿತಪಿಸುವಂತಾಗಿದೆ. ಹಳೆಯ ಹಾಗೂ ಹೊಸ ವಿಶ್ವವಿದ್ಯಾಲಯಗಳಿಗೆ ಮುಂದಿನ ಬಜೆಟ್‌ನಲ್ಲಿ ಸೂಕ್ತ ಅನುದಾನ ಒದಗಿಸಲಾಗುವುದು. ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು.

ಅನುದಾನ ನೀಡದೆ ರಾಜಕೀಯ ಪ್ರತಿಷ್ಠೆಗಾಗಿ ಕಳೆದ ವರ್ಷ ಸ್ಥಾಪಿಸಿದ್ದ ಚಾಮರಾಜನಗರ, ಹಾಸನ, ಮಂಡ್ಯ, ಬೀದರ್, ಕೊಡಗು, ಕೊಪ್ಪಳ, ಬಾಗಲಕೋಟೆ, ಹಾವೇರಿ ಸೇರಿ ಏಳು ಹೊಸ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಕುರಿತು ವಿವರವಾದ ವರದಿ ಸಿದ್ಧಪಡಿಸಲು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿದೆ ಎನ್ನುತ್ತಾರೆ ಸಚಿವ ಸುಧಾಕರ್.

ಪಿಎಚ್‌.ಡಿ. ಸೀಟುಗಳೂ ಮಾರಾಟಕ್ಕೆ: ಆರೋಪ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗೆ ಪಿಎಚ್‌.ಡಿ. ಕಡ್ಡಾಯಗೊಳಿಸಿದ ನಂತರ ಸಂಶೋಧನಾ ಆಕಾಂಕ್ಷಿಗಳ ಸಂಖ್ಯೆಯಲ್ಲಿ ದಿಢೀರ್ ಏರಿಕೆಯಾಗಿದೆ. ಪಿಎಚ್‌.ಡಿ. ಆಯ್ಕೆಯಲ್ಲಿ ಸ್ವಜನಪಕ್ಷಪಾತ, ಹಣಕ್ಕೆ ಸೀಟುಗಳನ್ನು ಮಾರಿಕೊಳ್ಳುತ್ತಿದ್ದಾರೆ ಎನ್ನುವ ಆರೋಪಗಳೂ ಕೇಳಿ ಬಂದಿವೆ.

ಅಭ್ಯರ್ಥಿಗಳ ಆಯ್ಕೆಯನ್ನು ವಿಶ್ವವಿದ್ಯಾಲಯಗಳ ಆಯಾ ವಿಭಾಗದ ಪ್ರಾಧ್ಯಾಪಕರೇ ನಡೆಸುವ ಕಾರಣ ಪಿಎಚ್‌.ಡಿ ಸೀಟು ಹಂಚಿಕೆಯಲ್ಲಿ ರಾಜಕೀಯ ನುಸುಳಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆದಿತ್ತು.

ಹಳೆಯ ಪ್ರತಿಗಳಿಗೆ ಸಣ್ಣಪುಟ್ಟ ಬದಲಾವಣೆ ಮಾಡಿ, ಆಳ ಅಧ್ಯಯನ ಮಾಡದೇ ಕೇವಲ ಪದವಿಗಾಗಿ ಸಂಶೋಧನೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಕೆಲ ಹಿರಿಯ ಸಂಶೋಧಕರು ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದಾರೆ. ಎಲ್ಲಾ ಸಾರ್ವಜನಿಕ, ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಶೇ 40 ಪಿಎಚ್‌.ಡಿ. ಸೀಟುಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯಲ್ಲಿ ಸಾಮಾನ್ಯ ಕೌನ್ಸೆಲಿಂಗ್ ನಡೆಸುವಂತೆ ಮುಖ್ಯಮಂತ್ರಿ ಸೂಚನೆಯೂ ಕಾರ್ಯಗತವಾಗಿಲ್ಲ.

ಶತಮಾನದ ವಿಶ್ವವಿದ್ಯಾಲಯವನ್ನು ಕೇಂದ್ರೀಯ ವಿಶ್ವವಿದ್ಯಾಲಯವಾಗಿಸುವ ಎಲ್ಲ ಪ್ರಕ್ರಿಯೆ ನಡೆಸುತ್ತಿರುವೆ. ಆಗ, ಕೇಂದ್ರ ಬಜೆಟ್‌ನಲ್ಲಿಯೇ ಅನುದಾನ ಸಿಗುತ್ತದೆ ನೇಮಕಾತಿಯೆಲ್ಲವೂ ರಾಷ್ಟ್ರ ಮಟ್ಟದಲ್ಲಿಯೇ ಆಗುತ್ತದೆ. ದೇಶದ ಎಲ್ಲೆಡೆಯಿಂದ ಸಂಶೋಧಕರು ಬರಲಿದ್ದಾರೆ.

ಲೋಕನಾಥ್, ಮೈಸೂರು ವಿಶ್ವವಿದ್ಯಾಲಯ ಕುಲಪತಿ

ವಿ.ವಿಯ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದೆ. ಆದರೆ, ವಿಶ್ವವಿದ್ಯಾಲಯದಲ್ಲಿ ಕಾಯಂ ಸಿಬ್ಬಂದಿ ಇಲ್ಲದಿರುವುದೇ ಪ್ರಮುಖ ಸಮಸ್ಯೆ.

ನಿರಂಜನ ವಾನಳ್ಳಿ, ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.

ಸಿಬ್ಬಂದಿಯ ವೇತನದ ಜತೆಗೆ, ಪಿಂಚಣಿಯನ್ನೂ ನೀಡಬೇಕು. ಇಲ್ಲವಾದರೆ ಮೂರು ವರ್ಷಗಳ ನಂತರ ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸಲಿದ್ದೇವೆ.

ಎಸ್.ಎಂ.ಜಯಕರ್, ಕುಲಪತಿ, ಬೆಂಗಳೂರು ವಿ.ವಿ.

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 211 ಬೋಧಕ ಹುದ್ದೆಗಳಿವೆ. ಕೇವಲ 42 ಬೋಧಕ ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ಹಿನ್ನಡೆಯಾಗುತ್ತಿದೆ.

ದಯಾನಂದ ಅಗಸರ, ಕುಲಪತಿ, ಗುಲಬರ್ಗಾ ವಿ.ವಿ.

ವಿಶಿಷ್ಟ ವಿಶ್ವವಿದ್ಯಾಲಯಗಳಿಗೂ ಇಲ್ಲ ನೆಲೆ

ಹಾವೇರಿ ಜಿಲ್ಲೆ ಶಿಗ್ಗಾವಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಕಾನೂನು ವಿಶ್ವವಿದ್ಯಾಲಯ ಸೇರಿದಂತೆ ವಿಶಿಷ್ಟ ವಿಶ್ವವಿದ್ಯಾಲಯಗಳಿಗೂ ಅನುದಾನ ಸಿಕ್ಕಿಲ್ಲ. ಹುದ್ದೆಗಳನ್ನೂ ತುಂಬಿಲ್ಲ. ಸಂಗೀತ ವಿಶ್ವವಿದ್ಯಾಲಯಕ್ಕೆ ಸ್ವಂತ ನೆಲೆ ಇಲ್ಲ.

'ವಿಷಯ ಆಧಾರಿತ ವಿಶ್ವವಿದ್ಯಾಲಯ ಸ್ಥಾಪಿಸಿದರೂ ಅಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಉದ್ಯೋಗದ ಅವಕಾಶಗಳು ಕಡಿಮೆ. ಹಾಗಾಗಿ, ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಒಲವು ತೋರುವುದಿಲ್ಲ' ಎನ್ನುತ್ತಾರೆ ಜಾನಪದ ವಿಶ್ವವಿದ್ಯಾಲಯದ ವಿದ್ಯಾರ್ಥಿ ಅನಿಲ್.

ಕನ್ನಡ ಭಾಷೆ, ಪ್ರಗತಿಯ ಸಂಶೋಧನೆಗಾಗಿಯೇ ಸ್ಥಾಪಿತವಾದ ವಿಜಯನಗರ ಜಿಲ್ಲೆಯ ಹಂಪಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿತ ಉದ್ದೇಶವನ್ನೇ ಮರೆತಂತಿದೆ ಎನ್ನುವುದು ಹಲವರ ಆರೋಪ. ಏಕ ಘಟಕೀಯ ಮತ್ತು ನಿವಾಸಿ ಸ್ವರೂಪದ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಯಾವ ಕಾಲೇಜೂ ಇದಕ್ಕಿಲ್ಲ. ಸರ್ಕಾರದ ನೀಡುವ ಅನುದಾನ ಹೊರತು ಯಾವುದೇ ಆದಾಯದ ಮೂಲ ಇಲ್ಲ.

ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲೂ ವಿಭಜನೆ, ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪನೆಗಳ ನಂತರವೂ ಏಕ ರೂಪದ ಶಿಕ್ಷಣ ಸಾಧ್ಯವಾಗಿಲ್ಲ. ಕೃಷಿ ವಿಶ್ವವಿದ್ಯಾಲಯಗಳು ರೈತರಿಗೆ ಮತ್ತಷ್ಟು ನೆರವು ನೀಡಬೇಕಿತ್ತು. ದೇಶದ ಹಾಗೂ ವಿದೇಶಗಳ ಇತರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಸಂಶೋಧನಾ ತಳಿ, ಉತ್ಪನ್ನಗಳಿಗೆ ಪೇಟೆಂಟ್ ಪಡೆದದ್ದು ಅತ್ಯಂತ ಕಡಿಮೆ. ಖಾಸಗಿ ವಿಶ್ವವಿದ್ಯಾಲಯಗಳ ನಿಯಂತ್ರಣ ರಾಜ್ಯ ಸರ್ಕಾರಕ್ಕೆ ಇಲ್ಲದ ಕಾರಣ ಅನಾರೋಗ್ಯಕರ ಪೈಪೋಟಿ ತಡೆ ಇಲ್ಲವಾಗಿದೆ.

ಇನ್ನು ಮುಂದೆ ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ ಇಲ್ಲ ಎಂದು ಉನ್ನತ ಶಿಕ್ಷಣ ಸಚಿವರು ಹೇಳಿದ ನಂತರವೂ ಸರ್ಕಾರ ಮತ್ತೊಂದು ಹೊಸ ವಿಶ್ವವಿದ್ಯಾಲಯ ತೆರೆಯುವ ಘೋಷಣೆ ಮಾಡಿದೆ.

32	**3,417**	**3.50 ಲಕ್ಷ**	**3,500**	**1,942**	**2,278**
ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ವಿಶ್ವವಿದ್ಯಾಲಯಗಳು	ಸಂಯೋಜಿತ ಕಾಲೇಜುಗಳು	ವಿ.ವಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು	ಒಟ್ಟು ಬೋಧಕ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ವಿ.ವಿಗಳ ಅತಿಥಿ ಉಪನ್ಯಾಸಕರು

ಉಳಿವಿಗೆ ಬೇಕಾಗಿದೆ...

ವಿಶ್ವವಿದ್ಯಾಲಯಗಳು ಅಸ್ತಿತ್ವ ಉಳಿಸಿಕೊಳ್ಳಲು ಸರ್ಕಾರ ಸಂಪೂರ್ಣ ನೆರವು ನೀಡಬೇಕು. ಇಲ್ಲವೇ ಯಾವ ವಿಷಯದಲ್ಲೂ ಮೂಗು ತೂರಿಸದೆ ಸಂಪೂರ್ಣ ಸ್ವಾಯತ್ತತೆ ನೀಡಬೇಕು ಎನ್ನುತ್ತಾರೆ ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಕಾರ್ಯಕಾರಿ ಸಮಿತಿಯ ಸದಸ್ಯ ಪ್ರೊ. ಕೆ.ಎಸ್.ರಂಗಪ್ಪ.

ಅನುದಾನ ನೀಡದೇ ಇದ್ದರೆ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕ ಪಡೆಯುವುದು ಅನಿವಾರ್ಯವಾಗುತ್ತದೆ. ಅವೈಜ್ಞಾನಿಕವಾಗಿ ವಿಶ್ವವಿದ್ಯಾಲಯಗಳನ್ನು ವಿಭಜನೆ ಮಾಡಿದ್ದರಿಂದ ಘಟಕ ಕಾಲೇಜುಗಳ ಸಂಖ್ಯೆ ಕಡಿಮೆಯಾಗಿ ಆದಾಯದ ಮೂಲವೂ ಕ್ಷೀಣಿಸಿದೆ. ಹಿಂದೆ ಎಂಜಿನಿಯರಿಂಗ್, ಕಾನೂನು.. ಹೀಗೆ ಎಲ್ಲ ಉದ್ಯೋಗಾಧಾರಿತ ವಿಷಯಗಳು ಇದ್ದ ಕಾರಣ ವಿ.ವಿಗಳಿಗೆ ಉತ್ತಮ ಆದಾಯವಿತ್ತು. ಪ್ರತಿ ವಿಷಯಕ್ಕೂ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮೂಲಕ ಮೂಲಕ ಹಳೇ ವಿಶ್ವವಿದ್ಯಾಲಯಗಳ ಆದಾಯದ ಮೂಲ ಕುಂಠಿತಗೊಳಿಸಲಾಯಿತು.

ಸ್ವಾಯತ್ತತೆ ಇದ್ದರೆ ಉತ್ತಮ ಸಂಶೋಧನೆ, ಉದ್ಯೋಗಾಧಾರಿತ ಕೋರ್ಸ್‌ಗಳ ಮೂಲಕ ಲಾಭಗಳಿಸಬಹುದು. ವಿವಿಧ ಕಂಪನಿ, ಸಂಸ್ಥೆ, ವಿದೇಶಿ ವಿಶ್ವವಿದ್ಯಾಲಯಗಳು ನೆರವು ನೀಡುತ್ತವೆ. ಅನುಪಯುಕ್ತ ಕೋರ್ಸ್ ತೆಗೆದುಹಾಕಿಬೇಕು. ಹೆಚ್ಚುವರಿ ಸಿಬ್ಬಂದಿಯನ್ನು ಸರ್ಕಾರವೇ ಬೇರೆ ಕಡೆ ನಿಯೋಜಿಸಬೇಕು. ಅಗತ್ಯ ಇರುವ ಬೋಧಕ, ಬೋಧಕೇತರರ ನೇಮಕ ಮಾಡಬೇಕು. ಪ್ರಸ್ತುತ ಎಲ್ಲೆಡೆ ಶೇ 70ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇದ್ದು, 'ಅತಿಥಿ'ಗಳ ಮೇಲೆ ಪಾಠಗಳು ನಡೆಯುತ್ತಿವೆ.

ಹಣ ನೀಡುವ ಸಾಮರ್ಥ್ಯದ ಆಧಾರದ ಮೇಲೆ ಕುಲಪತಿಗಳ ನೇಮಕ ಆರಂಭವಾದಾಗಲೇ ವಿ.ವಿಗಳ ಪತನಕ್ಕೆ ಮುನ್ನುಡಿ ಬರೆಯಲಾಯಿತು. ಹಿಂದೆ ಪ್ರತಿಭೆ, ಅನುಭವ, ಜ್ಞಾನದ ಆಧಾರದಲ್ಲಿ ಕುಲಪತಿ ನೇಮಕವಾಗುತಿತ್ತು. ಹಾಗಾಗಿಯೇ, ಕುವೆಂಪು ಅಂಥವರು ಹುದ್ದೆ ಅಲಂಕರಿಸಿದ್ದರು. ಈಗ ಜಾತಿ, ಪ್ರಭಾವ, ಹಣವೇ ಪ್ರಧಾನವಾಗಿದೆ ಎಂದು ರಂಗಪ್ಪ ವಿವರಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 10-12-1998

● **ಲೋಕಸಭೆ ಉಪಾಧ್ಯಕ್ಷರಾಗಿ ಸಯೀದ್ ಆಯ್ಕೆ ಖಚಿತ**

ನವದೆಹಲಿ, ಡಿ. 9 (ಯುಎನ್‌ಐ)– ಮಿತ್ರಪಕ್ಷಗಳ ಒತ್ತಡಕ್ಕೆ ಮಣಿದು ಲೋಕಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ. ಸಯೀದ್ ಅವರನ್ನೇ ಒಪ್ಪಿಕೊಳ್ಳುವುದು ಆಡಳಿತಾರೂಢ ಭಾರತೀಯ ಜನತಾ ಪಕ್ಷಕ್ಕೆ ಈಗ ಅನಿವಾರ್ಯವಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಸಯೀದ್ ಅವರನ್ನು ಬೆಂಬಲಿಸುವುದಾಗಿ ತೃಣಮೂಲ ಕಾಂಗ್ರೆಸ್ ಈಗಾಗಲೇ ಪ್ರಕಟಿಸಿದ್ದು, ಬಿಜೆಪಿಯ ಪ್ರಮುಖ ಮಿತ್ರಪಕ್ಷವಾದ ಎಐಎಡಿಎಂಕೆ ಕೂಡಾ ಕಾಂಗ್ರೆಸ್ ಬೆಂಬಲಿಸಲು ಇಂದು ನಿರ್ಧರಿಸಿತು.

50 ವರ್ಷಗಳ ಹಿಂದೆ

ಸೋಮವಾರ, 10-12-1973

● **ನೀರಾವರಿ, ವಿದ್ಯುತ್ ದರ ಏರಿಕೆಗೆ ರಾಜ್ಯಗಳಿಗೆ ಕರೆ**

ನವದೆಹಲಿ, ಡಿ. 9– ಸಾಲ ಮತ್ತು ಧನಸಹಾಯಗಳ ಮೂಲಕ ರಾಜ್ಯಗಳಿಗೆ ಹಣ ವರ್ಗಾವಣೆ ಪ್ರಮಾಣ ಬೆಳೆಯುತ್ತಿರುವುದರಿಂದ, ಕೃಷಿ ರಂಗದಿಂದ ಹಾಗೂ ನೀರಾವರಿ ಮತ್ತು ವಿದ್ಯುತ್ ದರಗಳ ಪುನರ್ ವಿಮರ್ಶೆ ಮಾಡುವ ಮೂಲಕ ಹೆಚ್ಚು ಹೆಚ್ಚು ಸಂಪನ್ಮೂಲ ಸಂಗ್ರಹಿಸಲು ತುರ್ತು ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರ ಹಣಕಾಸು ಸಚಿವ ಶಾಖೆ ರಾಜ್ಯಗಳನ್ನು ಕೇಳಿದೆ.

ರಾಜ್ಯಗಳ ಮುಖ್ಯಮಂತ್ರಿಗಳಿಗೆ ಹಣಕಾಸು ಶಾಖೆ ಬರೆದಿರುವ ಒಂದು ಪತ್ರದಲ್ಲಿ, 'ಮಾಮೂಲು ವೆಚ್ಚ ಹಾಗೂ ಅನಾವೃಷ್ಟಿ ಮತ್ತು ಪ್ರವಾಹ ಪರಿಹಾರಕ್ಕಾಗಿ ರಾಜ್ಯಗಳಿಗೆ ಅಧಿಕ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ವರ್ಗಾಯಿಸಿರುವುದರಿಂದ ಈ ವರ್ಷ ಆಯವ್ಯಯ ಹೊಂದಾಣಿಕೆ ತೀರಾ ಕಠಿಣವಾಗಿದೆ' ಎಂದು ತಿಳಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಡಿಸೆಂಬರ್ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಾದಶಿ ಗಂ. 07-14 **ನಕ್ಷತ್ರ:** ಸ್ವಾತಿ ಗಂ. 11-50 **ಯೋಗ:** ಅತಿಗಂಡ ಗಂ 22-34 **ಕರಣ:** ತೈತಿಲ ಗಂ. 07-14, ವೃಶ್ಚಿಕ ಮಾಸದ 24 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 3.

ರಾಹುಕಾಲ: ಸಾಯಂಕಾಲ 04-30 – 06-00

ಸೂರ್ಯೋದಯ: 06-46 ಸೂರ್ಯಾಸ್ತ: 06-00

ಮುಸ್ಲಿಂ ದಿನಾಂಕ: 25 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ: 10, 2

ಮೇಷ: ನಾನಾ ಬಗೆಯ ಚಿಂತನೆಗಳು ಕಾರ್ಯರೂಪಕ್ಕೆ ಬರುವಂತೆ ನಿಮ್ಮನ್ನು ಹುರಿದುಂಬಿಸಲಿದೆ. ಆದರೆ ಆಕಸ್ಮಿಕವಾಗಿ ಮಾಡುವ ಕೆಲಸದಿಂದ ಧರ್ಮಸಂಕಟದಲ್ಲಿ ಸಿಲುಕುವಂತಾಗಲಿದೆ. ಸಂಜೆ ಸಮಯದಲ್ಲಿ ಸಣ್ಣ ವಿಹಾರಕ್ಕೆ ತೆರಳುವಿರಿ.

ವೃಷಭ: ನಿಮ್ಮ ಮುಂದಿನ ಜೀವನದ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದ ಅನಿವಾರ್ಯತೆಯ ಪ್ರಸಂಗ ಎದುರಾಗುವುದು. ಆತ್ಮಗೌರವ, ರಕ್ಷಣೆ ದೃಷ್ಟಿಯಿಂದ ತಪ್ಪುಗಳನ್ನು ಮಾಡಬೇಕಾದ ಪರಿಸ್ಥಿತಿ ಬರುವುದು.

ಮಿಥುನ: ನೃತ್ಯ ಕಲಿಕೆಯಂತಹ ಇತರೆ ಚಟುವಟಿಕೆಯಲ್ಲಿನ ಆಸಕ್ತಿಯಿಂದಾಗಿ ಶೈಕ್ಷಣಿಕವಾಗಿ ಹಿಂದುಳಿಯುವ ಪರಿಸ್ಥಿತಿ ಬರಲಿದೆ. ಹಲವು ಅಪರೂಪದ ಅವಕಾಶಗಳಿಂದ ವರ್ಚಸ್ಸನ್ನು ಬೆಳೆಸಿಕೊಳ್ಳುವಿರಿ. ನೇಕಾರರಿಗೆ ಉತ್ತಮ ದಿನ.

ಕರ್ಕಾಟಕ: ಉದ್ಯೋಗದಲ್ಲಿ ಬದಲಾವಣೆ ನಿರೀಕ್ಷಿಸುವವರಿಗೆ ಪ್ರಭಾವಿ ವ್ಯಕ್ತಿಗಳ ಪರಿಚಯದಿಂದ ನೂತನ ಕೆಲಸ ಸಂಪಾದನೆಯಲ್ಲಿ ಅನುಕೂಲವಾಗಲಿದೆ. ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಸಿದ್ಧಿಸಲಿದೆ.

ಸಿಂಹ: ಸ್ವಯಂಕೃತ ಅಪರಾಧದಿಂದ ಇಂದಿನ ಜೀವನದಲ್ಲಿ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಸಂಚಾರದ ವೃತ್ತಿಯಲ್ಲಿ ಅಧಿಕ ಶ್ರಮ ಮತ್ತು ಜವಾಬ್ದಾರಿಗಳಿದ್ದರೂ ಅದಕ್ಕೆ ತಕ್ಕಂತಹ ಪ್ರತಿಫಲವನ್ನು ಹೊಂದುವಿರಿ.

ಕನ್ಯಾ: ನಿಮ್ಮ ಮನೋಭಿಲಾಷೆಯಂತೆ ಸಂಘ ಸಂಸ್ಥೆಗಳ ಅಧಿಕಾರ ಪ್ರಾಪ್ತಿಯಾಗಲಿದೆ. ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರಗಳಿಂದ ಅಧಿಕ ಲಾಭಗಳಿಸುವಿರಿ. ಕುಟುಂಬದಲ್ಲಿ ಪರಿಸ್ಥಿತಿಯನ್ನು ಸುಲಭವಾಗಿ ನಿಭಾಯಿಸುವಿರಿ.

ತುಲಾ: ಅತ್ಯಂತ ಬುದ್ಧಿವಂತರಾದ, ತಿಳುವಳಿಕೆ ಹೊಂದಿದವರಾದ ನೀವು ಇಂದು ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯ ಸಾಧಿಸುವಲ್ಲಿ ವಿಫಲರಾಗುವಿರಿ. ವ್ಯವಹಾರದಲ್ಲಿ ಹೊಸ ಒಪ್ಪಂದಗಳು ಉಂಟಾಗಲಿದೆ.

ವೃಶ್ಚಿಕ: ಆತ್ಮವಿಶ್ವಾಸದಿಂದ ಹೊಸ ಯೋಜನೆ ಆರಂಭಿಸುವಿರಿ. ಜವಾಬ್ದಾರಿಗಳನ್ನು ಇತರರಿಗೆ ವಹಿಸಿ ಆರಾಮವಾಗಿರಲು ತೀರ್ಮಾನಿಸುವುದು ಉತ್ತಮ. ನಗದು ವ್ಯವಹಾರವನ್ನು ಮಾಡುವಲ್ಲಿ ಮೋಸ ಹೋಗುವ ಸಾಧ್ಯತೆಗಳಿದೆ.

ಧನು: ರಾಜಕೀಯ ಕ್ಷೇತ್ರದಲ್ಲಿ ಇರುವವರು ಈ ದಿನ ಪಕ್ಷ ಬಲಪಡಿಸಲು, ಅನುಯಾಯಿಗಳನ್ನು ಸಂಪಾದಿಸಿಕೊಳ್ಳಲು ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆ. ತಂದೆಯವರು ನಿಮ್ಮ ನೆರವಿಗೆ ನಿಲ್ಲಲಿದ್ದಾರೆ.

ಮಕರ: ನಿಶ್ಚಿತ ರೂಪದಲ್ಲಿ ಮತ್ತು ನಿಶ್ಚಿತ ಸಮಯಕ್ಕೆ ಸರಿಯಾಗಿ ಕೆಲಸಗಳು ಜರುಗಲಿವೆ. ಕೃಷಿ ವರ್ಗದವರಿಗೆ ಹೆಚ್ಚಿನ ಕೆಲಸಗಳು ಪ್ರಾರಂಭವಾಗುವುದು. ಸಿವಿಲ್ ಇಂಜಿನೀಯರ್‌ಗಳು ಬಳಸುವ ತಂತ್ರಜ್ಞಾನದಲ್ಲಿ ಹೆಚ್ಚಿನ ಗಮನವಿರಲಿ.

ಕುಂಭ: ಖರ್ಚಿಗೆ ಅನೇಕ ಹೊಸ ದಾರಿಗಳು ಹುಟ್ಟುಕೊಳ್ಳುವುದರಿಂದ ಅನಗತ್ಯ ವಸ್ತು ಖರೀದಿಸುವುದನ್ನು ಕಡಿಮೆ ಮಾಡುವುದು ಉತ್ತಮ. ಗೃಹ ನಿರ್ಮಾಣದ ಕೆಲಸವನ್ನು ಆರಂಭಿಸಲು ಸೂಕ್ತ ಸಮಯವನ್ನು ತಿಳಿದುಕೊಳ್ಳುವಿರಿ.

ಮೀನ: ಅಸಾಧ್ಯ ಕಾರ್ಯಗಳನ್ನೂ ಸಹ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಆದರೆ ಆ ಛಲವನ್ನು ಒಳ್ಳೆಯ ಮಾರ್ಗದಲ್ಲಿ ಉಪಯೋಗಿಸಿಕೊಳ್ಳಿರಿ. ಲೆಕ್ಕ ಪರಿಶೋಧಕರಿಗೆ ಆದಾಯದಿಂದ ತೃಪ್ತಿ ಉಂಟಾಗುವುದು.

ಪದಬಂಧ 5525

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಿಂದು ರೂಪದ ವರ್ಣ (4)
3.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
5.ತೂಕ ಮಾಡುವ ಸಾಧನ (3)
6.ಸ್ಮರಣೆ ಈರೀತಿ ಬಂದಿದೆ (3)
8.ಸಂಕಲನ ಮಾಡುವಾಗ ನಡೆದ ಜಗಳ (3)
9.ಈ ಪರಿ ಓಡಿಹೋಗುವಿಕೆ! (3)
10.ವರನಿಗೆ ನೀಡಿದ ಚಿನ್ನದ ನಾಣ್ಯ (3)
12.ಹಾಡಿನ ವಿಸ್ತಾರಗೊಳ್ಳುವ ಭಾಗ (3)
14.ಭಾನುವಾರವನ್ನು ಹೀಗೂ ಹೇಳುವರು (4)
15.ಅನೇಕ ಜನರ ಭೀಕರ ಕೊಲೆ (4)

ಮೇಲಿಂದ ಕೆಳಕ್ಕೆ

1.ರಾಜನ ಗೃಹ (4)
2.ವಿರಳವಾಗಿ ಕಾಣುತ್ತಿರುವ ರಕ್ತ (3)
3.ವ್ಯಾಯಾಮ ಶಾಲೆಯಿದು (3)
4.ಮಲಗುವ ಮನೆಯಿದು (4)
7.ಪುರಿಯೊಳಗಿರುವ ರಾಜಕೀಯ ಮುಂದಾಳು (3)
8.ಈತ ಪೆದ್ದ (3)
9.ನಮ್ಮ ಸುತ್ತಲಿನ ಪ್ರದೇಶ (4)
11.ಬಯಕೆ ಹೀಗೆ ಬಂದಿದೆ (4)
12.ಪರವಾಗಿ ಪಡೆದ ವೇತನ! (3)
13.ವಿವಾದವಿಲ್ಲದೆ ನಡೆದ ಲಗ್ನ (3)

1			2	■	3			4
	■	■		■		■	■	
	■	■	5			■	■	
6		7	■	■	■	8		
■	■		■	■	■		■	■
9			■	■	■	10		11
	■	■	12		13	■	■	
	■	■		■		■	■	
14				■	15			

5524ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸಮಕಾಲೀನ 4.ಅಕ್ಷರ
5.ರಸನ 8.ಅಂಕ
9.ನಾಟಿ 10.ಚಿಪ್ಪಿಗ
11.ಶವಂ 12.ಅಂಕೆ
13.ವಡಬ 15.ಜನಕ
16.ರಕ್ತಚಂದನ

ಮೇಲಿಂದ ಕೆಳಕ್ಕೆ:
1.ಪ್ರಾಕಾರ 2.ಸರ
3.ನರಕ 4.ಅವಿನಾಭಾವ
6.ನಯವಂಚಕ 7.ನಾಚಿಕೆ
8.ಅಂಗಡಿ 12.ಅಂಬರ
14.ಪ್ರಚಂಡ 15.ಜನ

ಸುಡೊಕು 5911

3		2	1		4		6	
	1						3	2
7			6		2	5		
2					3			5
				4		2	9	
			9					1
	4	1	2				8	
9				7	8		5	
	6			5		4		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5910 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಧಾನಸೌಧ ಠಾಣೆಯಲ್ಲಿ ಇಬ್ಬರ ಮೇಲೆ ಪ್ರಕರಣ ದಾಖಲು

ಮುಖ್ಯಮಂತ್ರಿ ಕಾರ್ಯದರ್ಶಿ ಹೆಸರಲ್ಲಿ ನಕಲಿ ಲೆಟರ್‌ಹೆಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿ ಎಂದು ಹೇಳಿಕೊಂಡು ನಕಲಿ ಲೆಟರ್ ಹೆಡ್ ಸೃಷ್ಟಿಸಿ ವಂಚಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮುಖ್ಯಮಂತ್ರಿ ಅವರ ಆಪ್ತ ಕಾರ್ಯದರ್ಶಿ ವೆಂಕಟೇಶಯ್ಯ ಅವರು ನಕಲಿ ಲೆಟರ್ ಹೆಡ್ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ರಾಜೇಂದ್ರ ಹಾಗೂ ಅಂಕಿತ್ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಪ್ತ ಕಾರ್ಯದರ್ಶಿ– ರಾಜೇಂದ್ರ ಹೆಸರಿನಲ್ಲಿ ನಕಲಿ ಲೆಟರ್ ಹೆಡ್ ಸೃಷ್ಟಿಸಿ, ಲೋಕೋಪಯೋಗಿ ಸಚಿವರಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿಯವರ ಆದೇಶದ ಮೇರೆಗೆ ಅಂಕಿತ್ ಅವರನ್ನು ತಾತ್ಕಾಲಿಕವಾಗಿ ಲೋಕೋಪಯೋಗಿ ಸಚಿವಾಲಯದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವಂತೆ ಲೆಟರ್ ಹೆಡ್‌ನಲ್ಲಿ ಬರೆಯಲಾಗಿತ್ತು.'

'ಮುಖ್ಯಮಂತ್ರಿ ಅವರಿಗೆ ರಾಜೇಂದ್ರ ಹೆಸರಿನ ಯಾರೊಬ್ಬರೂ ಆಪ್ತ ಕಾರ್ಯದರ್ಶಿ ಇಲ್ಲ. ಈ ಬಗ್ಗೆ ಅನುಮಾನಗೊಂಡಿದ್ದ ಸಿಬ್ಬಂದಿ, ವೆಂಕಟೇಶಯ್ಯ ಅವರಿಗೆ ವಿಷಯ ತಿಳಿಸಿದ್ದರು. ಲೆಟರ್ ಹೆಡ್ ಸಮೇತ ವೆಂಕಟೇಶಯ್ಯ ಠಾಣೆಗೆ ದೂರು ನೀಡಿದ್ದಾರೆ' ಎಂದು ತಿಳಿಸಿದರು.

ಕಡಿಮೆ ಬೆಲೆಗೆ ವಾಹನ: ನಕಲಿ ಪೊಲೀಸ್ ಬಂಧನ

ಬೆಂಗಳೂರು: ಪೊಲೀಸರು ಜಪ್ತಿ ಮಾಡಿರುವ ವಾಹನಗಳನ್ನು ಕಡಿಮೆ ಬೆಲೆಗೆ ಕೊಡಿಸುವುದಾಗಿ ಹೇಳಿ ಹಣ ಪಡೆದು ವಂಚಿಸುತ್ತಿದ್ದ ಆರೋಪಿ ಕೆ. ಲೂರ್ದನಾಥನ್ (53) ಅವರನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವೈಟ್‌ಫೀಲ್ಡ್ ನಿವಾಸಿ ಲೂರ್ದನಾಥನ್, ತಾನೊಬ್ಬ ಪೊಲೀಸ್ ಎಂಬುದಾಗಿ ಹೇಳಿ ಜನರನ್ನು ವಂಚಿಸುತ್ತಿದ್ದ. ಸಾರ್ವಜನಿಕರೊಬ್ಬರು ನೀಡಿದ್ದ ದೂರು ಆಧರಿಸಿ ಈತನನ್ನು ಬಂಧಿಸಲಾಗಿತ್ತು. ಸದ್ಯ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 50 ಸಾವಿರ ಪಡೆದು ಪರಾರಿ: 'ಬೇಗೂರು ಠಾಣೆ ಬಳಿ ಇತ್ತೀಚೆಗೆ ಬಂದಿದ್ದ ಆರೋಪಿ, ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದ. ಠಾಣೆಯಲ್ಲಿ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳಿಗಳನ್ನು ಕಡಿಮೆ ಬೆಲೆಗೆ ಕೊಡಿಸುತ್ತೇನೆ ಎಂಬುದಾಗಿ ಹೇಳಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ಮಾತು ನಂಬಿದ್ದ ದೂರುದಾರ, ಎರಡು ದ್ವಿಚಕ್ರ ವಾಹನ ಖರೀದಿಸಲೆಂದು ₹ 50 ಸಾವಿರ ನೀಡಿದ್ದರು. ಹಣ ಪಡೆದು ಆರೋಪಿ ಪರಾರಿಯಾಗಿದ್ದ. ವಾಪಸು ಬಂದಿರಲಿಲ್ಲ' ಎಂದು ಮೂಲಗಳು ಹೇಳಿವೆ.

ಗೃಹ ರಕ್ಷಕ ದಳದಲ್ಲಿ ಕೆಲಸ: 'ಲೂರ್ದನಾಥನ್, ಕೆಲ ವರ್ಷ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿ ಆಗಿದ್ದ. ನಂತರ, ಗೃಹ ರಕ್ಷಕ ದಳದಲ್ಲಿ ಕೆಲಸಕ್ಕೆ ಸೇರಿದ್ದ. ಎರಡು ವರ್ಷಗಳ ಹಿಂದೆ ಕೆಲಸ ಬಿಟ್ಟಿದ್ದ. ಇದಾದ ನಂತರವೂ ಆರೋಪಿ, ಗೃಹ ರಕ್ಷಕ ದಳದ ಸಮವಸ್ತ್ರ ಧರಿಸಿಕೊಂಡು ಓಡಾಡುತ್ತಿದ್ದ. ತಾನೊಬ್ಬ ಪೊಲೀಸ್ ಎಂಬುದಾಗಿ ಹೇಳಿಕೊಂಡು ಜನರನ್ನು ವಂಚಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಣತ್ತೂರು, ಬಳಗೆರೆ ರಸ್ತೆ ಅಭಿವೃದ್ಧಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪಣತ್ತೂರು, ಬಳಗೆರೆ ಮುಖ್ಯ ರಸ್ತೆಯನ್ನು ಅಭಿವೃದ್ಧಿಗೊಳಿಸು-ವಂತೆ ಒತ್ತಾಯಿಸಿ ಅಪಾರ್ಟ್‌ಮೆಂಟ್ ನಿವಾಸಿಗಳು ಮಾನವ ಸರಪಳಿ ನಿರ್ಮಿಸುವ ಮೂಲಕ ಪ್ರತಿಭಟನೆ ನಡೆಸಿದರು.

ವರ್ತೂರು ರೈಸಿಂಗ್ ಹಾಗೂ ಬಳಗೆರೆ ಕನೆಕ್ಟ್ ಸಂಘಟನೆಗಳ ಸಹಯೋಗದಲ್ಲಿ ಬಳಗೆರೆ ಸಮೀಪ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಬಿಬಿಎಂಪಿಯ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.


ಅಪಾರ್ಟ್‌ಮೆಂಟ್ ನಿವಾಸಿಗಳು ಪ್ರತಿಭಟನೆ ನಡೆಸಿದರು

ರಾಜ್ಯ ಹೆದ್ದಾರಿ–35 (ಬಳಗೆರೆ,-ಪಣತ್ತೂರು) ರಸ್ತೆ ವಿಸ್ತರಣೆ ಮಾಡಲು ಅಧಿಕಾರಿಗಳು ವಿಳಂಬ ಮಾಡು-ತ್ತಿರುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಶಾಲಾ ಮಕ್ಕಳು ಮತ್ತು ಉದ್ಯೋಗಿಗಳು ಸಮಯಕ್ಕೆ ಸರಿಯಾಗಿ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೆ ಪಣತೂರು ಸಮೀಪ ರೈಲ್ವೆ ಕೆಳಸೇತುವೆಯು ನಿರ್ಮಾಣವಾಗಿ ವರ್ಷ ಕಳೆದರೂ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡದಿರುವುದರಿಂದ ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ (ದಟ್ಟಣೆ ಅವಧಿ) ವೇಳೆ ಸಂಚಾರ ದಟ್ಟಣೆ ಉಂಟಾಗುತ್ತಿದ್ದು ವಾಹನಗಳು ನಿಂತಲ್ಲೆ ನಿಂತುಕೊಂಡಿದ್ದು ಸವಾರರು ಪರಿತಪಿಸಬೇಕಾಗಿದೆ ಎಂದು ಪ್ರತಿಭಟನಕಾರರು ದೂರಿದರು.

ವರ್ತೂರು, ಬಳಗೆರೆ, ಪಣತ್ತೂರು, ಗುಂಜೂರು, ಗುಂಜೂರು ಪಾಳ್ಯ ಭಾಗದ ಅಪಾರ್ಟ್‌ಮೆಂಟ್ ನಿವಾಸಿಗಳು ಹಾಗೂ ಸ್ಥಳೀಯರು ಭಾಗವಹಿಸಿದ್ದರು.

ನಾಪತ್ತೆಯಾಗಿದ್ದ ಯುವಕನ ಶವ ಪತ್ತೆ


ಭರತ್

ಕೊಟ್ಟಿಗೆಹಾರ (ಚಿಕ್ಕಮಗಳೂರು): ಮೂಡಿಗೆರೆ ತಾಲ್ಲೂಕಿನ ಬಲ್ಲಾಳರಾಯನ ದುರ್ಗದ ಸಮೀಪ ಇರುವ ರಾಣಿಝರಿಗೆ ಚಾರಣಕ್ಕೆ ಬಂದು ನಾಪತ್ತೆಯಾಗಿದ್ದ ಬೆಂಗಳೂರಿನ ಭರತ್ (30) ಶವ ಶನಿವಾರ ಪತ್ತೆಯಾಗಿದೆ.

'ರಾಣಿಝರಿ ಬಳಿ ಬೈಕ್ ನಿಲ್ಲಿಸಿ, ಬೆಟ್ಟ ಏರಿದ್ದ ಅವರು ಮೊಬೈಲ್ ಫೋನ್ ಹಾಗೂ ಚಪ್ಪಲಿಯನ್ನು ಅಲ್ಲೇ ಬಿಟ್ಟಿದ್ದರು. ಎಂಜಿನಿಯರ್ ಆಗಿದ್ದ ಅವರು ಬೆಂಗಳೂರಿನ ಕಂಪನಿಯೊಂದ-ರಲ್ಲಿ ಕೆಲಸ ಮಾಡುತ್ತಿದ್ದರು. ಕಂಪನಿಯು ಮೂರು ತಿಂಗಳ ಸಂಬಳ ನೀಡಿ ಕೆಲಸದಿಂದ ತೆಗೆದು ಹಾಕಿತ್ತು ಎಂಬ ಮಾಹಿತಿ ಲಭ್ಯವಾಗಿತ್ತು. ಬುಧವಾರ ಬೆಂಗಳೂರಿನಿಂದ ದುರ್ಗದ ಹಳ್ಳಿಗೆ ಬಂದಿದ್ದ ಭರತ್ ಅವರ ಮೊಬೈಲ್ ಫೋನ್ ನಾಟ್ ರೀಚಬಲ್ ಆಗಿದ್ದ ಕಾರಣ ಅವರ ಪೋಷಕರು ಬಾಳೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಣಿಝರಿಯ ಪ್ರಪಾತದಿಂದ ಶವವನ್ನು ಬಾಳೂರು ಪೊಲೀಸರು, ಸ್ಥಳೀಯರು ಮೇಲಕ್ಕೆತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

₹30 ಲಕ್ಷ ಮೌಲ್ಯದ ನಾಟಾ ವಶ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಪರವಾನಗಿ ಪಡೆಯದೆ ಅಕ್ರಮವಾಗಿ ಸಾಗಿಸುತ್ತಿದ್ದ ಸುಮಾರು ₹30 ಲಕ್ಷ ಮೌಲ್ಯದ ಮರದ ತುಂಡುಗಳನ್ನು ನೆಲಮಂಗಲ ವಲಯ ಅರಣ್ಯಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ನೆಲಮಂಗಲ ವಲಯ ಅರಣ್ಯಾಧಿಕಾರಿ ಶ್ರೀಧರ್ ಎಸ್. ಮತ್ತು ಸಿಬ್ಬಂದಿ ಯಂಟಗಾನಹಳ್ಳಿ ಟೋಲ್ ಬಳಿ ಗುರುವಾರ ರಾತ್ರಿ, ಕುಣಿಗಲ್ ಕಡೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಕ್ಯಾಂಟರ್ ವಾಹನವನ್ನು ಪರಿಶೀಲಿಸಿದಾಗ ಬೀಟೆ, ಹಲಸು, ಹೊನ್ನೆಮರದ ತುಂಡಗಳು ಪತ್ತೆಯಾಗಿದ್ದವು.


ಪರವಾನಗಿ ಇಲ್ಲದ ಮರಗಳ ತುಂಡುಗಳನ್ನು ವಶಪಡಿಸಿಕೊಂಡ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ

ಸಕಲೇಶಪುರದಿಂದ ತಂದಿರುವುದಾಗಿ ಚಾಲಕ ಕುಮಾರ್ ಟಿ. ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಹಲಸು, ಹೊನ್ನೆ ಮರಗಳಿಗೆ ಮಾತ್ರ ಅನುಮತಿ ಪಡೆದು, ಅವುಗಳೊಂದಿಗೆ ಅನುಮತಿ ಇಲ್ಲದೇ ಬೀಟೆ ಮರದ ತುಂಡುಗಳನ್ನು ಸಾಗಾಟ ಮಾಡಲಾಗುತ್ತಿತ್ತು ಎಂದು ನೆಲಮಂಗಲ ವಲಯ ಅರಣ್ಯಾಧಿಕಾರಿ ಶ್ರೀಧರ್ ಎಸ್. ತಿಳಿಸಿದರು.

ಪೂಜೆ ನೆಪದಲ್ಲಿ ಚಿನ್ನ ಕದ್ದ ಅಪರಿಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿ ಹಾಗೂ ಮಗನಿಗೆ ಗಂಡಾಂತರವಿರುವುದಾಗಿ ಹೇಳಿ ಪೂಜೆ ನೆಪದಲ್ಲಿ ಚಿನ್ನದ ಸರ ಕದ್ದೊಯ್ಯಲಾಗಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ಹೊಸ ರಸ್ತೆಯ ನಿವಾಸಿ, 45 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಪ್ರಕರಣ ದಾಖಲಿ-ಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿ-ಸಲಾಗಿದೆ' ಎಂದು ಹೇಳಿದರು.

'ದೂರುದಾರ ಮಹಿಳೆಯ ಮನೆ ಬಳಿ ಡಿ. 2ರಂದು ಬೆಳಿಗ್ಗೆ ಬಂದಿದ್ದ ಆರೋಪಿ, 'ನಿನ್ನ ಪತಿ-ಮಗನಿಗೆ ಅಮಾವಾಸ್ಯೆ ಮುಗಿದು ಮೂರು ದಿನಗಳ ನಂತರ ದೊಡ್ಡ ಗಂಡಾಂತರವಿದೆ' ಎಂದಿದ್ದ. ಹೆದರಿದ್ದ ಮಹಿಳೆ, ಪರಿಹಾರವೇನು ? ಎಂದು ಕೇಳಿದ್ದರು.' 'ವಿಶೇಷ ಪೂಜೆ ಮಾಡಬೇಕೆಂದು ಹೇಳಿದ್ದ ಆರೋಪಿ, ₹ 1,500 ಪಡೆದಿದ್ದ. ನಂತರ, ಮನೆಯಲ್ಲಿದ್ದ ನಿಂಬೆ ಹಣ್ಣು ತರಿಸಿದ್ದ. ಮಹಿಳೆಯ ಸುತ್ತ ಮೂರು ಬಾರಿ ನಿಂಬೆ ಹಣ್ಣು ಸುತ್ತಿಸಿದ್ದ. ಕೆಲ ಕ್ಷಣಗಳಲ್ಲಿ ಮಹಿಳೆ ಪ್ರಜ್ಞೆ ತಪ್ಪಿಬಿದ್ದಿದ್ದರು. ನಂತರ ಮಹಿಳೆ ಎಚ್ಚರಗೊಂಡಾಗ, ಕೊರಳಲ್ಲಿದ್ದ 12 ಗ್ರಾಂ ಚಿನ್ನದ ಸರ ಇರಲಿಲ್ಲ'. 'ಆರೋಪಿಯ ಪತ್ತೆಗಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಚಿತ್ರಾವಳಿ


ವಿನಾಯಕ ಮಿತ್ರ ಮಂಡಳಿ ಸಹಯೋಗದಲ್ಲಿ ಜಯನಗರದ ಜಯರಾಮ ಸೇವಾ ಮಂಡಳಿ ಶನಿವಾರ ಆಯೋಜಿಸಿದ್ದ ಕಾರ್ತೀಕ ಮಾಸದ ದೀಪೋತ್ಸವದಲ್ಲಿ ಭಕ್ತರು ಹಣತೆಗಳನ್ನು ಹಚ್ಚಿದರು.



ಬೆಂಗಳೂರಿನ ರೇವಾ ವಿಶ್ವವಿದ್ಯಾಲಯ ವತಿಯಿಂದ ಶಿಕ್ಷಣ ಸಚಿವಾಲಯದ ನಾವೀನ್ಯ ಕೋಶ ಮತ್ತು ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್ (ಎಐಸಿಟಿಇ) ಸಹಯೋಗದಲ್ಲಿ ಶನಿವಾರ ನಡೆದ ಐಐಸಿ ಪ್ರಾದೇಶಿಕ ಸಭೆಯಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ್ ಕುಮಾರ್ ಗುಪ್ತಾ ಅವರನ್ನು ಗೌರವಿಸಲಾಯಿತು. ಕುಲಾಧಿಪತಿ ಪಿ.ಶ್ಯಾಮರಾಜು, ಕುಲಪತಿ ಎಂ. ಧನಂಜಯ ಮತ್ತು ರೇವಾ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಎನ್‌.ರಮೇಶ್ ಭಾಗವಹಿಸಿದ್ದರು.

ಪ್ರತ್ಯೇಕ ಅಪಘಾತ: ಇಬ್ಬರು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎರಡು ಕಡೆಗಳಲ್ಲಿ ಶುಕ್ರವಾರ ತಡರಾತ್ರಿ ಅಪಘಾತಗಳು ಸಂಭವಿಸಿದ್ದು, ಎಂಜಿನಿಯರಿಂಗ್ ಪದವೀಧರ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ರಾಜಾಜಿನಗರ ನಿವಾಸಿ ಯಶಸ್ (27) ಹಾಗೂ ಯಶವಂತಪುರದ ವಿಜಯ್ (29) ಮೃತರು. ಎರಡೂ ಅಪಘಾತಗಳ ಸಂಬಂಧ ಮಲ್ಲೇಶ್ವರ ಹಾಗೂ ಕೆಂಗೇರಿ ಸಂಚಾರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ಯಶಸ್ ಅವರು ರಾಜಾಜಿನ-ಗರದಿಂದ ಯಶವಂತಪುರ ಕಡೆಗೆ ಡಾ. ರಾಜ್‌ಕುಮಾರ್ ರಸ್ತೆ ಮೂಲಕ ಹೊರಟಿದ್ದರು. ಒರಾಯನ್ ಮಾಲ್ ಬಳಿ ಬೈಕ್ ಉರುಳಿಬಿದ್ದಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಯಶಸ್ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕಂಪನಿಯೊಂದರ ಉದ್ಯೋಗಿ ವಿಜಯ್ (29), ಬೈಕ್‌ನಲ್ಲಿ ನೈಸ್ ರಸ್ತೆಯಲ್ಲಿ ಹೊರಟಿದ್ದರು. ಉಲ್ಲಾಳು ಮೇಲ್ಸೇತುವೆ ಬಳಿ ಬೈಕ್ ಹಾಗೂ ಅಪರಿಚಿತ ವಾಹನ ನಡುವೆ ಡಿಕ್ಕಿ ಆಗಿತ್ತು. ಬೈಕ್ ಸಮೇತ ಉರುಳಿಬಿದ್ದು ತೀವ್ರ ಗಾಯಗೊಂಡು ವಿಜಯ್ ಅಸುನೀಗಿದ್ದಾರೆ. ಅಪಘಾತದ ಬಳಿಕ ವಾಹನ ಸವಾರ ಸ್ಥಳದಿಂದ ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ನಗರದಲ್ಲಿ ಇದೇ 16-17ಕ್ಕೆ ಮಧುಮೇಹ ಸಮ್ಮೇಳನ

ಬೆಂಗಳೂರು: ರಾಷ್ಟ್ರೀಯ ಮಧುಮೇಹ ಅಧ್ಯಯನ ಸಂಸ್ಥೆಯ ಕರ್ನಾಟಕ ರಾಜ್ಯ ಘಟಕವು ಇದೇ 16 ಮತ್ತು 17ರಂದು ಇಲ್ಲಿನ ಕ್ಯಾಪಿಟಲ್ ಹೋಟೆಲ್‌ನಲ್ಲಿ ಮಧುಮೇಹ ಸಮ್ಮೇಳನ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ವಿಜಯಕುಮಾರ್ ಕೆ., 'ಎರಡು ದಿನಗಳ ಸಮ್ಮೇಳನದಲ್ಲಿ ಮಧುಮೇಹ ತಡೆಗಟ್ಟುವಿಕೆ, ಚಿಕಿತ್ಸೆಯ ನಿಖರತೆ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ಮಾಡಲಾಗುತ್ತದೆ. ಸುಮಾರು 200 ಭಾಷಣಕಾರರು ಭಾಗವಹಿಸಲಿ-ದ್ದಾರೆ. ಸಾವಿರಕ್ಕೂ ಅಧಿಕ ವೈದ್ಯರು ಹಾಗೂ ವೈದ್ಯಕೀಯ ಕ್ಷೇತ್ರದ ಪ್ರತಿನಿಧಿಗಳು ಪಾಲ್ಗೊಳ್ಳುತ್ತಾರೆ' ಎಂದು ಹೇಳಿದರು.

'ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಸಂಶೋಧಕ ಡಾ.ವಿ. ಮೋಹನ್ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಗೋವಿಂದನ್ ರಂಗರಾಜನ್ ಭಾಗವಹಿಸುತ್ತಾರೆ. ಸಮ್ಮೇಳನದ ಭಾಗವಾಗಿ ಇದೇ 17ರಂದು ಬೆಳಿಗ್ಗೆ 7 ಗಂಟೆಗೆ ವಾಕಥಾನ್ ಆಯೋಜಿಸಲಾಗಿದೆ' ಎಂದು ತಿಳಿಸಿದರು.

ಬಸವನಗುಡಿಯಲ್ಲಿ ಶನಿವಾರದಿಂದಲೇ ಜಾತ್ರೆ ಸಂಭ್ರಮ

ಕಡಲೆಕಾಯಿ ಪರಿಷೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಾರಂಪರಿಕ ಕಡಲೆಕಾಯಿ ಪರಿಷೆ ಬಸವನಗುಡಿಯಲ್ಲಿ ಡಿ.11ರಂದು ನಡೆಯಲಿದೆ.

ಕಾರ್ತೀಕ ಮಾಸದ ಕೊನೆ ಸೋಮವಾರ ದೊಡ್ಡ ಬಸವಣ್ಣ ದೇವಸ್ಥಾನದಲ್ಲಿ ಬಸವನಿಗೆ ಕಡಲೆಕಾಯಿ ಹಾಗೂ ಪುಷ್ಪಗಳಿಂದ ಅಲಂಕಾರ ಮಾಡಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಿಗ್ಗೆ ಪರಿಷೆಗೆ ಚಾಲನೆ ನೀಡಲಿದ್ದಾರೆ.

ವಾರಾಂತ್ಯ ಸರ್ಕಾರಿ ರಜೆ ಇದ್ದರಿಂದ ಶನಿವಾರವೇ ಬಸವನಗುಡಿ ಮುಖ್ಯರಸ್ತೆಯಲ್ಲಿ ಕಡಲೆಕಾಯಿ, ತಿನಿಸು ಸೇರಿದಂತೆ ಜಾತ್ರೆಯ ಸಂಭ್ರಮವಿತ್ತು. ಕನಕಪುರ, ದೊಡ್ಡಬಳ್ಳಾಪುರ, ರಾಮನಗರ, ಮಾಗಡಿ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಮೈಸೂರು, ಮಂಡ್ಯ, ತುಮಕೂರು ಕಡೆಗಳಿಂದ ತಂದಿದ್ದ ಕಡಲೆಕಾಯಿಯನ್ನು ಇಲ್ಲಿ ಮಾರಾಟ ಮಾಡಲು ವ್ಯಾಪಾರಿಗಳು ಸಜ್ಜಾಗಿದ್ದರು.

ಡಿ.11ರ ಸಂಜೆ 6ಕ್ಕೆ ಕೆಂಪಾಬುಧಿ ಕೆರೆಯಲ್ಲಿ ತೆಪ್ಪೋತ್ಸವ ನಡೆಯಲಿದ್ದು, ಕಹಳೆ ಬಂಡೆ ಉದ್ಯಾನದಲ್ಲಿ ಸಂಜೆ ಮೇಖಲಾ ಅಗ್ನಿಹೋತ್ರಿ ತಂಡದಿಂದ ನಾದ–ನಿನಾದ ಕಾರ್ಯಕ್ರಮ ನಡೆಯಲಿದೆ. ನರಸಿಂಹಸ್ವಾಮಿ ಉದ್ಯಾನದಲ್ಲಿ ಸಿರಿಕಲಾ ಮೇಳ ತಂಡದಿಂದ ಯಕ್ಷಗಾನ ಆಯೋಜಿಸಲಾಗಿದೆ.

ಡಿ.12ರ ಮಂಗಳವಾರ ಸಂಜೆ ಕಹಳೆ ಬಂಡೆಯಲ್ಲಿ ನಾಟ್ಯ ಭೈರವಿ ಶಾಲೆ ತಂಡದಿಂದ ನೃತ್ಯ, ನರಸಿಂಹ ಸ್ವಾಮಿ ಉದ್ಯಾನದಲ್ಲಿ ಸೀತಾರಾಮ ಮುನಿಕೋಟಿ ಅವರಿಂದ ಹರಿಕಥೆ ನಡೆಯಲಿದೆ.

ಗ್ರಾಮೀಣ ಸೊಗಡಿನ ಈ ಹಬ್ಬವನ್ನು ಪ್ಲಾಸ್ಟಿಕ್‌ಮುಕ್ತವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ತಿಳಿಸಿದರು.



ಬಸವನಗುಡಿ ಮುಖ್ಯರಸ್ತೆಯಲ್ಲಿ ಕಡಲೆಕಾಯಿ ಖರೀದಿ ಮಾಡಿದ ಯುವತಿಯರು

ಮೇಯರ್ ಆಹ್ವಾನಿತರು!: ಕಡಲೆಕಾಯಿ ಪರಿಷೆಯ ಆಹ್ವಾನ ಪತ್ರಿಕೆಯಲ್ಲಿ ಬಿಬಿಎಂಪಿ ಮಹಾಪೌರರು, ಉಪ ಮಹಾಪೌರರು, ನಗರಸಭಾ ಸದಸ್ಯರು ಆಹ್ವಾನಿತರಾಗಿದ್ದಾರೆ. ಬಿಬಿಎಂಪಿಯಲ್ಲಿ ಚುನಾಯಿತ ಸದಸ್ಯರು ಇಲ್ಲ ಎಂಬುದನ್ನು ಆಹ್ವಾನ ಪತ್ರಿಕೆ ಮುದ್ರಿಸಿದವರು ಮರೆತಿದ್ದಾರೆ' ಎಂದು ಬಸವನಗುಡಿ ನಿವಾಸಿ ಚಂದ್ರಶೇಖರ್ ದೂರಿದರು.

ಬಸವನಗುಡಿ ಕಡಲೆಕಾಯಿ ಪರಿಷೆಗೆ ಸಂಬಂಧಿಸಿದಂತೆ ಮಾಹಿತಿ ಕೊರತೆಯಿದ್ದು, ಬಿಬಿಎಂಪಿ ತನ್ನ ಪಾಲಿನ ಅನುದಾನವನ್ನು ನೀಡಿ ಸುಮ್ಮನಾಗಿದೆ. ಕಳೆದ ವರ್ಷ ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ, ಜಂಟಿ ಆಯುಕ್ತರು ಪರಿಷೆಯ ಜವಾಬ್ದಾರಿ ಹೊತ್ತು ಮೇಲುಸ್ತುವಾರಿ ಮಾಡಿದ್ದರು. ಈ ಬಾರಿ ವಲಯ ಆಯುಕ್ತರಿಂದ ಹಿಡಿದು ಮುಖ್ಯ ಎಂಜಿನಿಯರ್ ರಾಜೇಶ್, ಕಾರ್ಯಪಾಲಕ ಎಂಜಿನಿಯರ್ ರಘು ಅವರು ಮಾಹಿತಿ ನೀಡುವ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಹಾಕುತ್ತಿದ್ದಾರೆ.

'ಕಳೆದ ವರ್ಷ ಚುನಾವಣೆ ಸಂದರ್ಭವಾಗಿದ್ದರಿಂದ ರಾಜಕಾರಣಿಗಳು ಪ್ರಚಾರ ಪಡೆಯಲು ಹೆಚ್ಚು ಓಡಾಡಿದ್ದರು. ಈ ಬಾರಿ ಸ್ಥಳೀಯ ಶಾಸಕರೂ ಸೇರಿದಂತೆ ಎಲ್ಲರೂ ತಣ್ಣಗಿದ್ದಾರೆ' ಎಂದು ಹನುಮಂತನಗರ ನಿವಾಸಿ ವೆಂಕಟೇಶ್ ದೂರಿದರು.

ನೆಲಮಂಗಲ: ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: ದಾಬಸ್‌ಪೇಟೆ, ನೆಲಮಂಗಲ, ತ್ಯಾಮಗೊಂಡ್ಲು, ಅವರೇಹಳ್ಳಿ, ಜಿಂದಾಲ್, ಎಸ್‌ಕೆ ಸ್ಟೀಲ್, ಹಿರೇಹಳ್ಳಿ ಮತ್ತು ಟಿ.ಬೇಗೂರು ವಿದ್ಯುತ್ ವಿತರಣಾ ಕೇಂದ್ರಗಳ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಈ ಭಾಗದ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ನೆಲಮಂಗಲ ಟೌನ್, ಕಸಬಾ, ತ್ಯಾಮಗೊಂಡ್ಲು ಮತ್ತು ಸೋಂಪುರ ಹೋಬಳಿಗಳ ವ್ಯಾಪ್ತಿಯ ಇಎಚ್‌ಟಿ ಸ್ಥಾವರಗಳು, ಕೆಂಪಲಿಂಗನಹಳ್ಳಿ, ಜಕ್ಕಸಂದ್ರ, ಕುಣಿಗಲ್ ಸರ್ಕಲ್, ಬ್ಯಾಡರಹಳ್ಳಿ, ಹುರಳಿಹಳ್ಳಿ, ವೀರರಾಘವನಪಾಳ್ಯ, ವಗ್ರಘಟ್ಟೆ ಪಾಳ್ಯ, ತೊರೆಕೆಂಪೋಹಳ್ಳಿ, ಮೊದಲಕೋಟೆ, ಗಂಗಬೈರಪ್ಪನಪಾಳ್ಯ, ಅಗಸರಹಳ್ಳಿ, ಅರಳಸಂದ್ರ, ಬಸವನಹಳ್ಳಿ, ಮೈಲನಹಳ್ಳಿ, ಹ್ಯಾಡಳು, ಬೈರನಾಯಕನಹಳ್ಳಿ, ಗುಟ್ಟೇಪಾಳ್ಯಲ್ಲಿ ಇಸ್ಲಾಂಪುರ, ಅರಸಿನಕುಂಟೆ, ವಾಜರಹಳ್ಳಿ, ಭಕ್ತನಪಾಳ್ಯ, ಗೆದ್ದಲಹಳ್ಳಿ, ಆದರ್ಶನಗರ, ಯಂಟಗಾನಹಳ್ಳಿ, ಸೊಂಡೆಕೊಪ್ಪ, ಬರದಿ, ಮಂಡಿಗೆರೆ, ಹೂಸೂರು, ಕೋಡಿಪಾಳ್ಯ, ಕಾಚನಹಳ್ಳಿ, ಯರಮಂಚನಹಳ್ಳಿ, ತೊಣಚಿನಕುಪ್ಪೆ, ಬೊಮ್ಮನಹಳ್ಳಿ, ಕೆಂಚನಹಳ್ಳಿ, ಬೂದಿಹಾಲ್, ತ್ಯಾಮಗೊಂಡ್ಲು, ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ತಾವರೆಕೆರೆ, ದೊಡ್ಡಬೆಲೆ, ಮುದ್ದಲಿಂಗನಹಳ್ಳಿ, ಚನ್ನೋಹಳ್ಳಿ, ಗುಂಡೇನಹಳ್ಳಿ, ನರಸೀಪುರ, ಇಸುವನಹಳ್ಳಿ, ಕಳಲುಘಟ್ಟ, ಗೋವೇನಹಳ್ಳಿ, ತಿಪ್ಪಶೆಟ್ಟಿಹಳ್ಳಿ, ಬಿದಲೂರು, ಬೀರಗೊಂಡನಹಳ್ಳಿ, ಓಬಳಾಪುರ, ಕೊಡಿಗೇಹಳ್ಳಿ, ಮಣ್ಣೆ, ಮರಳಕುಂಟೆ, ಎಲೆಕ್ಯಾತನಹಳ್ಳಿ, ಬಳ್ಳಗೆರೆ, ಗೋರಘಟ್ಟ, ಕುಂಟನಗೊಮ್ಮನಹಳ್ಳಿ, ಟಿ.ಬೇಗೂರು, ಹಸಿರುವಳ್ಳಿ, ಮದಗೊಂಡನಹಳ್ಳಿ, ಹನುಮಂತಪುರ, ಅರೆಬೊಮ್ಮನಹಳ್ಳಿ, ಲಕ್ಕಸಂದ್ರ, ತಿಮ್ಮಸಂದ್ರ, ಸಿಪ್ಪಗೊಂಡನಹಳ್ಳಿ, ನೇರಳೇಕೆರೆ, ಮಂಚೇನಹಳ್ಳಿ, ಗೋವಿಂದಪುರ, ಹಾಲೇನಹಳ್ಳಿ, ತೊರೆಪಾಳ್ಯ, ಜಾಜೂರು, ಶಿವಗಂಗೆ, ಗೊಟ್ಟಿಗೆರೆ, ಮಾಚೇನಹಳ್ಳಿ, ಕಂಬಾಳು, ಬಸವಪಟ್ಟಣ, ಗಂಟೆಹೊಸಹಳ್ಳಿ, ಗುರುವನಹಳ್ಳಿ, ಮಾಗೋನಹಳ್ಳಿ, ಗಂಗೀನಪುರ, ಗೌರಾಪುರ, ಭಕ್ತರಪಾಳ್ಯ, ಬಿಲ್ಲಿನಕೋಟೆ, ಕುಲುವನಹಳ್ಳಿ, ಸೂಲಕುಂಟೆ, ಗಂಗೇಗೌಡನಪಾಳ್ಯ, ಪಲ್ಲರಹಳ್ಳಿ, ಗೋವಿಂದಪುರ, ನಸರಸೀಪುರ, ಲಕ್ಕೂರು, ದೇವರಹೊಸಹಳ್ಳಿ, ಅಗಲಕುಪ್ಪೆ, ನಿಡವಂದ, ಹೊನ್ನರಾಯನಹಳ್ಳಿ, ಅವೇರಹಳ್ಳಿ ಮತ್ತು ಕೈಗಾರಿಕಾ ಪ್ರದೇಶ ಹಾಗು ಸುತ್ತಮುತ್ತಲಿನ ಪ್ರದೇಶಗಳು.

ಗೌರಿ ಲಂಕೇಶ್ ಹತ್ಯೆ: ಆರೋಪಿಗೆ ಜಾಮೀನು

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ 11ನೇ ಆರೋಪಿ ಎನ್. ಮೋಹನ್ ನಾಯಕ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಮೋಹನ್ ನಾಯಕ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪುರಸ್ಕರಿಸಿದೆ.

₹ 1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್ ಹಾಗೂ ಇಬ್ಬರ ಭದ್ರತಾ ಖಾತರಿ ಒದಗಿಸಬೇಕು. ಪ್ರತಿ ವಿಚಾರಣೆಗೂ ನ್ಯಾಯಾಲಯಕ್ಕೆ ಹಾಜರಾಗಬೇಕು. ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು. ಇಂಥದ್ದೇ ಪ್ರಕರಣದಲ್ಲಿ ಭಾಗಿಯಾಗುವಂತಿಲ್ಲ' ಎಂಬ ಷರತ್ತು ವಿಧಿಸಿದೆ.

ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಮೋಹನ್ ನಾಯಕ್ ಜಾಮೀನು ಪಡೆದ ಮೊದಲ ಆರೋಪಿಯಾಗಿದ್ದಾರೆ. ಮೋಹನ್ ಪರ ವಕೀಲ ಅಮರ್ ಕೊರಿಯಾ ವಾದ ಮಂಡಿಸಿದ್ದರು.

ಎಂ.ಎಸ್. ರಾಮಯ್ಯ ಆತ್ಮಕಥೆ ಇದೇ 12ಕ್ಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ



ಎಂ.ಎಸ್. ರಾಮಯ್ಯ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಷನ್ಸ್ ಸಂಸ್ಥಾಪಕ ಎಂ.ಎಸ್. ರಾಮಯ್ಯ ಅವರ ಆತ್ಮಕಥೆ 'ರಾಮಯ್ಯಾನಮ್' ಪುಸ್ತಕ ಇದೇ 12ರಂದು ಬಿಡುಗಡೆಯಾಗಲಿದೆ.

ನಗರದ ಲೀಲಾ ಪ್ಯಾಲೆಸ್‌ನಲ್ಲಿ ಮಂಗಳವಾರ ಸಂಜೆ 4.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಪುಸ್ತಕ ಬಿಡುಗಡೆ ಮಾಡಲಿದ್ದಾರೆ ಎಂದು ಗೋಕುಲ್ ಎಜುಕೇಷನ್ ಫೌಂಡೇಷನ್‌ನ ಟ್ರಸ್ಟಿ ಕೋದಂಡರಾಮ ರಾಮಯ್ಯ ಅವರು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

'ಎಂ.ಎಸ್. ರಾಮಯ್ಯ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ 2023ರ ಮಾರ್ಚ್‌ನಲ್ಲಿ ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು 'ಧೀಮಂತ ಸಾಹುಕಾರ' ಮತ್ತು 'ಅಪೂರ್ವ ಸಾಧಕ' ಎಂಬ ಎರಡು ಪುಸ್ತಕಗಳನ್ನು ಬಿಡುಗಡೆಗೊಳಿಸಿದ್ದರು. ಈಗ, ಪತ್ರಕರ್ತ ರಾಮಕೃಷ್ಣ ಉಪಾಧ್ಯಾಯ ಅವರು ಬರೆದಿರುವ ಎಂ.ಎಸ್. ರಾಮಯ್ಯ ಅವರ ಆತ್ಮಕಥೆಯನ್ನು ಬಿಡುಗಡೆ ಮಾಡಲಾಗುತ್ತಿದೆ. ಪುಸ್ತಕದ 3 ಸಾವಿರ ಪ್ರತಿಗಳನ್ನು ಈಗಾಗಲೇ ಮುದ್ರಿಸಲಾಗಿದ್ದು, ಒಂದು ಪ್ರತಿಯ ಬೆಲೆ ₹1,900 ಇರಲಿದೆ' ಎಂದು ಮಾಹಿತಿ ನೀಡಿದರು.

'ಎಂ.ಎಸ್. ರಾಮಯ್ಯ ಅವರ ಆತ್ಮಚರಿತ್ರೆಯು ಇಂದಿನ ಪೀಳಿಗೆಗೆ ಸ್ಫೂರ್ತಿಯಾಗಲಿದೆ. ರಾಮಯ್ಯ ಅವರು ಬಿಹಾರದ ರಾಧಾನಗರಿ ಡ್ಯಾಂ, ಕರ್ನಾಟಕದ ಘಟಪ್ರಭಾ ಡ್ಯಾಂ, ಧರ್ಮಾ ಡ್ಯಾಂ, ಶರಾವತಿ ಡ್ಯಾಂಗಳನ್ನು ನಿರ್ಮಿಸಿದ್ದಾರೆ. 1962ರಲ್ಲಿ ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯನ್ನು ಸ್ಥಾಪಿಸಿದ್ದರು' ಎಂದು ರಾಮಕೃಷ್ಣ ಉಪಾಧ್ಯಾಯ ತಿಳಿಸಿದರು. 'ಎಂ.ಎಸ್. ರಾಮಯ್ಯ ಅವರ ಆತ್ಮಕಥೆಯ ಪುಸ್ತಕದಲ್ಲಿ 7 ಅಧ್ಯಾಯಗಳು ಮತ್ತು 53 ಸಣ್ಣ ಕಥೆಗಳಿದ್ದು, 150 ಪುಟಗಳನ್ನು ಹೊಂದಿದೆ' ಎಂದು ಮಾಹಿತಿ ನೀಡಿದರು.



ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೇಮಲತಾ ಬಿ. ಹಾಗೂ ಕೆ. ಸುಶೀಲಾ ಅವರಿಗೆ 'ಡಾ.ಎಚ್. ಗಿರಿಜಮ್ಮ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಕಾರ್ಯದರ್ಶಿ ಭಾರತಿ ಹೆಗಡೆ, ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗದ ಸಂಚಾಲಕಿ ಡಾ. ವಸುಂಧರಾ ಭೂಪತಿ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, ಸಾಹಿತಿ ಚಂದ್ರಶೇಖರ ಕಂಬಾರ, ಲೇಖಕಿ ವಿಜಯಾ, ಬಳಗದ ಸಂಚಾಲಕಿ ಆರ್. ಪೂರ್ಣಿಮಾ ಹಾಗೂ ವೈದ್ಯ ಸಾಹಿತಿ ನಾ. ಸೋಮೇಶ್ವರ ಭಾಗವಹಿಸಿದ್ದರು

ರಂಗ ಮಹೋತ್ಸವ: 3 ನಾಟಕ ಆಯ್ಕೆ

ಬೆಂಗಳೂರು: ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ಹಾಗೂ ಸಂಸ್ಕೃತಿ ಸಚಿವಾಲಯ ಜಂಟಿಯಾಗಿ ನವದೆಹಲಿಯಲ್ಲಿ 2024ರ ಫೆಬ್ರುವರಿಯಲ್ಲಿ ಹಮ್ಮಿಕೊಂಡಿರುವ ಅಂತರರಾಷ್ಟ್ರೀಯ ರಂಗ ಮಹೋತ್ಸವಕ್ಕೆ ಕನ್ನಡದ ಮೂರು ನಾಟಕಗಳು ಆಯ್ಕೆಯಾಗಿವೆ.

ಎನ್‌ಎಸ್‌ಡಿ ರಚಿಸಿದ್ದ ಆಯ್ಕೆ ಸಮಿತಿಯು ಈ ಉತ್ಸವದಲ್ಲಿ ಪ್ರದರ್ಶನಕ್ಕೆ ವಿವಿಧ ಭಾಷೆಗಳ 62 ನಾಟಕಗಳನ್ನು ಆಯ್ಕೆ ಮಾಡಿವೆ. ಕನ್ನಡದ 'ಚಾವುಂಡರಾಯ', 'ಪಾರಿಜಾತ' ಹಾಗೂ 'ಅಯೋಧ್ಯಾ ಕಾಂಡ' ನಾಟಕಗಳು ಪ್ರದರ್ಶನ ಕಾಣಲಿವೆ.

'ಚಾವುಂಡರಾಯ' ನಾಟಕವನ್ನು ಜಯರಾಮ್ ರಾಯಪುರ ರಚಿಸಿದ್ದು, ಹುಲುಗಪ್ಪ ಕಟ್ಟೀಮನಿ ನಿರ್ದೇಶಿಸಿದ್ದಾರೆ. ಸಮಾಜಮುಖಿ ರಂಗಬಳಗ ಈ ನಾಟಕವನ್ನು ಪ್ರದರ್ಶಿಸಲಿದೆ. 'ಪಾರಿಜಾತ' ನಾಟಕವನ್ನು ಕೆ.ವೈ.ನಾರಾಯಣಸ್ವಾಮಿ ರಚಿಸಿದ್ದು, ಬಿ. ಜಯಶ್ರೀ ನಿರ್ದೇಶಿಸಿದ್ದಾರೆ. ಸ್ಪಂದನ ರಂಗ ತಂಡವು ಪ್ರಸ್ತುತಪಡಿಸಲಿದೆ. 'ಅಯೋಧ್ಯಾ ಕಾಂಡ' ನಾಟಕವನ್ನು ಪ್ರಸನ್ನ ಅವರು ರಚಿಸಿ, ನಿರ್ದೇಶಿಸಿದ್ದಾರೆ. ಅದನ್ನು ಮೈಸೂರಿನ ಇಂಡಿಯನ್ ಥಿಯೇಟರ್ ಫೌಂಡೇಷನ್ ಪ್ರದರ್ಶಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಓಪನ್ ಸ್ಟ್ರೀಟ್ ಫೆಸ್ಟಿವಲ್ ಸಂಭ್ರಮ

ಬಿಎಲ್‌ಆರ್ ಹಬ್ಬ: ಸಾಂಸ್ಕೃತಿಕ ವೈಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್‌ಬಾಕ್ಸಿಂಗ್ ಬೆಂಗಳೂರು ಫೌಂಡೇಶನ್ ನಗರದಲ್ಲಿ ಆಯೋಜಿಸಿರುವ ಬಿಎಲ್‌ಆರ್ ಹಬ್ಬದ ಭಾಗವಾಗಿ ನಗರದ ಹಲವು ಕಡೆ ಶನಿವಾರ 'ಓಪನ್ ಸ್ಟ್ರೀಟ್ ಫೆಸ್ಟಿವಲ್' ನಡೆಯಿತು.

ಚರ್ಚ್ ಸ್ಟ್ರೀಟ್, ವೈಟ್‌ಫೀಲ್ಡ್, ಜಯನಗರದಲ್ಲಿ ಓಪನ್ ಸ್ಟ್ರೀಟ್ ಫೆಸ್ಟಿವಲ್ ಸಂಭ್ರಮವು ಮನೆ ಮಾಡಿತ್ತು. ಯಕ್ಷಗಾನ ವೇಷಧಾರಿಗಳ ನೃತ್ಯ, ಡೊಳ್ಳು ಕುಣಿತ, ಜಾನಪದ ನೃತ್ಯ, ಹುಲಿವೇಷ ಕುಣಿತ, ಗಾಯನವು ಪ್ರೇಕ್ಷಕರಿಗೆ ರಸದೌತಣ ಉಣಬಡಿಸಿತು.

ಚರ್ಚ್ ಸ್ಟ್ರೀಟ್‌ನಲ್ಲಿ ನೂರಾರು ಯುವಕ–ಯುವತಿಯರು ಸಂಗೀತಕ್ಕೆ ಹೆಜ್ಜೆಹಾಕಿ ಸಂಭ್ರಮಿಸಿದರು. ವಾರಾಂತ್ಯದಲ್ಲಿ ನಡೆದ ಸಾಂಸ್ಕೃತಿಕ ಸಂಭ್ರಮವನ್ನು ಜನರು ಕಣ್ತುಂಬಿಕೊಂಡರು. ರಾತ್ರಿ ಎಂಟು ಗಂಟೆ ವೇಳೆಗೆ ತಮಟೆ ವಾದನಕ್ಕೆ ಹೆಜ್ಜೆ ಹಾಕಿದರು. ಅಲ್ಲದೇ ರಸ್ತೆಯಲ್ಲಿ ತೆರಳುತ್ತಿದ್ದ ಯುವಕ ಯವತಿಯರಿಗೂ ಗಾಯನಕ್ಕೆ ಅವಕಾಶವಿತ್ತು. ಇದೇ ಅವಕಾಶ ಬಳಸಿಕೊಂಡ ಯುವಜನತೆ ಪ್ರತಿಭೆ ಅನಾವರಣ ಮಾಡಿತು.

ಚರ್ಚ್ ಸ್ಟ್ರೀಟ್‌ನ ಎರಡು ಬದಿಯಲ್ಲೂ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಇಡೀ ರಸ್ತೆ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು. ಭಾನುವಾರ ಸಹ ಓಪನ್ ಸ್ಟ್ರೀಟ್ ಫೆಸ್ಟಿವಲ್ ಇರಲಿದೆ



'ಬೆಂಗಳೂರು ಹಬ್ಬ'ದ ಭಾಗವಾಗಿ ಚರ್ಚ್ ಸ್ಟ್ರೀಟ್‌ನಲ್ಲಿ ಶನಿವಾರ ಕಲಾವಿದರು ನೃತ್ಯ ಪ್ರದರ್ಶನ ಪ್ರಸ್ತುತ ಪಡಿಸಿದರು

‘ಮೋದಿಯಿಂದಾಗಿ ಹೆಚ್ಚು ಸ್ಥಾನ’

ವಿಜಯೇಂದ್ರ, ಬಿಎಸ್‌ವೈ ವಿರುದ್ಧ ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಹಾಸನ: ‘ರಾಜ್ಯದಲ್ಲಿ ಹಿಂದೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ನರೇಂದ್ರ ಮೋದಿಯವರ ಹೆಸರಿನಲ್ಲೇ ಕರ್ನಾಟಕದಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗೆದ್ದಿತ್ತು. ಮುಂದೆಯೂ ಗೆಲ್ಲುತ್ತೇವೆ. ಆದರೂ ತಾವು, ತಮ್ಮಪ್ಪ ಸೇರಿಯೇ ಹೆಚ್ಚು ಸೀಟ್ ತಂದಿದ್ದೇವೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಪಾದಿಸುತ್ತಿದ್ದಾರೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕಿಸಿದರು.



ಬಸನಗೌಡ ಪಾಟೀಲ ಯತ್ನಾಳ

ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಡ್ಕಕ್ಕೆ ತೆರಳುವ ವೇಳೆ ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ವಿರುದ್ಧ ಹರಿಹಾಯ್ದರು.

‘ಈ ಹಿಂದೆಯೇ ನನಗೆ ಮುಖ್ಯಮಂತ್ರಿ ಸ್ಥಾನ ಕೊಟ್ಟಿದ್ದರೆ ಬಿಜೆಪಿಗೆ 130 ಸ್ಥಾನ ಬರೋದು. ರಾಜ್ಯದಲ್ಲಿ ಅತಿ ಹೆಚ್ಚು ಮುಸ್ಲಿಮರಿರುವ ಕ್ಷೇತ್ರದಲ್ಲಿ ನಾನು ಗೆದ್ದು ಬರುತ್ತೇನೆ’ ಎಂದು ಸವಾಲು ಹಾಕಿದರು.

‘ನನ್ನ ಮೇಲೆ ಇ.ಡಿ, ಐಟಿ ದಾಳಿ ಮಾಡೋಕೆ ಆಗುವುದಿಲ್ಲ. ನನ್ನ ಮನೆಯಲ್ಲಿ ಏನೂ ಇಲ್ಲ. ಸಿಂಗಪುರ, ದುಬೈ, ಕುವೈತ್, ಅಮೆರಿಕದಲ್ಲಿ ಅಕ್ರಮ ಆಸ್ತಿ ಇಲ್ಲ. ಸ್ವಿಸ್ ಬ್ಯಾಂಕ್‌ನಲ್ಲಿ ಹಣ ಇಲ್ಲ. ನನ್ನ ಕಾರಿನ ಮೇಲೆ ದಾಳಿ ಮಾಡಿದರೂ ₹2 ಲಕ್ಷ ಸಿಗಲ್ಲ’ ಎಂದರು.

ಪ್ರತಿಪಕ್ಷದ ನಾಯಕ ಆರ್. ಅಶೋಕ ಬಗ್ಗೆ ಶಾಸಕ ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದ ಕುರಿತು ಪ್ರತಿಕ್ರಿಯಿಸಿ, ‘ಅಶೋಕ ಅವರು ಮೊನ್ನೆ ತೆಗೆದುಕೊಂಡ ನಿರ್ಣಯ ಸರಿ ಇದೆ. ನಮ್ಮೆಲ್ಲರ ಸಲಹೆ ಪಡೆದಿದ್ದಾರೆ’ ಎಂದರು.

‘ಮೌಲ್ವಿ ಅವರ ವಿಚಾರಕ್ಕೆ ಸಂಬಂಧಿಸಿ ಈಗಾಗಲೇ ಎಲ್ಲ ದಾಖಲೆಗಳನ್ನು ಕೊಟ್ಟಿದ್ದು, ಎನ್‌ಐಎ ಕೂಡ ಮಾಹಿತಿ ಪಡೆಯುತ್ತಿದೆ. ಸಿದ್ದರಾಮಯ್ಯ ಏನು ಮಾಡಿದರೂ ಸರಿ ಎಂದು ಭಾವಿಸಿದ್ದಾರೆ. ನಿಜವಾಗಿಯೂ ಇದರಿಂದ ಮುಕ್ತವಾಗಬೇಕಾದರೆ ಎನ್‌ಐಎ ತನಿಖೆಗೆ ವಹಿಸುವುದು ಸೂಕ್ತ’ ಎಂದರು.

‘ಯಾವ ಬ್ರ್ಯಾಂಡ್ ಬಕೆಟ್ ಹಿಡಿದಿದ್ದೀರಿ?’

ಬೆಂಗಳೂರು: ನಾಯಕತ್ವ ಹಾಗೂ ಪ್ರತಿಷ್ಠೆಗಾಗಿ ಬಿಜೆಪಿ ನಾಯಕರ ಮಧ್ಯೆ ನಡೆಯುತ್ತಿರುವ ಆಂತರಿಕ ತಿಕ್ಕಾಟವು ಆಡಳಿತ ಪಕ್ಷ ಕಾಂಗ್ರೆಸ್‌ಗೆ ವರವಾಗಿ ಪರಿಣಮಿಸಿದೆ.

ಯಲಹಂಕ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿಕೆ ಪ್ರಸ್ತಾಪಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್, ‘ಆರ್.ಅಶೋಕ ಅವರೇ, ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಪಡೆಯಲು ಯಾರಿಗೆ ಬಕೆಟ್ ಹಿಡಿದಿದ್ದೀರಿ? ಯಾವ ಬ್ರ್ಯಾಂಡ್ ಬಕೆಟ್ ಹಿಡಿದಿದ್ದೀರಿ? ಯಾರಿಗೆ ಬಕೆಟ್ ಹಿಡಿದು ನಿಮ್ಮ ಅಕ್ರಮಗಳನ್ನು ಮುಚ್ಚಿಕೊಂಡಿದ್ದೀರಿ’ ಎಂದು ಟೀಕಿಸಿದೆ.

‘ಬಿಜೆಪಿಗೆ ಬಿಜೆಪಿಗರಿಂದಲೇ ಸಿಕ್ಕಿದ್ದು ಅದೆಷ್ಟು ಹೆಸರುಗಳು... ಭ್ರಷ್ಟ ಜನತಾ ಪಾರ್ಟಿ, ಬ್ಲಾಕ್ಮೇಲ್ ಜನತಾ ಪಾರ್ಟಿ, ಬ್ಲೂ ಬಾಯ್ಸ್ ಜನತಾ ಪಾರ್ಟಿ, ಈಗ ಹೊಸದಾಗಿ ‘ಬಕೆಟ್ ಜನತಾ ಪಾರ್ಟಿ’ ಸೇರ್ಪಡೆಯಾಗಿದೆ’ ಎಂದು ಕಾಂಗ್ರೆಸ್ ಲೇವಡಿ ಮಾಡಿದೆ.

ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದ್ದು, ಗುರುವಾರ ವಿಧಾನಸಭೆಯ ಕಲಾಪ ಬಹಿಷ್ಕರಿಸಿ ಹೊರಬರುತ್ತಿದ್ದ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನು ಉದ್ದೇಶಿಸಿ ಕೂಗಾಡಿದ್ದ ಎಸ್.ಆರ್. ವಿಶ್ವನಾಥ್, ‘ಬಕೆಟ್ ಹಿಡಿದುಕೊಂಡೇ ರಾಜಕಾರಣ ಮಾಡುವವರು ಇನ್ನೇನು ಮಾಡುತ್ತಾರೆ’ ಎಂದಿದ್ದರು.

‘ಸಿ.ಸಿ.ಟಿವಿ ಕ್ಯಾಮೆರಾ ದೃಶ್ಯ ಬಿಡುಗಡೆ ಮಾಡಿ’

ಚಿತ್ರದುರ್ಗ: ‘ಜಾತಿ ಕಾರಣಕ್ಕೆ ನನಗೆ ನಾಗಪುರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಹೆಡಗೇವಾರ್ ವಸ್ತು ಸಂಗ್ರಹಾಲಯದ ಪ್ರವೇಶ ನಿರಾಕರಿಸಲಾಗಿದೆ. ನನ್ನ ಈ ಆರೋಪವನ್ನು ತಳ್ಳಿ ಹಾಕುತ್ತಿರುವ ರಾಜ್ಯದ ಬಿಜೆಪಿ ಮುಖಂಡರು ಬೇಕಿದ್ದರೆ ವಸ್ತು ಸಂಗ್ರಹಾಲಯದ ಸಿ.ಸಿ. ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯವನ್ನು ಬಿಡುಗಡೆ ಮಾಡಿಸಲಿ’ ಎಂದು ಮಾಜಿ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಸವಾಲು ಹಾಕಿದ್ದಾರೆ.



ಗೂಳಿಹಟ್ಟಿ ಡಿ. ಶೇಖರ್

ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಸುರೇಶ್‌ಕುಮಾರ್ ಹಾಗೂ ಕುಡಚಿ ಮಾಜಿ ಶಾಸಕ ಪಿ.ರಾಜೀವ್ ಹೆಸರು ಉಲ್ಲೇಖಿಸಿ ಆಡಿಯೊ ಬಿಡುಗಡೆ ಮಾಡಿರುವ ಅವರು, ‘ಪ್ರವೇಶ ನೀಡಿರುವುದನ್ನು ನಿರೂಪಿಸಿದರೆ ನಿಮ್ಮ ಮನೆಯ ಕಸ ಗುಡಿಸಿ ಗೇಟ್ ಕಾಯುವ ಕೆಲಸ ಮಾಡುತ್ತೇನೆ’ ಎಂದಿದ್ದಾರೆ.

‘ಎಂಟು ತಿಂಗಳ ಹಿಂದೆಯೇ ವಿಷಯ ಬಹಿರಂಗಪಡಿಸಿದ್ದರೆ ವಿಧಾನಸಭಾ ಚುನಾವಣೆಯಲ್ಲಿ ಇನ್ನಷ್ಟು ಸ್ಥಾನ ಕಳೆದುಕೊಳ್ಳಬೇಕಿತ್ತು’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿವಿಧೆಡೆ ಎನ್‌ಐಎ ದಾಳಿ: 15 ಶಂಕಿತ ಉಗ್ರರ ಬಂಧನ

ಒಂದನೇ ಪುಟದಿಂದ

ಮಹಾರಾಷ್ಟ್ರದ ಠಾಣೆಯ ಪಡಗಾ-ಬೊರಿವಲಿ ಮತ್ತು ಪುಣೆ ಹಾಗೂ ಬೆಂಗಳೂರಿನಲ್ಲಿ ವಿವಿಧ ಸ್ಥಳಗಳ ಮೇಲೆ ಎನ್‌ಐಎ ಅಧಿಕಾರಿಗಳು ಮುಂಜಾನೆ ದಾಳಿ ನಡೆಸಿದರು. ಭಯೋತ್ಪಾದನೆ ಹಾಗೂ ಭಯೋತ್ಪಾದನೆಗೆ ಸಂಬಂಧಿಸಿದ ಕೃತ್ಯಗಳಲ್ಲಿ ತೊಡಗಿದ್ದ ಆರೋಪದ ಅಡಿಯಲ್ಲಿ ಅವರನ್ನು ಬಂಧಿಸಿದರು.

ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಆ್ಯಂಡ್ ಸಿರಿಯಾದ (ಐಎಸ್‌ಐಎಸ್–ಇದನ್ನೇ ಇಸ್ಲಾಮಿಕ್ ಸ್ಟೇಟ್ ಸಂಘಟನೆ–ಐಎಸ್ ಎಂದೂ ಕರೆಯಲಾಗುತ್ತದೆ) ಭಯೋತ್ಪಾದನಾ ಕೃತ್ಯಗಳನ್ನು ತಡೆಯುವ ಉದ್ದೇಶ ಹೊಂದಿರುವ ಪ್ರಯತ್ನಗಳ ಭಾಗವಾಗಿ ಈ ದಾಳಿ ನಡೆದಿದೆ.

ವಿದೇಶದಲ್ಲಿ ಇರುವ ಐಎಸ್ ಉಗ್ರರ ಸೂಚನೆಯಂತೆ ಇಲ್ಲಿನ ಆರೋಪಿಗಳು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಐಎಸ್‌ಐಎಸ್ ಸಂಘಟನೆಯ ಹಿಂಸಾತ್ಮಕ ಹಾಗೂ ವಿನಾಶಕಾರಿ ಕಾರ್ಯಸೂಚಿಯನ್ನು ಅನುಷ್ಠಾನಕ್ಕೆ ತರಲು ಕಚ್ಚಾ ಬಾಂಬ್ ತಯಾರಿಕೆಯಲ್ಲಿಯೂ ಇವರು ತೊಡಗಿಸಿಕೊಂಡಿದ್ದರು ಎಂದು ಅವರು ತಿಳಿಸಿದ್ದಾರೆ.

ಠಾಣೆಯ ಗ್ರಾಮೀಣ ಪ್ರದೇಶದ ಪಡಗಾ ಗ್ರಾಮವನ್ನು ಈ ಆರೋಪಿಗಳು, ‘ಸ್ವತಂತ್ರ ಪ್ರದೇಶ’ ಎಂದೂ ‘ಅಲ್ ಶಾಮ್’ ಎಂದೂ ಘೋಷಿಸಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ. ಮುಸ್ಲಿಂ ಯುವಕರ ಪೈಕಿ ತಮ್ಮ ಮಾತನ್ನು ಸುಲಭವಾಗಿ ಕೇಳುವವರನ್ನು ಈ ಆರೋಪಿಗಳು, ಪಡಗಾಕ್ಕೆ ಬಂದು ನೆಲೆಸುವಂತೆ ಪ್ರೇರೇಪಿಸುತ್ತಿದ್ದರು. ಆ ಮೂಲಕ ಪಡಗಾದಲ್ಲಿ ನೆಲೆಯನ್ನು ಗಟ್ಟಿಗೊಳಿಸುವ ಉದ್ದೇಶ ಹೊಂದಿದ್ದರು ಎಂದು ಎನ್‌ಐಎ ವಕ್ತಾರರು ಮಾಹಿತಿ ನೀಡಿದ್ದಾರೆ.

‘ಹಿಂಸಾತ್ಮಕ ಜಿಹಾದ್ ಹಾದಿಯನ್ನು ಹಿಡಿದಿದ್ದ ಬಂಧಿತರು ದೇಶದಲ್ಲಿ ಶಾಂತಿಯನ್ನು ಮತ್ತು ಕೋಮು ಸೌಹಾರ್ದವನ್ನು ಕದಡುವ ಉದ್ದೇಶ ಹೊಂದಿದ್ದರು. ದೇಶದ ಸರ್ಕಾರದ ವಿರುದ್ಧ ಸಮರ ಸಾರುವ ಉದ್ದೇಶ ಕೂಡ ಇವರದ್ದಾಗಿತ್ತು’ ಎಂದು ವಿವರಿಸಿದ್ದಾರೆ.

ಐಎಸ್ ಸಂಘಟನೆಯು ದೇಶದಲ್ಲಿ ತನ್ನ ಭಯೋತ್ಪಾದನಾ ಜಾಲವನ್ನು ವಿಸ್ತರಿಸುತ್ತಿದೆ ಎಂದು ಹೇಳಿದ್ದಾರೆ. ಎನ್‌ಐಎ ಅಧಿಕಾರಿಗಳು ಮಹಾರಾಷ್ಟ್ರದ ಐಎಸ್ ಘಟಕದ ವಿರುದ್ಧ ಈ ವರ್ಷದ ಆರಂಭದಲ್ಲಿ ಪ್ರಕರಣವೊಂದನ್ನು ದಾಖಲು ಮಾಡಿಕೊಂಡಿದ್ದರು. ಇದರ ನಂತರದಲ್ಲಿ, ದೇಶದಲ್ಲಿನ ಐಎಸ್ ಘಟಕಗಳನ್ನು ನಾಶಪಡಿಸಲು ಸಮನ್ವಯದಿಂದ ಕೆಲಸ ಆರಂಭಿಸಿದ್ದರು. ಈಚಿನ ತಿಂಗಳುಗಳಲ್ಲಿ ಎನ್‌ಐಎ ಅಧಿಕಾರಿಗಳು ದೊಡ್ಡ ಮಟ್ಟದಲ್ಲಿ ದಾಳಿಗಳನ್ನು ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬೆಂಗಳೂರಿನಲ್ಲಿ ಐಐಟಿ ಪದವೀಧರ ವಶಕ್ಕೆ

ಒಂದನೇ ಪುಟದಿಂದ

‘ಡಾಟಾ ಸೈನ್ಸ್ ಎಂಜಿನಿಯರ್ ಆಗಿದ್ದ ಈತ, ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ವೈದ್ಯೆಯಾಗಿದ್ದ ಪತ್ನಿ, ಸಣ್ಣದೊಂದು ಕ್ಲಿನಿಕ್ ತೆರೆದಿದ್ದರು’ ಎಂದಿವೆ.

‘ಕೋವಿಡ್ ಸಂದರ್ಭದಲ್ಲಿ ಅಲಿ ಹಫೀಜ್, ಕೆಲಸ ಬಿಟ್ಟಿದ್ದ. ಕೋವಿಡ್ ಲಾಕ್‌ಡೌನ್ ತೆರವುಗೊಂಡ ನಂತರ, ಸ್ಥಳೀಯ ಮಕ್ಕಳಿಗೆ ಪಾಠ ಮಾಡಲಾರಂಭಿಸಿದ್ದ. ಸದ್ಯ ಈತ ಚಿಕ್ಕದೊಂದು ಉರ್ದು ಶಾಲೆ ನಡೆಸುತ್ತಿದ್ದ’ ಎಂದು ತಿಳಿಸಿವೆ.

ಬಯಾತ್ ಹೆಸರಿನಲ್ಲಿ ಸೇರ್ಪಡೆ: ‘ಐಎಸ್ ಸೇರಿದಂತೆ ಹಲವು ಭಯೋತ್ಪಾದನಾ ಸಂಘಟನೆಗಳ ಜೊತೆ ನಂಟು ಹೊಂದಿದ್ದ ಪ್ರಮುಖ ಆರೋಪಿ ಸಾದಿಕ್ ನಚ್ಚನ್, ಭಾರತದ ಯುವಕರನ್ನು ಪ್ರಚೋದಿಸಿ ಸಂಘಟನೆಗೆ ಸೇರಿಸುತ್ತಿದ್ದ. ಸಾದಿಕ್ ತಂಡದಲ್ಲಿ ಗುರುತಿಸಿಕೊಂಡಿದ್ದ ಅಲಿ ಹಫೀಜ್ ಕೂಡಾ ಯುವಕರನ್ನು ಸಂಪರ್ಕಿಸಿ, ಐಎಸ್ ಉಗ್ರ ಸಂಘಟನೆ ಸೇರಲು ಪ್ರಚೋದಿಸುತ್ತಿದ್ದನೆಂಬ ಮಾಹಿತಿ ಇದೆ’ ಎಂದು ಮೂಲಗಳು ಹೇಳಿವೆ.

‘ಬಯಾತ್ (ಐಎಸ್ ನಾಯಕನಿಗೆ (ಖಲೀಫಾ) ನಿಷ್ಠೆ ಪ್ರತಿಪಾದಿಸುವ ಪ್ರತಿಜ್ಞೆ) ಹೆಸರಿನಲ್ಲಿ ಯುವಕರನ್ನು ಸಂಘಟನೆಯತ್ತ ಸೆಳೆಯಲಾಗುತ್ತಿತ್ತು. ಯುವಕರನ್ನು ಸಂಪರ್ಕಿಸಲು ಹಾಗೂ ಮಾತುಕತೆಗೆಂದು ವಾಟ್ಸ್‌ಆ್ಯಪ್ ಗ್ರೂಪ್ ಸೃಷ್ಟಿಸಲಾಗಿತ್ತು. ಜೊತೆಗೆ, ಇ-ಮೇಲ್ ಸಹ ಬಳಸಲಾಗುತ್ತಿತ್ತು’ ಎಂದು ತಿಳಿಸಿವೆ.

ಇ- ಮೇಲ್ ನೀಡಿದ್ದ ಸುಳಿವು: ‘ಶಂಕಿತ ಅಲಿ ಹಫೀಜ್ ಸೃಷ್ಟಿಸಿದ್ದ ಇ-ಮೇಲ್ ಮೂಲಕ ಹಲವು ಯುವಕರಿಗೆ ಸಂದೇಶ ಕಳುಹಿಸಲಾಗಿತ್ತು. ಜೊತೆಗೆ, ವಾಟ್ಸ್‌ಆ್ಯಪ್ ಹಾಗೂ ಟೆಲಿಗ್ರಾಂ ಗ್ರೂಪ್ ಸೃಷ್ಟಿಸಿ ಯುವಕರನ್ನು ಒಂದೆಡೆ ಸೇರಿಸಲಾಗಿತ್ತು. ಇದೇ ಗ್ರೂಪ್‌ಗೆ ಅಲಿ ಹಫೀಜ್ ಸಂದೇಶಗಳನ್ನು ಕಳುಹಿಸುತ್ತಿದ್ದ. ಇ-ಮೇಲ್ ಸುಳಿವು ಆಧರಿಸಿ ಅಲಿ ಹಫೀಜ್‌ನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

ಅಲಿ ಹಫೀಜ್ ಮನೆಯಲ್ಲಿ ₹16.42 ಲಕ್ಷ ನಗದು, ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಜಪ್ತಿ ಮಾಡಿರುವುದಾಗಿ ಗೊತ್ತಾಗಿದೆ.



ಪುಲಿಕೇಶಿನಗರದ ಮೋರ್ ರಸ್ತೆಯಲ್ಲಿ ಅಲಿ ಹಫೀಜ್ ದಂಪತಿ ವಾಸವಿದ್ದ ಮನೆ

‘ಮಕ್ಕಳನ್ನು ಶಾಲೆಗೆ ಸೇರಿಸಲು ಪ್ರಚಾರ’

‘ಪುಲಿಕೇಶಿನಗರದಲ್ಲಿ ಸುತ್ತಾಡುತ್ತಿದ್ದ ಅಲಿ ಹಫೀಜ್ ಅಲಿಯಾಸ್ ಅಲಿ ಅಬ್ಬಾಸ್, ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲು ಪ್ರಚಾರ ಮಾಡುತ್ತಿದ್ದ. ತನ್ನದೇ ಉರ್ದು ಶಾಲೆ ಆರಂಭಿಸಿದ್ದು, ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪೋಷಕರನ್ನು ಒತ್ತಾಯಿಸುತ್ತಿದ್ದ’ ಎಂದು ಸ್ಥಳೀಯರು ಹೇಳಿದರು.

‘ಅಲಿ ಹಫೀಜ್, ಉರ್ದು, ಹಿಂದಿ, ಇಂಗ್ಲಿಷ್ ಹಾಗೂ ಕನ್ನಡ ಮಾತನಾಡುತ್ತಿದ್ದ. ಆತನ ಪತ್ನಿಯೂ ಕನ್ನಡದಲ್ಲಿ ನಮ್ಮೊಂದಿಗೆ ಮಾತನಾಡುತ್ತಿದ್ದರು’ ಎಂದು ಮಾಹಿತಿ ನೀಡಿದರು.

ಕೆಪಿಎಸ್‌ಸಿಗೆ ಶೀಘ್ರ ಪ್ರಸ್ತಾವ • ವಯೋಮಿತಿ ಸಡಿಲಿಕೆ ಆಕಾಂಕ್ಷಿಗಳ ಪಟ್ಟು

ಗೆಜೆಟೆಡ್ ಪ್ರೊಬೇಷನರಿ 276 ಹುದ್ದೆ ಭರ್ತಿಗೆ ಸಿದ್ಧತೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಕೆಎಎಸ್ (ಕರ್ನಾಟಕ ನಾಗರಿಕ ಸೇವೆ) ಸೇರಿದಂತೆ ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ವೃಂದದ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಒಟ್ಟು 276 ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಪೈಕಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿನ (ಸೇವೆಗಳು–2) ಸಹಾಯಕ ಆಯುಕ್ತ (ಕಿರಿಯ ಶ್ರೇಣಿ) 20 ಹುದ್ದೆಗಳು ಸೇರಿ ಒಟ್ಟು 105 ಹುದ್ದೆಗಳು ಗ್ರೂಪ್ ‘ಎ’ನಲ್ಲಿವೆ.

ಕಂದಾಯ ಇಲಾಖೆಯಲ್ಲಿನ ತಹಶೀಲ್ದಾರ್ (ಗ್ರೇಡ್– 2) 26 ಹುದ್ದೆಗಳು ಸೇರಿದಂತೆ ಒಟ್ಟು 171 ಹುದ್ದೆಗಳು ಗ್ರೂಪ್ ‘ಬಿ’ ವೃಂದಕ್ಕೆ ಸೇರಿದ್ದಾಗಿವೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ಖಾಲಿ ಹುದ್ದೆಗಳ ಮಾಹಿತಿಯನ್ನು ಸರ್ಕಾರದ ಎಲ್ಲ ಇಲಾಖೆಗಳಿಂದಲೂ ಸಂಗ್ರಹಿಸಿದೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಸದ್ಯದಲ್ಲೇ ನೇಮಕಾತಿ ಪ್ರಾಧಿಕಾರವಾದ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಪ್ರಸ್ತಾವ ಸಲ್ಲಿಕೆ ಆಗಲಿದೆ ಎಂದು ಉನ್ನತ ಮೂಲಗಳು ಮಾಹಿತಿ ನೀಡಿವೆ.

2017ನೇ ಸಾಲಿನಲ್ಲಿ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ 106 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಆ ಸಾಲಿನ ನೇಮಕಾತಿಯಲ್ಲಿ ಸಹಾಯಕ ಆಯುಕ್ತ ಹುದ್ದೆಗಳನ್ನು ಮತ್ತು ಡಿವೈಎಸ್‌ಪಿ ಹುದ್ದೆಗಳನ್ನು ಭರ್ತಿ ಮಾಡಿರಲಿಲ್ಲ. ನಂತರ ಸರ್ಕಾರ ಹೊಸತಾಗಿ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಗೆ ಅಧಿಸೂಚನೆಯನ್ನೇ ಹೊರಡಿಸಿಲ್ಲ. ಹೀಗಾಗಿ, 4 ಲಕ್ಷಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ನೇಮಕಾತಿ ಅಧಿಸೂಚನೆಯ ನಿರೀಕ್ಷೆಯನ್ನು ಇಟ್ಟುಕೊಂಡೇ ಕಾಯುತ್ತಿದ್ದಾರೆ.

‘ಕೋವಿಡ್– 19 ಸಾಂಕ್ರಾಮಿಕ ರೋಗ ಹಾಗೂ ಇತರ ಆಡಳಿತಾತ್ಮಕ ಕಾರಣಗಳಿಂದಾಗಿ ಸುಮಾರು ನಾಲ್ಕು ವರ್ಷಗಳಿಂದ ಯಾವುದೇ ಗೆಜೆಟೆಟ್ ಪ್ರೊಬೇಷನರಿ ಹುದ್ದೆ ಭರ್ತಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ’ ಎಂದು ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸದಸ್ಯ ಎಚ್.ಎಸ್. ಗೋಪಿನಾಥ್ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರ ನೀಡಿದ್ದಾರೆ.

ಪ್ರಜಾವಾಣಿ ವಿಶೇಷ

ಈ ಮಧ್ಯೆ, ಹುದ್ದೆಗಳ ಭರ್ತಿಗೆ ಸರ್ಕಾರ ಹೊರಡಿಸುವ ಅಧಿಸೂಚನೆಯಲ್ಲಿ ಎಲ್ಲ ಅರ್ಹ ಅಭ್ಯರ್ಥಿಗಳಿಗೆ ಒಂದು ಬಾರಿಗೆ ವಯೋಮಿತಿಯಲ್ಲಿ ಸಡಿಲಿಕೆ ನೀಡಿ ಅವಕಾಶ ಕಲ್ಪಿಸಬೇಕು ಎಂದು ಹುದ್ದೆಗಳ ಆಕಾಂಕ್ಷಿಗಳು ಮುಖ್ಯಮಂತ್ರಿಗೆ ಬೇಡಿಕೆಯನ್ನು ಸಲ್ಲಿಸಿದ್ದಾರೆ.

ಗೆಜೆಟೆಡ್ ಪ್ರೊಬೇಷನರಿ ಖಾಲಿ ಹುದ್ದೆಗಳು

ಇಲಾಖೆ	ಹುದ್ದೆ	ಖಾಲಿ
ಗ್ರೂಪ್ ‘ಎ’		
ಡಿಪಿಎಆರ್ (ಸೇವೆಗಳು–2)	ಸಹಾಯಕ ಆಯುಕ್ತರು (ಕಿರಿಯ ಶ್ರೇಣಿ)	20
ವಾಣಿಜ್ಯ ತೆರಿಗೆ ಇಲಾಖೆ	ಸಹಾಯಕ ಆಯುಕ್ತರು	41
ಖಜಾನೆ ಇಲಾಖೆ	ಸಹಾಯಕ ನಿರ್ದೇಶಕರು	2
ಆರ್‌ಡಿಪಿಆರ್	ಕಾರ್ಯನಿರ್ವಾಹಕ ಅಧಿಕಾರಿ (ಸಹಾಯಕ ಕಾರ್ಯದರ್ಶಿ)	20
ಒಳಾಡಳಿತ	ಡಿವೈಎಸ್‌ಪಿ	5
ಸಮಾಜ ಕಲ್ಯಾಣ	ಸಹಾಯಕ ನಿರ್ದೇಶಕರು	10
ಹಿಂದುಳಿದ ವರ್ಗಗಳ ಕಲ್ಯಾಣ	ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ	7
ಗ್ರೂಪ್ ‘ಬಿ’ ಹುದ್ದೆಗಳು		
ಕಂದಾಯ	ತಹಶೀಲ್ದಾರ್–ಗ್ರೇಡ್ 2	26
ವಾಣಿಜ್ಯ ತೆರಿಗೆ	ವಾಣಿಜ್ಯ ತೆರಿಗೆ ಅಧಿಕಾರಿ	59
ಕಾರ್ಮಿಕ	ಕಾರ್ಮಿಕ ಅಧಿಕಾರಿ	4
ಒಳಾಡಳಿತ (ಕಾರಾಗೃಹ)	ಸಹಾಯಕ ಅಧೀಕ್ಷಕರು	3
ಸಹಕಾರ	ಸಹಕಾರ ಸಂಘಗಳ ಸಹಾಯಕ ನಿಬಂಧಕರು	12
ಸಹಕಾರ	ಲೆಕ್ಕಪರಿಶೋಧನೆ ಸಹಾಯಕ ನಿರ್ದೇಶಕರು	9
ಆರ್ಥಿಕ ಇಲಾಖೆ (ಅಬಕಾರಿ)	ಅಬಕಾರಿ ಉಪ ಅಧೀಕ್ಷಕರು	5
ಕೌಶಲಾಭಿವೃದ್ಧಿ	ಉದ್ಯೋಗಾಧಿಕಾರಿ	2
ಯುವ ಸಬಲೀಕರಣ ಮತ್ತು ಕ್ರೀಡೆ	ಸಹಾಯಕ ನಿರ್ದೇಶಕರು	4
ನಗರಾಭಿವೃದ್ಧಿ	ಮುಖ್ಯಾಧಿಕಾರಿ ಗ್ರೇಡ್–1	1
ಆರ್ಥಿಕ ಇಲಾಖೆ (ಖಜಾನೆ)	ಸಹಾಯಕ ಖಜಾನಾಧಿಕಾರಿ	23
ಆಹಾರ ಮತ್ತು ನಾಗರಿಕ ಸರಬರಾಜು	ಸಹಾಯಕ ನಿರ್ದೇಶಕರು	9
ಪ್ರವಾಸೋದ್ಯಮ	ಸಹಾಯಕ ನಿರ್ದೇಶಕರು	2
ಡಿಪಿಎಆರ್(ಸಿಬ್ಬಂದಿ)	ಶಾಖಾಧಿಕಾರಿ	5
ಸಮಾಜ ಕಲ್ಯಾಣ	ಸಹಾಯಕ ನಿರ್ದೇಶಕರು ಗ್ರೇಡ್–2	7
ಒಟ್ಟು		276

ಇಒ 59 ಹುದ್ದೆ ಖಾಲಿ: 20 ಭರ್ತಿಗೆ ಪ್ರಸ್ತಾವ

‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ನೇರ ನೇಮಕಾತಿ ಮೂಲಕ ಕಾರ್ಯನಿರ್ವಾಹಕ ಅಧಿಕಾರಿಗಳ (ಇಒ) 110 ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿದೆ. 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಯಲ್ಲಿ ಆಯ್ಕೆಯಾಗಿದ್ದ 60 ಅಭ್ಯರ್ಥಿಗಳ ದಾಖಲೆ ಪರಿಶೀಲನೆ ನಡೆದಿತ್ತು. ಈ ಪೈಕಿ 41 ಮಂದಿಗೆ ನೇಮಕಾತಿ ಆದೇಶ ನೀಡಲಾಗಿತ್ತು.

ಖಾಲಿ ಇರುವ 59 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಜುಲೈ 14ರಂದು ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಉತ್ತರ ನೀಡಿದ್ದರು.

ಆದರೆ, ಪ್ರಸಕ್ತ ಕೇವಲ 20 ಹುದ್ದೆಗಳನ್ನು ಮಾತ್ರ ಭರ್ತಿ ಮಾಡುವಂತೆ ಕೆಪಿಎಸ್‌ಸಿಗೆ ಪ್ರಸ್ತಾವ ಸಲ್ಲಿಸಲು ಡಿಪಿಎಆರ್ ಮುಂದಾಗಿದೆ. ಹುದ್ದೆಗಳು ಖಾಲಿ ಇದ್ದರೂ ಭರ್ತಿ ಮಾಡಲು ಸರ್ಕಾರ ಮುಂದಾಗುತ್ತಿಲ್ಲ ಎಂದು ಉದ್ಯೋಗಾಕಾಂಕ್ಷಿಗಳು ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ಅಭಿಮಾನಿಗಳ ಕಣ್ಣೀರಧಾರೆ: ಲೀಲಾವತಿಯವರ ಸಾಮಾಜಿಕ ಕಾರ್ಯ ನೆನಪಿಸಿಕೊಂಡ ಜನರು

ನೆಚ್ಚಿನ ತೋಟದಲ್ಲಿ 'ಲೀಲಮ್ಮ'ಗೆ ವಿದಾಯ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಟಿ ಲೀಲಾವತಿ ಅವರ ಪಾರ್ಥಿವ ಶರೀರಕ್ಕೆ ಅಂತಿಮ ಶನಿವಾರ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ

ಬೆಂಗಳೂರು: ಬಹುಭಾಷಾ ತಾರೆ ಲೀಲಾವತಿ (86) ಅವರ ಅಂತ್ಯಕ್ರಿಯೆ ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿಯ ಅವರ ಸ್ವಂತ ತೋಟದಲ್ಲಿ ಶನಿವಾರ ಸಂಜೆ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ನಟನೆ ಜತೆಗೆ ಸಾಮಾಜಿಕ ಕಾರ್ಯದಲ್ಲೂ ತೊಡಗಿದ್ದ ಮಿನುಗುತಾರೆ ಕಣ್ಮರೆ ಆದರು.

ನೆಲಮಂಗಲ ನಗರದ ಅಂಬೇಡ್ಕರ್ ಮೈದಾನ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಎರಡು ಸ್ಥಳಗಳಲ್ಲೂ ಚಿತ್ರರಂಗದ ಗಣ್ಯರು, ಜನಪ್ರತಿನಿಧಿಗಳು, ಅಪಾರ ಸಂಖ್ಯೆ ಅಭಿಮಾನಿಗಳು ದರ್ಶನ ಪಡೆದರು.

ಮಧ್ಯಾಹ್ನದ ವೇಳೆಗೆ ಸೋಲ ದೇವನಹಳ್ಳಿಗೆ ಪಾರ್ಥಿವ ಶರೀರವನ್ನು ಆಂಬುಲೆನ್ಸ್‌ನಲ್ಲಿ ತರಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಅಭಿಮಾನಿಗಳು, ಹೂವಿನ ಪಲ್ಲಕ್ಕಿಯಲ್ಲಿ ಪಾರ್ಥಿವ ಶರೀರದ ಮೆರವಣಿಗೆ ನಡೆಸಿದರು.

ಪುತ್ರ ವಿನೋದ್ ರಾಜ್ ಅವರು ಅಂತಿಮ ವಿಧಿವಿಧಾನ ನೆರವೇರಿಸಿದರು. ಮೂರು ಸುತ್ತು ಕುಶಾಲುತೋಪು ಸಿಡಿಸಿ ಗೌರವ ಸಲ್ಲಿಸಲಾಯಿತು. ಬಳಿಕ, ಅವರ ತೋಟದಲ್ಲಿ ಹಿಂದೂ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ನೆರವೇರಿಸಲಾಯಿತು. ಆಗ ಅಲ್ಲಿ ಸೇರಿದ್ದವರ ದುಃಖದ ಕಟ್ಟೆ ಒಡೆಯಿತು. ಪುತ್ರ ವಿನೋದ್ ಕಣ್ಣಂಚಿನಲ್ಲಿ ನೀರು ಜಿನುಗುತ್ತಲೇ ಇತ್ತು.

ಲೀಲಾವತಿ ಅವರಿಗೆ ಮಹಾನಗರಗಳು, ಸಿನಿಮಾ ಕ್ಷೇತ್ರದಲ್ಲಿ ಬದುಕು ಕಲ್ಪಿಸಿದ್ದರೂ ನೆಲೆ ಕಂಡುಕೊಂಡಿದ್ದು ಮಾತ್ರ ಸೋಲದೇವನಹಳ್ಳಿ ಗ್ರಾಮದಲ್ಲಿ. ಈ ಭಾಗದ ಜನರು ಲೀಲಾವತಿ ಅವರನ್ನು 'ಲೀಲಮ್ಮ' ಎಂದೇ ಕರೆಯುತ್ತಿದ್ದರು. ಲೀಲಮ್ಮನ ನಿಧನದಿಂದ ಅಕ್ಕಪಕ್ಕದ ಊರುಗಳಲ್ಲೂ ಶೂನ್ಯಭಾವ ಆವರಿಸಿತ್ತು. ಜನರು ಲೀಲಮ್ಮನಿಗೆ ಕಣ್ಣೀರಿನ ವಿದಾಯ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಲೀಲಾವತಿ ಅವರು ನೆಲಮಂಗಲಕ್ಕೆ ಬಂದಿದ್ದು ಆಕಸ್ಮಿಕ. ಅದಕ್ಕೂ ಮೊದಲು ಮೈಲಹಳ್ಳಿಯಲ್ಲಿ ನೆಲೆಸಿದ್ದರು. ಈ ಭಾಗದ ಜನರ ಅಭಿಮಾನ ಸಂಪಾದಿಸಿ, ಪ್ರೀತಿ ಹಂಚಿ ಹೋದರು ಎಂದು ಅಂತಿಮ ದರ್ಶನಕ್ಕೆ ಬಂದಿದ್ದ ಸಾರ್ವಜನಿಕರು ನೆನಪಿಸಿಕೊಂಡರು.

ಶನಿವಾರ ಬೆಳಿಗ್ಗೆ 5ರಿಂದಲೇ ಅಭಿಮಾನಿಗಳು ನೆಲಮಂಗಲದ ಅಂಬೇಡ್ಕರ್ ಮೈದಾನದಲ್ಲಿ ದರ್ಶನಕ್ಕೆ ಬರಲು ಆರಂಭಿಸಿದ್ದರು. ಸಮಯ ಕಳೆದಂತೆ ಅಭಿಮಾನಿಗಳ ಸಂಖ್ಯೆ ಹೆಚ್ಚಾಯಿತು. ರವೀಂದ್ರ ಕಲಾಕ್ಷೇತ್ರಕ್ಕೆ ಪಾರ್ಥಿವ ಶರೀರ ಕೊಂಡೊಯ್ಯಲು ವಿಳಂಬವಾಗುತ್ತಿದೆ ಎಂದು ಮನವಿ ಮಾಡುತ್ತಿದ್ದರೂ ಅಭಿಮಾನಿಗಳು ಅಂತಿಮ ದರ್ಶನಕ್ಕೆ ಓಡೋಡಿ ಬರುತ್ತಿದ್ದರು.

'ಊಟ ಹಾಕಿದ್ದ ಅಮ್ಮ': ಅಂತಿಮ ದರ್ಶನಕ್ಕೆ ಬಂದಿದ್ದವರು ಲೀಲಾವತಿ ಅವರ ಸಾಮಾಜಿಕ ಕೆಲಸಗಳನ್ನು ನೆನಪು ಮಾಡಿ ಕಣ್ಣೀರು ಹಾಕಿದರು.

'ಅವರು ತೋಟದಲ್ಲಿ ಬೆಳೆದಿದ್ದ ಹಣ್ಣುಗಳನ್ನು ಮಾರಾಟ ಮಾಡದೆ ಜನರಿಗೆ ಹಂಚುತ್ತಿದ್ದರು. ಮನೆಗೆ ಹೋದ ಯಾರನ್ನೂ ಉಪವಾಸ ಕಳುಹಿಸುತ್ತಿರಲಿಲ್ಲ. ಸೋಲದೇವನಹಳ್ಳಿ ಸುತ್ತಮುತ್ತ ಆಸ್ಪತ್ರೆಯಿಲ್ಲದೇ ರೋಗಿಗಳು ತೊಂದರೆಗೆ ಒಳಗಾಗಿದ್ದರು. ಸ್ವಂತ ಖರ್ಚಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಿಸಿದ್ದಾರೆ. ಪಶು ಆಸ್ಪತ್ರೆಯನ್ನೂ ಕಟ್ಟಿಸಿಕೊಟ್ಟಿದ್ದಾರೆ' ಎಂದು ಅಭಿಮಾನಿಗಳು ಹೇಳಿದರು.

'ಒತ್ತುವರಿ ಹೆಸರಿನಲ್ಲಿ ಅರಣ್ಯ ಇಲಾಖೆ ನೂರಾರು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿತ್ತು. ಆಗ, ಲೀಲಾವತಿ ಅವರೇ ನೇತೃತ್ವ ವಹಿಸಿಕೊಂಡು ಹೋರಾಟ ನಡೆಸಿದ್ದರು. ಹೋರಾಟದ ಫಲವಾಗಿ ರೈತರಿಗೆ ಜಮೀನು ಉಳಿದಿದೆ' ಎಂದು ಈ ಭಾಗದ ಜನರು ಸ್ಮರಿಸಿದರು.

> ಲೀಲಾವತಿ ಒಬ್ಬ ಪರಿಪೂರ್ಣ ಕಲಾವಿದೆ. ಅವರಿಗೆ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿ ಸಿಗಬೇಕಿತ್ತು. ಸಿಗದೇ ಇರುವುದು ದುರಂತ. ಪದ್ಮ ಪ್ರಶಸ್ತಿಗೆ ಅರ್ಹರಾಗಿದ್ದವರು ಅವರು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ತಾಯಿ ಪೂಜಿಸೋಕೆ ನನಗೆ ಇಷ್ಟ. ಅವರ ಸಮಾಧಿ ಸ್ಥಳದಲ್ಲಿ ದೇವಸ್ಥಾನ ನಿರ್ಮಿಸುತ್ತೇನೆ. ನಿತ್ಯ ಅವರ ದರ್ಶನ ಮಾಡುತ್ತಾ ತೋಟದ ಮನೆಯಲ್ಲಿ ಕಾಲಕಳೆಯುತ್ತೇನೆ
> **ವಿನೋದ್ ರಾಜ್,** ಲೀಲಾವತಿ ಅವರ ಪುತ್ರ

ಜಾತ್ರೆಯ ಸಿದ್ಧತೆಯಲ್ಲಿ ದುಃಖದ ಛಾಯೆ

ಹಬ್ಬಕ್ಕಾಗಿ ಸಿಂಗಾರಗೊಂಡಿದ್ದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ದುಃಖದ ಛಾಯೆಯಿತ್ತು. ಅಲ್ಲಿ ಹೆಜ್ಜೆ ಹಾಕುತ್ತಿದ್ದರೆ ಜಾತ್ರೆಯ ವಾತಾವರಣ. ಪೂರ್ವನಿಗದಿಯಾಗಿದ್ದ 'ನಮ್ಮ ಜಾತ್ರೆ'ಗಾಗಿ ಆವರಣದಲ್ಲೆಲ್ಲ ತೂಗುಹಾಕಿದ್ದ ಬುಟ್ಟಿಗಳು, ಅದರಿಂದ ಜೋತುಬಿದ್ದ ಬಣ್ಣಬಣ್ಣದ ಬಟ್ಟೆಗಳು; ಕಲಾಕೃತಿಗಳು. ಆದರೆ, ಅದೇ ಆವರಣಕ್ಕೆ ಬಣ್ಣದ ಬದುಕಿನ ಪಯಣ ಮುಗಿಸಿದ ನಟಿ ಲೀಲಾವತಿ ಅವರ ಪಾರ್ಥಿವ ಶರೀರ ಬಂದಾಗ ಎಲ್ಲರಲ್ಲೂ ದಿಗ್ಭ್ರಾಂತಿ, ನೀರವತೆ. ಕಣ್ಣು, ಮೌನದಲ್ಲೇ ಲೀಲಾವತಿ ಅವರ ಆಪ್ತರ, ಒಡನಾಡಿಗಳ ಮಾತುಕತೆ.

ಶನಿವಾರ ಬೆಳಿಗ್ಗೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಲೀಲಾವತಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ನಟರಾದ ದ್ವಾರಕೀಶ್, ಶ್ರೀನಾಥ್, ರಾಮಕೃಷ್ಣ, ಟೆನ್ನಿಸ್ ಕೃಷ್ಣ, ಸಾಧುಕೋಕಿಲ, ಸೃಜನ್ ಲೋಕೇಶ್, ನಟಿಯರಾದ ಉಮಾಶ್ರೀ, ಸುಧಾರಾಣಿ, ತಾರಾ, ಮಾಳವಿಕಾ ಅವಿನಾಶ್, ಶ್ರುತಿ ಮುಂತಾದವರು ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು.

'ನಮ್ಮ ಜಾತ್ರೆ' ನಿಗದಿಯಾಗಿದ್ದ ಕಾರಣ, ಅದರಲ್ಲಿ ಪಾಲ್ಗೊಳ್ಳಲು ಕೆಲ ಜನಪದ ಕಲಾವಿದರು ಬಂದಿದ್ದರು. ಕಾರ್ಯಕ್ರಮ ಮುಂದೂಡಿಕೆಯಾದ ಕಾರಣ ಮೆರವಣಿಗೆಗೆ ಆಗಮಿಸಿದ್ದ ಆನೆ, ಎತ್ತುಗಳು ಅಲ್ಲಿಯೇ ಬೀಡುಬಿಟ್ಟಿದ್ದವು. ಆದರೆ, ಅಲ್ಲಿನ ಪರಿಸ್ಥಿತಿ ತದ್ವಿರುದ್ಧವಾಗಿತ್ತು. ದುಃಖ ಅಲ್ಲಿ ಮಡುಗಟ್ಟಿತ್ತು. ಪಾರ್ಥಿವ ಶರೀರದ ದರ್ಶನ ಪಡೆದವರು ಭಾವುಕರಾಗಿ ಕಣ್ಣೀರಾದರು. ಮಾತು ಹೊರಬೀಳದೆ ನಟ ದ್ವಾರಕೀಶ್ ಬಿಕ್ಕಳಿಸಿದರು. ಲೀಲಾವತಿ ಅವರ ಪುತ್ರ ವಿನೋದ್‌ರಾಜ್ ದುಃಖತಪ್ತರಾಗಿಯೇ ಸಂತೈಸುವ ಮಾತುಗಳಿಗೆ ಕಿವಿಯಾದರು.



ಲೀಲಾವತಿ ಅವರ ಸಾಕುನಾಯಿ 'ಕರಿಯ' ನೆಲಮಂಗಲದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಅಂತಿಮ ದರ್ಶನ ಪಡೆದ ಕ್ಷಣ –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

'ಕರಿಯ' ಶ್ವಾನ ಭಾವುಕ

ಲೀಲಾವತಿ ಅವರಿಗೆ ಸಾಕು ಪ್ರಾಣಿಗಳೆಂದರೆ ಅಚ್ಚುಮೆಚ್ಚು. ಮನೆಯಲ್ಲಿ ಜಾನುವಾರು ಜೊತೆಗೆ ಶ್ವಾನಗಳನ್ನೂ ಸಾಕಿದ್ದರು. ಲೀಲಮ್ಮನಿಗೆ 'ಕರಿಯ' (ಬ್ಲ್ಯಾಕಿ) ಶ್ವಾನ ಎಂದರೆ ಬಹು ಇಷ್ಟ. ಲೀಲಾವತಿ ಅವರನ್ನು ಕಳೆದುಕೊಂಡಿದ್ದ 'ಕರಿಯ' ಶ್ವಾನ ಭಾವುಕವಾಗಿದ್ದ ದೃಶ್ಯವು ಎಲ್ಲರ ಮನಕಲಕಿತು.

ಅಂಬೇಡ್ಕರ್ ಮೈದಾನದಲ್ಲಿ ಲೀಲಾವತಿ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಅಲ್ಲಿಗೆ ಮುದ್ದಿನ 'ಕರಿಯ'ನನ್ನು ಕರೆತರಲಾಗಿತ್ತು. ಪಾರ್ಥಿವ ಶರೀರವನ್ನು ರವೀಂದ್ರ ಕಲಾಕ್ಷೇತ್ರಕ್ಕೆ ರವಾನೆ ಮಾಡುವುದಕ್ಕೂ ಮುನ್ನ ಮನೆಯೊಡತಿ ಲೀಲಮ್ಮನ ದರ್ಶನ ಪಡೆದ 'ಕರಿಯ' ವೇದನೆ ಅನುಭವಿಸಿತು. ಪಕ್ಕದಲ್ಲಿದ್ದ ವಿನೋದ್ ರಾಜ್ ಅವರು ಶ್ವಾನವನ್ನು ಮುದ್ದಾಡಿ ಮೈದಡವಿದರು. ಕರಿಯನ ಸ್ಥಿತಿಕಂಡು ಭದ್ರತಾ ಸಿಬ್ಬಂದಿಯ ಕಣ್ಣಲ್ಲೂ ನೀರು ಜಿನುಗಿತು. ರವೀಂದ್ರ ಕಲಾಕ್ಷೇತ್ರಕ್ಕೂ ಆಂಬುಲೆನ್ಸ್‌ನಲ್ಲೇ ಕರಿಯ ಬಂದಿತ್ತು. ಅಂತ್ಯಕ್ರಿಯೆ ವೇಳೆಯೂ ಸಮಾಧಿ ಸ್ಥಳದ ಸುತ್ತಲೇ ಸುತ್ತು ಹಾಕುತ್ತಿತ್ತು.

ಸುದ್ದಿ 2 ನಿಮಿಷ

ಈಡಿಗರ ಸಮಾವೇಶ ರಾಜಕೀಯ ಪ್ರೇರಿತ: ಹರಿಪ್ರಸಾದ್ ಆರೋಪ

ಹುಬ್ಬಳ್ಳಿ: 'ಬೆಂಗಳೂರಿನಲ್ಲಿ ಡಿಸೆಂಬರ್ 10ರಂದು ಆಯೋಜಿಸಲಾಗಿರುವ ಈಡಿಗರ ಸಮಾವೇಶವು ರಾಜಕೀಯ ಪ್ರೇರಿತವಾಗಿದೆ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಇಲ್ಲಿ ಆರೋಪಿಸಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜಕೀಯ ಪ್ರೇರಿತ ಹಾಗೂ ಕುತಂತ್ರದಿಂದ ಆಯೋಜಿಸಲಾದ ಈ ಸಮಾವೇಶದಲ್ಲಿ ನಾನು ಪಾಲ್ಗೊಳ್ಳುವುದಿಲ್ಲ' ಎಂದರು.

'ಸಮಾಜದಲ್ಲಿ 6 ಸ್ವಾಮೀಜಿಗಳಿದ್ದಾರೆ. ಇವರ ಪೈಕಿ ಇಬ್ಬರು ಸ್ವಾಮೀಜಿಗಳು ಹೋಗುತ್ತಿಲ್ಲ. ಈ ಸಂಘ ಇಡೀ ಸಮಾಜವನ್ನು ಪ್ರತಿನಿಧಿಸುತ್ತಿಲ್ಲ. 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ಸಮಾಜವನ್ನು ಕೇವಲ 12 ಸಾವಿರ ಜನ ಸದಸ್ಯರಿರುವ ಸಂಘವು ಪ್ರತಿನಿಧಿಸಲು ಸಾಧ್ಯವಿಲ್ಲ' ಎಂದರು.

ನಿಂತಿದ್ದ ಟ್ರ್ಯಾಕ್ಟರ್‌ಗೆ ಆಂಬುಲೆನ್ಸ್ ಡಿಕ್ಕಿ: ಗರ್ಭಿಣಿ, ಶಿಶು ಸಾವು



ವಿಜಯಪುರ: ತಾಳಿಕೋಟೆಯಿಂದ ವಿಜಯಪುರ ಜಿಲ್ಲಾಸ್ಪತ್ರೆಗೆ ಶನಿವಾರ ಬರುತ್ತಿದ್ದ 108 ಆಂಬುಲೆನ್ಸ್ ಹೂವಿನ ಹಿಪ್ಪರಗಿಯಲ್ಲಿ ರಸ್ತೆ ಬದಿ ನಿಂತಿದ್ದ ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಗರ್ಭಿಣಿ ಮೃತಪಟ್ಟಿದ್ದು, ಹೊಟ್ಟೆಯಲ್ಲಿದ್ದ ಶಿಶು ಕೂಡ ಸಾವನ್ನಪ್ಪಿದೆ.

ತಾಳಿಕೋಟೆ ತಾಲ್ಲೂಕಿನ ನಾವದಗಿ ಗ್ರಾಮದ ಭಾಗ್ಯಶ್ರೀ ರಾವುತಪ್ಪ ಪಾರಣ್ಣನವರ (19) ಮೃತರು. ಒಂದೂವರೆ ವರ್ಷದ ಹಿಂದೆ ಅವರು ರಾವುತಪ್ಪ ಎಂಬವರನ್ನು ವಿವಾಹವಾಗಿದ್ದರು.

'ಹೆರಿಗೆ ನೋವು ಕಾಣಿಸಿದ ಕಾರಣ ಭಾಗ್ಯಶ್ರೀ ಅವರನ್ನು ನಾವದಗಿಯಿಂದ ತಾಳಿಕೋಟೆ ಸಮುದಾಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅಲ್ಲಿ ಆರೋಗ್ಯ ಸಮಸ್ಯೆ ಉಂಟಾಯಿತು. ಅವರನ್ನು ತಕ್ಷಣವೇ ಆಂಬುಲೆನ್ಸ್‌ನಲ್ಲಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವಾಗ ದುರ್ಘಟನೆ ಸಂಭವಿಸಿತು' ಎಂದು ತಾಳಿಕೋಟೆ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಸಿಟ್ಟಿಗೆದ್ದ ಪೋಷಕರು ತಾಳಿಕೋಟೆ ಸಮುದಾಯ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು. ಅಲ್ಲಿನ ವೈದ್ಯಾಧಿಕಾರಿ ಮೇಲೆ ಹಲ್ಲೆಗೆ ಯತ್ನಿಸಿದರು. ಆಂಬುಲೆನ್ಸ್‌ನಲ್ಲಿದ್ದ ಇಬ್ಬರು ಶುಶ್ರೂಷಕಿಯರು, ಒಬ್ಬ ಸಹಾಯಕನಿಗೆ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದ್ದಾರೆ.



ಸಾಗುವಳಿ ಹಕ್ಕಿಗಾಗಿ ಚನ್ನಮ್ಮನ ಕಿತ್ತೂರಿನಲ್ಲಿ ರೈತರು ಶನಿವಾರ ಧರಣಿ ಕುಳಿತ ಸ್ಥಳಕ್ಕೆ ಬಂದರು. ಕಿತ್ತೂರಿನ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಹಾಗೂ ನಿಚ್ಚಣಕಿಯ ಪಂಚಾಕ್ಷರಿ ಸ್ವಾಮೀಜಿ ಸಮಾಧಾನ ಮಾಡಿದರು –ಪ್ರಜಾವಾಣಿ ಚಿತ್ರ

ಸ್ವಾಮೀಜಿ ಮಧ್ಯಸ್ಥಿಕೆ ರೈತರ ಧರಣಿ ಅಂತ್ಯ

12 ಮಂದಿ ವಿರುದ್ಧ ಪ್ರಕರಣ; ಬಂಧನ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕುಲವಳ್ಳಿ ಗುಡ್ಡದ ರೈತರಿಗೆ ಸಾಗುವಳಿ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಶುಕ್ರವಾರ ನಡೆಸಿದ್ದ ರಾಷ್ಟ್ರೀಯ ಹೆದ್ದಾರಿ ತಡೆಗೆ ಸಂಬಂಧಿಸಿದಂತೆ ಪೊಲೀಸರು ವಶಕ್ಕೆ ಪಡೆದಿದ್ದ 80 ಪೈಕಿ 68 ಜನರನ್ನು ತಡರಾತ್ರಿ ಬಿಡುಗಡೆ ಮಾಡಿದರು.

ಉಳಿದ 12 ಜನರ ವಿರುದ್ಧ 'ಮಹಿಳಾ ಪೊಲೀಸರ ಮೇಲೆ ಹಲ್ಲೆ, ದೌರ್ಜನ್ಯ, ದೊಂಬಿ ಹಾಗೂ ಕರ್ತವ್ಯಕ್ಕೆ ಅಡ್ಡಿ' ಪ್ರಕರಣ ದಾಖಲಿಸಿ, ಬಂಧಿಸಲಾಗಿದೆ.

ಸಾಗುವಳಿ ಹಕ್ಕಿಗೆ ಆಗ್ರಹಿಸಿ ಕುಲವಳ್ಳಿ ಗುಡ್ಡದ 9 ಗ್ರಾಮಗಳ ರೈತರು ಕಿತ್ತೂರಿನ ರಾಣಿ ಚನ್ನಮ್ಮ ವೃತ್ತದಲ್ಲಿ ಶುಕ್ರವಾರ ಧರಣಿ ನಡೆಸಿದ್ದರು. ಸ್ಥಳಕ್ಕೆ ಅಧಿಕಾರಿಗಳು ಬಾರದ ಕಾರಣ, ರಾಷ್ಟ್ರೀಯ ಹೆದ್ದಾರಿ ತಡೆ ಮಾಡಿದರು. ಈ ವೇಳೆ ರೈತರು– ಪೊಲೀಸರ ಮಧ್ಯೆ ಜಟಾಪಟಿ ನಡೆಯಿತು.


ಶುಕ್ರವಾರ ರಾತ್ರಿಯಿಂದ ಹೋರಾಟ ಮುಂದುವರಿಸಿದ ರೈತರು, '12 ಜನರನ್ನು ಬಿಡುಗಡೆ ಮಾಡುವವರೆಗೆ ಹೋರಾಟ ಕೈ ಬಿಡುವುದಿಲ್ಲ' ಎಂದು ಪಟ್ಟು ಹಿಡಿದರು. ಅವರೊಂದಿಗೆ ಮಕ್ಕಳೂ ಧರಣಿ ಕುಳಿತಿದ್ದರು. ಬೆಳಗಾವಿಯಿಂದ ಮಧ್ಯರಾತ್ರಿ ಸ್ಥಳಕ್ಕೆ ಬಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ಮಕ್ಕಳನ್ನು ಮನೆಗೆ ಕಳುಹಿಸುವಂತೆ ವಿನಂತಿಸಿದರು. ರೈತರು ತಮ್ಮ ವಾಹನಗಳಲ್ಲಿ ಅವರನ್ನು ಮನೆಗೆ ಬಿಟ್ಟು ಬಂದರು.

ಪೊಲೀಸ್ ಇಲಾಖೆಯಿಂದ ಹೋರಾಟದ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಯಿತು. ಹೋರಾಟಗಾರರ ಚಲನ–ವಲನಗಳ ಮೇಲೆ ನಿಗಾ ಇಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ರೈತರಿಗೆ ಸೆಡ್ಡು ಹೊಡೆದು ತೀವ್ರ ಟೀಕೆಗೆ ಗುರಿಯಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಶನಿವಾರ ನಸುಕಿನವರೆಗೆ ಸ್ಥಳದಲ್ಲೇ ಬೀಡುಬಿಟ್ಟರು. ಶನಿವಾರ ಹೆದ್ದಾರಿಯುದ್ದಕ್ಕೂ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಶ್ರೀಗಳ ಮಧ್ಯಸ್ಥಿಕೆ– ಹೋರಾಟ ಅಂತ್ಯ: ಸಂಜೆ ಧರಣಿ ಸ್ಥಳಕ್ಕೆ ಬಂದ ಕಿತ್ತೂರು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಹಾಗೂ ನಿಚ್ಚಣಕಿಯ ಪಂಚಾಕ್ಷರಿ ಸ್ವಾಮೀಜಿ ರೈತರನ್ನು ಸಮಾಧಾನ ಮಾಡಿದರು. ರೈತರ ಸಮಸ್ಯೆ ಕುರಿತು ಸಚಿವರಿಗೆ ಖುದ್ದಾಗಿ ಮನವರಿಕೆ ಮಾಡಲಾಗುವುದು ಎಂದರು. ನಂತರ ಧರಣಿ ಕೈ ಬಿಡಲಾಯಿತು.

ಉಚಿತ ಯೋಜನೆಗಳಿಂದ ಅಭಿವೃದ್ಧಿ ಕುಂಠಿತ: ರಂಭಾಪುರಿ ಶ್ರೀ



ವೀರ ಸೋಮೇಶ್ವರ ಸ್ವಾಮೀಜಿ

ಮುದ್ದೇಬಿಹಾಳ (ವಿಜಯಪುರ): 'ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಉಚಿತ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗಿದೆ' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಬಳವಾಟದಲ್ಲಿ ಶನಿವಾರ ನಡೆದ ಧಾರ್ಮಿಕ ಸಮಾರಂಭದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಧಾರ್ಮಿಕ ಕ್ಷೇತ್ರ ಅಲ್ಲದೇ ರಾಜ್ಯದ ಯಾವ ಅಭಿವೃದ್ಧಿ ಕೆಲಸಗಳಿಗೂ ಹಣ ಬಿಡುಗಡೆ ಆಗುತ್ತಿಲ್ಲ. ಅನುದಾನವೂ ಸಿಗುತ್ತಿಲ್ಲ ಎಂಬ ಬೇಸರ ಶಾಸಕರಲ್ಲಿದೆ' ಎಂದರು.

'ಉಚಿತ ಯೋಜನೆಗಳಿಗೆ ಮುಕ್ಕಾಲು ಭಾಗ ಹಣ ಖರ್ಚಾಗುವುದರಿಂದ ಅಭಿವೃದ್ಧಿ ಸ್ಥಗಿತಗೊಂಡಿದೆ. ಯೋಜನೆಗಳ ಮೊರೆ ಹೋಗಿ ದುಡಿಯುವ ಜನರು ಕೂಡ ಸೋಮಾರಿಗಳಾಗಿದ್ದಾರೆ' ಎಂದರು.


'ರೇಣುಕಾಚಾರ್ಯರು ಕಾಯಕವೇ ಕಳಾಚೈತನ್ಯ, ಬಸವಣ್ಣನವರು ಕಾಯಕವೇ ಕೈಲಾಸ ಎಂದಿದ್ದರು. ದುಡಿದು ಬದುಕುವ ಮನೋಪ್ರವೃತ್ತಿಯನ್ನು ಜನರಲ್ಲಿ ರಾಜಕಾರಣಿಗಳು ಬೆಳೆಸಬೇಕು' ಎಂದರು.

'ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಸಮಗ್ರ ಅಭಿವೃದ್ಧಿ ಕುರಿತು ಚರ್ಚೆಯಾಗಬೇಕು. ಜಾತಿಯ ತುಷ್ಟೀಕರಣ ಮಾಡುವುದು ಒಳ್ಳೆಯ ಬೆಳವಣಿಗೆಯಲ್ಲ' ಎಂದರು.

'ಸದಾಶಿವ ಆಯೋಗ ವರದಿ ಅಪ್ರಸ್ತುತ'

ವರದಿಗೆ ಮರುಜೀವ ಬೇಡ: ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ

ಪ್ರಜಾವಾಣಿ ವಾರ್ತೆ



ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿ ಮನವಿ ಸಲ್ಲಿಸಿತು

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಸಲ್ಲಿಸಿರುವ ವರದಿಯು ಈಗ ಅಪ್ರಸ್ತುತವಾಗಿದ್ದು, ಅದಕ್ಕೆ ಮರುಜೀವ ನೀಡಬಾರದು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನೇತೃತ್ವದ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾದಲ್ಲಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿದ ನಿಯೋಗವು, 'ಈ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬಾರದು. ಇಂತಹ ಅಸಾಂವಿಧಾನಿಕ ವಿಚಾರಕ್ಕೆ ಕೈ ಹಾಕಬಾರದು' ಎಂದೂ ಆಗ್ರಹಿಸಿದೆ.

'ಬಂಜಾರ, ಭೋವಿ, ಕೊರಮ, ಕೊರಚ, ಛಲವಾದಿ, ಅಲೆಮಾರಿ ಮತ್ತಿತರ ದಮನಿತ ಸಮುದಾಯಗಳ ಹಿತರಕ್ಷಣೆ ಮಾಡಬೇಕು. ಸಮುದಾಯಗಳನ್ನು ಎತ್ತಿ ಕಟ್ಟುವ ಚಿತಾವಣೆ ಮಾಡುವವರ ಮೇಲೆ ಸೂಕ್ತ ಕ್ರಮ ವಹಿಸಬೇಕು' ಎಂದು ಮನವಿ ಮಾಡಿದೆ.

ಶಿಳ್ಳೆ ಕ್ಯಾತ ಜಾತಿ ಪ್ರಮಾಣಪತ್ರ ವಿತರಣೆ ಕುರಿತು ಬಿ.ಎಚ್. ಮಂಜುನಾಥ್ ಅವರು ಮುಖ್ಯಮಂತ್ರಿಗೆ ಮನವಿ ಪತ್ರ ಸಲ್ಲಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ವಿಧಾನ ಪರಿಷತ್ ಸದಸ್ಯ ಪ್ರಕಾಶ ರಾಥೋಡ ಇದ್ದರು. ನಿಯೋಗದಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ, ವೇದಿಕೆಯ ಅಧ್ಯಕ್ಷ ರವಿ ಎಚ್. ಮಾಕಳಿ, ಕಾರ್ಯಾಧ್ಯಕ್ಷ ಅನಂತ ನಾಯ್ಕ್, ಉಪಾಧ್ಯಕ್ಷ ಆದರ್ಶ್ ಎಲ್ಲಪ್ಪ, ಶಿವಮೊಗ್ಗ ಪಲ್ಲವಿ ಇದ್ದರು.

ನಿಧನ ವಾರ್ತೆ

ಪವಮಾನಾಚಾರ



ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ರಾಯರ ವೃಂದಾವನದ ಮೂಲ ಅರ್ಚಕರಾಗಿದ್ದ ಪವಮಾನಾಚಾರ ಗುರುರಾಜ ಆಚಾರ (67) ಶನಿವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ನಿಧನರಾದರು. ಪವಮಾನಾಚಾರ ಅವರಿಗೆ ಪತ್ನಿ ಹಾಗೂ ಮೂವರು ಪುತ್ರರು ಇದ್ದಾರೆ.

ಅವರು ಮಠದ ಅರ್ಚಕರಾಗಿ 20 ವರ್ಷ ಸೇವೆ ಸಲ್ಲಿಸಿದ್ದಾರೆ. ಮಂತ್ರಾಲಯದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಚಿಂಚನಸೂರ್ ಮೂಲಕ ಸಂಧಾನ ಯತ್ನ: ಮಣಿಕಂಠ

'ಖರ್ಗೆ ವಿರುದ್ಧ ಟೀಕೆ ನಿಲ್ಲಿಸಲು ಆಮಿಷ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಮಲ್ಲಿಕಾರ್ಜುನ ಖರ್ಗೆ ಕುಟುಂಬದ ವಿರುದ್ಧ ಮಾತನಾಡುವುದನ್ನು ನಿಲ್ಲಿಸಿ, ಕಾಂಗ್ರೆಸ್‌ಗೆ ಸೇರ್ಪಡೆಯಾದರೆ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನೀಡುವುದಾಗಿ ಕಾಂಗ್ರೆಸ್ ಮುಖಂಡ ಬಾಬುರಾವ್ ಚಿಂಚನಸೂರ್ ಅವರ ಮೂಲಕ ನಮ್ಮ ತಂದೆ ನರೇಂದ್ರ ರಾಠೋಡ ಅವರಿಗೆ ಫೋನ್ ಕರೆ ಮಾಡಿ ನನಗೆ ಆಮಿಷ ಒಡ್ಡಲಾಗಿತ್ತು' ಎಂದು ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಆರೋಪಿಸಿದ್ದಾರೆ.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಾಬುರಾವ್ ಚಿಂಚನಸೂರ್ ಮುಖಾಂತರ ಪಕ್ಷಕ್ಕೆ ಬರುವಂತೆ ಆಮಂತ್ರಿಸಿದ್ದರು' ಎಂದು ಆಪಾದಿಸಿ, ತಮ್ಮ ತಂದೆ ಜತೆಗೆ ಚಿಂಚನಸೂರ್ ಅವರು ಮಾತನಾಡಿದ್ದರು ಎನ್ನಲಾದ 20 ಸೆಕೆಂಡ್‌ಗಳ ದೂರವಾಣಿ ಕರೆ ಸಂಭಾಷಣೆಯನ್ನು ಹಂಚಿಕೊಂಡಿದ್ದಾರೆ.

'ಮಗನಿಗೆ ಮೊದಲು ಹೇಳ್ರಿ. ಇಲ್ಲಿ ತನಕ ₹15, ₹20 ಕೋಟಿ ಖರ್ಚು ಮಾಡಿ ಹಾಳು ಮಾಡಿದ್ದನ್ನು ಖರ್ಗೆ, ಪ್ರಿಯಾಂಕ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರಗೆ ಹೇಳುತ್ತೇನೆ. ಅವನಿಗೆ ದೊಡ್ಡ ಚೇರ್ಮನ್ ಕೊಡಿಸುತ್ತೇನೆ. ಬಡ್ಡಿ, ಗಂಟು, ಚಕ್ರ ಬಡ್ಡಿ ಸಹಿತ ವಾಪಸ್ ಬರುತ್ತದೆ' ಎಂದು ಚಿಂಚನಸೂರ್ ಹೇಳಿದ್ದಾರೆ ಎನ್ನಲಾದ ಆಡಿಯೊ ಹರಿದಾಡುತ್ತಿದೆ.

ಪತ್ರಿಕಾಗೋಷ್ಠಿ ಮುಗಿಸಿ ತೆರಳುತ್ತಿದ್ದ ಮಣಿಕಂಠ ಕಾರನ್ನು ಅಡ್ಡಗಟ್ಟಿದ ಕಾಂಗ್ರೆಸ್ ಕಾರ್ಯಕರ್ತರು, ಅವರ ವಿರುದ್ಧ ಘೋಷಣೆ ಕೂಗಿದರು.

'2ಎ ಮೀಸಲು: 13ಕ್ಕೆ ಪ್ರತಿಭಟನೆ'



ಬಸವಜಯ ಮೃತ್ಯುಂಜಯ ಸ್ವಾಮೀಜಿ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ '2ಎ' ಮೀಸಲಾತಿ ನೀಡಬೇಕು ಎಂಬ ಬೇಡಿಕೆಗೆ ಸರ್ಕಾರ ಸ್ಪಂದಿಸದ ಕಾರಣ ಡಿ.13ರಂದು ಬೆಳಗಾವಿಯಲ್ಲಿ ಪ್ರತಿಭಟನೆಗೆ ತೀರ್ಮಾನಿಸಿದ್ದೇವೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಅಂದು ಗಾಂಧಿ ಭವನದಿಂದ ಚನ್ನಮ್ಮನ ವೃತ್ತದವರೆಗೆ ಪಾದಯಾತ್ರೆ ನಡೆಸಲಾಗುವುದು. ಅಗತ್ಯವಿದ್ದರೆ ಸುವರ್ಣ ವಿಧಾನಸೌಧದವರೆಗೂ ಪಾದಯಾತ್ರೆ ಕೈಗೊಳ್ಳಲಾಗುವುದು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಸಮುದಾಯದ ಸಚಿವರು ಮತ್ತು ಶಾಸಕರು ನಮ್ಮ ಬೇಡಿಕೆ ಬಗ್ಗೆ ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದರು. ಉತ್ತರ ಕರ್ನಾಟಕದಲ್ಲಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ಬೆಳಗಾವಿಯಲ್ಲಿ ಸಭೆ ನಡೆಸಬೇಕೆಂದು ಕೋರಿದ್ದರು. ಆದರೆ, ಮುಖ್ಯಮಂತ್ರಿ ಬೆಂಗಳೂರಿನಲ್ಲಿ ಸಭೆ ನಡೆಸಲು ಒಲವು ತೋರಿದ್ದಾರೆ. ಅವರು ಡಿ. 13ರೊಳಗೆ ಪಂಚಮಸಾಲಿ ಸಮುದಾಯದ ಸಚಿವರು, ಶಾಸಕರ ಸಭೆ ಕರೆದು, ಮೀಸಲಾತಿ ನೀಡುವ ಕುರಿತು ಅಂತಿಮ ನಿರ್ಧಾರ ಪ್ರಕಟಿಸಬೇಕು' ಎಂದರು.

ಮೂವರಿಗೆ 'ಆಳ್ವಾಸ್ ವಿರಾಸತ್'

ಆಳ್ವಾಸ್ ವಿರಾಸತ್ 2023 ಸಾಂಸ್ಕೃತಿಕ ಉತ್ಸವ 14ರಿಂದ

ಪ್ರಜಾವಾಣಿ ವಾರ್ತೆ



ಪ್ರವೀಣ್ ಗೋಡ್ಖಿಂಡಿ



ವಿಜಯ ಪ್ರಕಾಶ್



ಮೈಸೂರು ಮಂಜುನಾಥ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ನೀಡುವ 'ಆಳ್ವಾಸ್ ವಿರಾಸತ್ 2023' ಪ್ರಶಸ್ತಿಗೆ ವಯೋಲಿನ್ ವಾದಕ ಮೈಸೂರು ಮಂಜುನಾಥ್, ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ ಹಾಗೂ ಗಾಯಕ ವಿಜಯ ಪ್ರಕಾಶ್ ಅವರನ್ನು ಆಯ್ಕೆ ಮಾಡಲಾಗಿದೆ.

ಮೂಡುಬಿದಿರೆಯಲ್ಲಿ ಇದೇ 14ರಿಂದ 17ರವರೆಗೆ ಆಳ್ವಾಸ್ ವಿರಾಸತ್ 2023 ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಏರ್ಪಡಿಸಲಾಗಿದೆ. ಇದೇ 17ರಂದು ಸಂಜೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ತಲಾ ₹1 ಲಕ್ಷ ನಗದನ್ನು ಒಳಗೊಂಡಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಮೋಹನ ಆಳ್ವ ಅವರು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ರಾಜ್ಯಪಾಲ ಥಾವರಚಂದ್ ಗೆಹಲೋತ್ ಇದೇ 14ರಂದು ಸಂಜೆ 5.30ಕ್ಕೆ ವಿರಾಸತ್‌ಗೆ ಚಾಲನೆ ನೀಡಲಿದ್ದಾರೆ. ಅಂದು ಸಾಂಸ್ಕೃತಿಕ ಮೆರವಣಿಗೆ ನಡೆಯಲಿದ್ದು, 100ಕ್ಕೂ ಹೆಚ್ಚು ಕಲಾತಂಡಗಳು ಹಾಗೂ 3000ಕ್ಕೂ ಅಧಿಕ ಕಲಾವಿದರು ಭಾಗವಹಿಸಲಿದ್ದಾರೆ. ಅದೇ ದಿನ ನಡೆಯುವ ಸಾಂಸ್ಕೃತಿಕ ರಥ ಮತ್ತು ರಥಾರತಿ ಈ ಸಲದ ವಿರಾಸತ್‌ನ ವೈಶಿಷ್ಟ್ಯ. ಕಾಶಿಯಲ್ಲಿ ಗಂಗಾರತಿ ನಡೆಸುವ ತಂಡವೇ ಇಲ್ಲಿ ರಥಾರತಿಯನ್ನು ನೆರವೇರಿಸಲಿದೆ' ಎಂದರು.

'15ರಂದು ಸಂಜೆ 6ರಿಂದ ಬೆನ್ನಿ ದಯಾಳ್ ಅವರು 'ಗಾನ ವೈಭವ'ವನ್ನು, 16ರಂದು ಶ್ರೇಯಾ ಘೋಷಾಲ್ ಅವರು 'ಭಾವ ಲಹರಿ' ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಇದೇ 17ರಂದು ಮೈಸೂರು ಮಂಜುನಾಥ್, ಪ್ರವೀಣ್ ಗೋಡ್ಖಿಂಡಿ ಹಾಗೂ ವಿಜಯ ಪ್ರಕಾಶ್ ಅವರು ತಾಳ ವಾದ್ಯ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಪ್ರತಿ ದಿನವೂ ಆಳ್ವಾಸ್ ಸಾಂಸ್ಕೃತಿಕ ವೈಭವ ನಡೆಯಲಿದೆ. ಕೃಷಿ ಮೇಳ, ಆಹಾರ ಮೇಳ, ಫಲಪುಷ್ಪ ಮೇಳ, ಕರಕುಶಲ ಮತ್ತು ಪ್ರಾಚ್ಯವಸ್ತು ಪ್ರದರ್ಶನ ಮೇಳ, ಚಿತ್ರಕಲಾ ಮೇಳ, ಕಲಾಕೃತಿಗಳ ಪ್ರದರ್ಶನ, ಛಾಯಾಚಿತ್ರ ಪ್ರದರ್ಶನಗಳು ವಿರಾಸತ್‌ಗೆ ಮೆರುಗು ತುಂಬಲಿವೆ' ಎಂದು ಹೇಳಿದರು.

ಪೂರ್ಣಪ್ರಮಾಣದ 2ಎ ಮೀಸಲಾತಿ ನೀಡುವಂತೆ ಸಭೆಯಲ್ಲಿ ಒತ್ತಾಯ

'ಬಲಿಜ ಸಮುದಾಯಕ್ಕೆ ಪೀಠದ ಚಿಂತನೆ'

ಪ್ರಜಾವಾಣಿ ವಾರ್ತೆ



ದಕ್ಷಿಣ ಭಾರತ ಬಲಿಜ ಬಂಧುಗಳ ಮಹಾಸಂಗಮ ಸಭೆಯಲ್ಲಿ (ಎಡದಿಂದ) ಬಳ್ಳಾರಿ ಬಲಿಜ ವೇದಿಕೆ ಅಧ್ಯಕ್ಷ ರಮೇಶ್ ಬುಜ್ಜಿ, ದಕ್ಷಿಣ ಭಾರತ ಕಾಪು ಬಲಿಜ ಸಂಚಾಲಕ ದಾಸರಿ ರಾಮುಲು, ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್, ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಮುನಿಕೃಷ್ಣ, ತೆಲಂಗಾಣ ಮುನ್ನುರೂ ಕಾಪು ಬಲಿಜ ರಾಜ್ಯ ಘಟಕದ ಅಧ್ಯಕ್ಷ ಕೊಂಡ ದೇವಯ್ಯ ಪಟೇಲ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ದಕ್ಷಿಣ ಭಾರತದ ಬಲಿಜ ಸಮುದಾಯದ ಗುರುಪೀಠವನ್ನು ಹಂಪಿಯಲ್ಲಿ ಸ್ಥಾಪಿಸಲು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಚಿಂತನೆ ನಡೆಸಿದೆ.

ದಕ್ಷಿಣ ಭಾರತ ಬಲಿಜ ಬಂಧುಗಳ ಮಹಾಸಂಗಮ ಸಭೆ ಶನಿವಾರ ನಡೆಯಿತು. ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಿತು.

'ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಪುದುಚೇರಿ ರಾಜ್ಯಗಳ ಬಲಿಜ ಸಮುದಾಯದ ಮುಖಂಡರು ತಮ್ಮ ರಾಜ್ಯಗಳಲ್ಲಿ ಸಮುದಾಯದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಸಭೆಯಲ್ಲಿ ಮಾಹಿತಿ ಹಂಚಿಕೊಂಡರು. ದಕ್ಷಿಣ ಭಾರತದಲ್ಲಿ ಬಲಿಜ ಸಮುದಾಯವು ರಾಜಕೀಯವಾಗಿ ಅಸ್ಥಿರವಾಗಿದ್ದು, ಅವರೆಲ್ಲರನ್ನು ಒಂದುಗೂಡಿಸುವುದು ಸಭೆಯ ಮುಖ್ಯ ಉದ್ದೇಶವಾಗಿತ್ತು' ಎಂದು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಅಧ್ಯಕ್ಷ ಮುನಿಕೃಷ್ಣ ತಿಳಿಸಿದರು.

'ರಾಜ್ಯದಲ್ಲಿ ಬಲಿಜ ಸಮುದಾಯಕ್ಕೆ ಪೂರ್ಣಪ್ರಮಾಣದ 2ಎ ಮೀಸಲಾತಿ ಕಲ್ಪಿಸಬೇಕು. ವಿಜಯನಗರ ಸಾಮ್ರಾಜ್ಯದ ದೊರೆ ಶ್ರೀಕೃಷ್ಣದೇವರಾಯನ 108 ಅಡಿಯ ಪ್ರತಿಮೆಯನ್ನು ರಾಜ್ಯದಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಹಿಂದಿನಿಂದಲೂ ಬಲಿಜ ಸಮುದಾಯಕ್ಕೆ ರಾಜಕೀಯವಾಗಿ ಅನ್ಯಾಯ ಮಾಡಲಾಗಿದೆ. ಆದರೆ, ಚುನಾವಣೆ ಸಂದರ್ಭದಲ್ಲಿ ಸಮುದಾಯದ ಅಭಿವೃದ್ಧಿ ಹೆಸರಿನಲ್ಲಿ ಮತ ಕೇಳುವ ಕೆಲಸ ಮಾಡಲಾಗುತ್ತಿದೆ. ಆದ್ದರಿಂದ, ಎಲ್ಲ ರಾಜಕೀಯ ಪಕ್ಷಗಳು ಬಲಿಜರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ಸಮುದಾಯದ ಮುಖಂಡ ಲಕ್ಷ್ಮೀ-ಶ್ರೀನಿವಾಸ್, 'ಸ್ವಾಮಿ ವಿವೇಕಾನಂದರು, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ ಸೇರಿದಂತೆ ಅನೇಕ ಮಹನೀಯರು ಬಲಿಜ ಸಮುದಾಯಕ್ಕೆ ಸೇರಿದ್ದವರಾಗಿದ್ದಾರೆ. ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಬಲಿಜ ಸಮುದಾಯಕ್ಕೆ ಸೇರಿದ ವ್ಯಕ್ತಿಯೇ ಮುಖ್ಯಮಂತ್ರಿ ಆಗಲಿದ್ದಾರೆ' ಎಂದರು.

ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್, 'ಬಲಿಜ ಸಮುದಾಯಕ್ಕೆ ಪೂರ್ಣ ಪ್ರಮಾಣದ 2ಎ ಮೀಸಲಾತಿ ಕಲ್ಪಿಸಬೇಕೆಂದು ಅಧಿವೇಶನದಲ್ಲಿ ಧ್ವನಿ ಎತ್ತುತ್ತೇನೆ' ಎಂದು ಭರವಸೆ ನೀಡಿದರು. ಖಜಾಂಚಿ ನಾಗರಾಜ ಭಾಗವಹಿಸಿದ್ದರು.

'22 ಪ್ರಕರಣಗಳಿಂದಾಗಿ ಶಾಸಕನಾದೆ!'

'ನನ್ನ ಮೇಲೆ 22 ಪ್ರಕರಣಗಳು ದಾಖಲಾಗಿರುವ ಕಾರಣ ಇಂದು ಶಾಸಕನಾಗಿದ್ದೇನೆ. 50 ಪ್ರಕರಣಗಳು ದಾಖಲಾಗಿದ್ದರೇ ಏನಾಗುತ್ತಿದ್ದೆನೊ. ನೀವೇ ಯೋಚಿಸಿ' ಎಂದು ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

'ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕಾದರೆ ಎಲ್ಲದಕ್ಕೂ ತಯಾರಾಗಬೇಕು. ಎಷ್ಟೇ ಪ್ರಕರಣಗಳು ದಾಖಲಾದಾರೂ ಅದನ್ನು ಎದುರಿಸಬೇಕು. ಯಾವುದಕ್ಕೂ ಹೆದರದೆ ಮುಂದೆ ಸಾಗಿದರೆ ಮಾತ್ರ ಜೀವನದಲ್ಲಿ ಯಶಸ್ವಿ ಆಗಬಹುದು' ಎಂದರು.

ಶಿವರಾಜ್ ಸಿಂಗ್ ಚೌಹಾಣ್ ಅಥವಾ ಪ್ರಹ್ಲಾದ್ ಪಟೇಲ್ ಮಧ್ಯಪ್ರದೇಶದ ಮುಂದಿನ ಸಿ.ಎಂ?

ನಾಳೆ ಮುಖ್ಯಮಂತ್ರಿ ಆಯ್ಕೆ ಸಾಧ್ಯತೆ

ಪ್ರಜಾವಾಣಿ ವಾರ್ತೆ/ಪಿಟಿಐ

ಭೋಪಾಲ್: ಮಧ್ಯಪ್ರದೇಶ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಸೋಮವಾರ ಸಭೆ ನಡೆಯಲಿದ್ದು, ಮುಂದಿನ ಮುಖ್ಯಮಂತ್ರಿ ಯಾರಾಗುವರು ಎಂಬ ಕುತೂಹಲಕ್ಕೆ ತೆರೆಬೀಳುವ ಸಾಧ್ಯತೆಯಿದೆ.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 230 ಸ್ಥಾನಗಳ ಪೈಕಿ 163ರಲ್ಲಿ ಗೆದ್ದು ಅಧಿಕಾರ ಹಿಡಿಯಲು ಸಜ್ಜಾಗಿದೆ. ನೂತನ ಮುಖ್ಯಮಂತ್ರಿಯ ಆಯ್ಕೆಗೆ ಪಕ್ಷದ ಹೈಕಮಾಂಡ್ ಹರಿಯಾಣ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್, ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಕೆ.ಲಕ್ಷ್ಮಣ್ ಮತ್ತು ಕಾರ್ಯದರ್ಶಿ ಆಶಾ ಲಾಕ್ರ ಅವರನ್ನು ವೀಕ್ಷಕರನ್ನಾಗಿ ಶುಕ್ರವಾರ ನೇಮಿಸಿದೆ.

'ಕೇಂದ್ರದ ವೀಕ್ಷಕರ ಸಮ್ಮುಖದಲ್ಲಿ ಸೋಮವಾರ ಸಂಜೆ ಸಭೆ ನಡೆಯಲಿದೆ' ಎಂದು ಮಧ್ಯಪ್ರದೇಶದ ಬಿಜೆಪಿ ಮಾಧ್ಯಮ ವಿಭಾಗದ ಅಧ್ಯಕ್ಷ ಆಶೀಶ್ ಅಗರವಾಲ್ ಶನಿವಾರ ತಿಳಿಸಿದರು.

ಶಾಸಕಾಂಗ ಪಕ್ಷದ ಸಭೆಯನ್ನು ಭಾನುವಾರ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ವೀಕ್ಷಕರು ಪೂರ್ವನಿಗದಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಿದ್ದರಿಂದ ಸೋಮವಾರಕ್ಕೆ ಮುಂದೂಡಲಾಗಿದೆ.

ಕೇಂದ್ರದ ವೀಕ್ಷಕರು ಭಾನುವಾರ ರಾತ್ರಿ ಅಥವಾ ಸೋಮವಾರ ಬೆಳಿಗ್ಗೆ ಭೋಪಾಲ್‌ಗೆ ಬರಲಿದ್ದಾರೆ ಎಂದು ಹೇಳಿದರು.

ಬಿಜೆಪಿಯು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಯನ್ನು ಘೋಷಿಸದೆ ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಎದುರಿಸಿದ್ದು ಕಳೆದ 20 ವರ್ಷಗಳಲ್ಲಿ ಇದೇ ಮೊದಲು. ಪಕ್ಷದ ಹೈಕಮಾಂಡ್ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಬದಲಿಸಲು ಬಯಸಿದರೆ, ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ಇನ್ನೊಬ್ಬ ಮುಖಂಡ ಪ್ರಹ್ಲಾದ್ ಪಟೇಲ್ ಅವರು ಸಿ.ಎಂ ಹುದ್ದೆಗೆ ಆಯ್ಕೆಯಾಗುವ ಸಾಧ್ಯತೆ ಅಧಿಕವಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಲೋಧಿ ಸಮುದಾಯಕ್ಕೆ ಸೇರಿರುವ ಪಟೇಲ್, ನರಸಿಂಹಪುರ ಕ್ಷೇತ್ರದಿಂದ ಗೆದ್ದಿದ್ದಾರೆ. ಪಕ್ಷದ ಸೂಚನೆಯಂತೆ ಸ್ಪರ್ಧಿಸಿದ್ದ ಅವರು ಎರಡು ದಿನಗಳ ಹಿಂದೆ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಮಧ್ಯಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ಒಬಿಸಿ ಪ್ರಮಾಣ ಶೇ 48ರಷ್ಟಿದೆ. ಆದ್ದರಿಂದ ಬಿಜೆಪಿ ಇಲ್ಲಿ ಮುಖ್ಯಮಂತ್ರಿ ಸ್ಥಾನವನ್ನು ಒಬಿಸಿ ಸಮುದಾಯಕ್ಕೆ ನೀಡುತ್ತಾ ಬಂದಿದೆ.

ಚೌಹಾಣ್ ಅವರಿಗಿಂತಲೂ ಹಿಂದೆ ಮುಖ್ಯಮಂತ್ರಿ ಆಗಿದ್ದ ಉಮಾ ಭಾರತಿ (2003) ಮತ್ತು ಬಾಬೂಲಾಲ್ ಗೌರ್ (2004) ಅವರೂ ಒಬಿಸಿ ವರ್ಗಕ್ಕೆ ಸೇರಿದವರು.

ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನರೇಂದ್ರ ತೋಮರ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗಿಯ, ಮಧ್ಯಪ್ರದೇಶ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ. ಶರ್ಮಾ ಅವರೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ಚರ್ಚೆಗೆ ಕಾರಣವಾದ 'ರಾಮ್ ರಾಮ್' ಸಂದೇಶ

ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ 'ಸಭೀ ಕೊ ರಾಮ್ ರಾಮ್' (ಎಲ್ಲರಿಗೂ ರಾಮ್ ರಾಮ್) ಎಂಬ ಸಂದೇಶವನ್ನು ಹಾಕಿದ್ದು ಚರ್ಚೆಗೆ ಕಾರಣವಾಯಿತು. ಕೈಮುಗಿಯುತ್ತಿರುವ ಚಿತ್ರವನ್ನೂ ಅವರು ಪೋಸ್ಟ್ ಮಾಡಿದ್ದಾರೆ. 'ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವ ಸೂಚನೆ ಲಭಿಸಿದ್ದರಿಂದ ಅವರು ಈ ಸಂದೇಶ ಹಾಕಿರುವ ಸಾಧ್ಯತೆಯಿದೆ' ಎಂದು ಕೆಲವರು ವಿಶ್ಲೇಷಣೆ ಮಾಡಿದ್ದಾರೆ.

ಮಧ್ಯಪ್ರದೇಶ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ. ಶರ್ಮ, 'ಒಬ್ಬರು ಇನ್ನೊಬ್ಬರಿಗೆ ಶುಭಾಶಯ ಹೇಳುವಾಗ ರಾಮ್ ರಾಮ್ ಎನ್ನುತ್ತೇವೆ. ರಾಮನ ಹೆಸರಿನೊಂದಿಗೆ ದಿನಚರಿ ಆರಂಭಿಸುವುದು ನಮ್ಮ ಸಂಸ್ಕೃತಿ' ಎಂದರು.

ಛತ್ತೀಸಗಢ: ಇಂದು ಸಭೆ

ರಾಯಪುರ (ಪಿಟಿಐ): ಛತ್ತೀಸಗಢದಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆಗೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಭಾನುವಾರ ನಡೆಯಲಿದೆ. ಕೇಂದ್ರದ ಮೂವರು ವೀಕ್ಷಕರು ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಸಭೆಯ ಬಳಿಕ ಹೊಸ ಮುಖ್ಯಮಂತ್ರಿಯ ಹೆಸರು ಘೋಷಣೆಯಾಗುವ ನಿರೀಕ್ಷೆಯಿದೆ.

'ಶಾಸಕಾಂಗ ಪಕ್ಷದ ಸಭೆ ಭಾನುವಾರ ನಡೆಯಲಿದ್ದು, ಮೂವರು ವೀಕ್ಷಕರಾದ ಅರ್ಜುನ್ ಮುಂಡಾ, ಸರ್ವಾನಂದ ಸೋನೊವಾಲ್ ಹಾಗೂ ದುಶ್ಯಂತ್ ಕುಮಾರ್ ಗೌತಮ್ ಅವರು ಪಾಲ್ಗೊಳ್ಳಲಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವ್ ಶನಿವಾರ ಹೇಳಿದರು.

ಲೋಕಸಭೆ: ಲಿಖಿತ ಉತ್ತರದ ಉತ್ತರದಾಯಿತ್ವ ಯಾರದು?

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ನೀಡಿದ್ದ ಲಿಖಿತ ಉತ್ತರದಲ್ಲಿ ವಿದೇಶಾಂಗ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಹೆಸರು ಉಲ್ಲೇಖವಾಗಿದ್ದು ಈಗ ವಿವಾದಕ್ಕೆ ಆಸ್ಪದವಾಗಿದೆ.

ಇದರ ಹಿಂದೆಯೇ ಈ 'ತಾಂತ್ರಿಕ ದೋಷ'ವನ್ನು ಸರಿಪಡಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಶನಿವಾರ ಸ್ಪಷ್ಟನೆ ನೀಡಿದ್ದಾರೆ.

ಇದಕ್ಕೂ ಮುನ್ನ ವಿದೇಶಾಂಗ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಅವರು, 'ಈ ಲಿಖಿತ ಉತ್ತರಕ್ಕೆ ನಾನು ಅನುಮೋದನೆ ನೀಡಿರಲಿಲ್ಲ. ಕಡತಕ್ಕೆ ಸಹಿ ಹಾಕಿಲ್ಲ' ಎಂದು ಹೇಳಿದ್ದರು.

ಲಿಖಿತ ಉತ್ತರವನ್ನು ಲೋಕಸಭೆ, ವಿದೇಶಾಂಗ ಸಚಿವಾಲಯದ ವೆಬ್‌ಸೈಟ್‌ನಲ್ಲೂ ಪ್ರಕಟಿಸಿದ್ದು, ನಿಮ್ಮ ಹೆಸರೇ ಇದೆ ಎಂದು ಗಮನಸೆಳೆದಾಗ ಲೇಖಿ ಅವರು, 'ತನಿಖೆಯಿಂದ ಆರೋಪಿ ಯಾರು ಎಂದು ತಿಳಿಯಲಿದೆ' ಎಂದರು. 'ಹಮಾಸ್ ಅನ್ನು ಉಗ್ರರ ಸಂಘಟನೆ ಎಂದು ಘೋಷಿಸಬೇಕು' ಎಂಬ ಕಾಂಗ್ರೆಸ್ ಸಂಸದ ಕುಂಬಕುಡಿ ಸುಧಾಕರನ್ ಪ್ರಶ್ನೆಗೆ ನೀಡಿದ್ದ ಉತ್ತರ ಅದಾಗಿತ್ತು.

ಮೀನಾಕ್ಷಿ ಲೇಖಿ, ವಿ.ಮುರಳೀಧರನ್ ಇಬ್ಬರೂ ವಿದೇಶಾಂಗ ಖಾತೆಯ ರಾಜ್ಯ ಸಚಿವರು. ಲೋಕಸಭೆಯಲ್ಲಿ ಪ್ರಶ್ನೆ ಸಂಖ್ಯೆ 980ಕ್ಕೆ ಡಿ.8ರಂದು ನೀಡಿದ್ದ ಲಿಖಿತ ಉತ್ತರಕ್ಕೆ ಸಚಿವ ವಿ.ಮುರಳೀಧರನ್ ಹೆಸರು ಸೇರಿಸುವ ಕುರಿತು ತಾಂತ್ರಿಕ ತಿದ್ದುಪಡಿ ಅಗತ್ಯವಿದೆ ಎಂದು ಸಚಿವಾಲಯ ವಕ್ತಾರ ಬಾಗ್ಚಿ ಅವರು ತಿಳಿಸಿದ್ದಾರೆ.

ಲೇಖಿ ಹೇಳಿಕೆಗೆ 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿದ್ದ ಶಿವಸೇನೆ (ಉದ್ಧವ್ ಠಾಕ್ರೆ ಬಣ) ರಾಜ್ಯಸಭೆ ಸದಸ್ಯೆ ಪ್ರಿಯಾಂಕಾ ಚತುರ್ವೇದಿ, 'ಇದು, ನಕಲು ಮಾಡಿರುವ ಉತ್ತರ ಎಂದು ಲೇಖಿ ಪ್ರತಿಪಾದಿಸುತ್ತಿದ್ದಾರೆಯೆ? ಹಾಗಿದ್ದರೆ, ಇದು ಗಂಭೀರವಾದ ಹಕ್ಕುಚ್ಯುತಿ. ವಿದೇಶಾಂಗ ಸಚಿವಾಲಯ ಸ್ಪಷ್ಟನೆ ನೀಡಲಿ' ಎಂದಿದ್ದರು. ಇನ್ನೊಂದೆಡೆ, ಲೇಖಿ ಅವರ ಪೋಸ್ಟ್‌ಗೆ, ಕಾಂಗ್ರೆಸ್‌ನ ನಾಯಕ ಅಮಿತಾಬ್ ದುಬೆ, 'ನಿಮ್ಮ ಪರವಾಗಿ ಯಾರು ಲಾಗಿನ್ ಮಾಡಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

ಅಕ್ಬರುದ್ದೀನ್ ನೇಮಕ: ಬಿಜೆಪಿ ವಿರೋಧ

ತೆಲಂಗಾಣ: ಪ್ರಮಾಣ ವಚನ ಸ್ವೀಕಾರ ಸಮಾರಂಭ ಬಹಿಷ್ಕರಿಸಿದ ಕಮಲ ಪಡೆ

ಹೈದರಾಬಾದ್ (ಪಿಟಿಐ): ಎಐಎಂಐಎಂ ಶಾಸಕ ಅಕ್ಬರುದ್ದೀನ್ ಒವೈಸಿ ಅವರನ್ನು ತೆಲಂಗಾಣದ ವಿಧಾನಸಭೆಗೆ ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡಿರುವುದನ್ನು ಬಿಜೆಪಿ ವಿರೋಧಿಸಿದೆ.

ತೆಲಂಗಾಣ ವಿಧಾನಸಭೆಗೆ ಹೊಸದಾಗಿ ಆಯ್ಕೆಯಾಗಿರುವ ಶಾಸಕರಿಗೆ ಶನಿವಾರ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಮೊದಲು ಪ್ರಮಾಣ ವಚನ ಸ್ವೀಕರಿಸಿದರು. ನಂತರ ಉಪ ಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಬಹಿಷ್ಕರಿಸಲು ಬಿಜೆಪಿ ತೀರ್ಮಾನಿಸಿತು. ಅಕ್ಬರುದ್ದೀನ್ ಒವೈಸಿ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡುವಲ್ಲಿ ವಿಧಾನಸಭೆಯ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.

ಹಿರಿಯ ಶಾಸಕರು ಬೇರೆ ಇದ್ದರೂ ಅಕ್ಬರುದ್ದೀನ್ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಆರೋಪಿಸಿದರು. 'ಹಿರಿಯ ಶಾಸಕರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡುವ ಸಂಪ್ರದಾಯ ಇದೆ' ಎಂದು ರೆಡ್ಡಿ ತಿಳಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ಗೆ ಇರುವುದು ಬಹಳ ಅಲ್ಪ ಪ್ರಮಾಣದ ಬಹುಮತ. ಸರ್ಕಾರವು ಸಣ್ಣ ಕಾರಣಕ್ಕೂ ಉರುಳುವ ಸಾಧ್ಯತೆ ಇದೆ. ಹೀಗಾಗಿ, ಹೊಂದಾಣಿಕೆಯ ಭಾಗವಾಗಿ ಎಐಎಂಐಎಂ ಶಾಸಕರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡಲಾಗಿದೆ ಎಂದು ಕಿಶನ್ ರೆಡ್ಡಿ ಆರೋಪಿಸಿದರು.

'ಕಾಂಗ್ರೆಸ್ ಪಕ್ಷವು ಅಧಿಕಾರ ಸ್ವೀಕರಿಸಿದ ಮೂರೇ ದಿನಗಳಲ್ಲಿ ತುಷ್ಟೀಕರಣದ ರಾಜಕಾರಣವನ್ನು ಆರಂಭಿಸಿದೆ, ವಿಧಾನಸಭೆಯ ನಿಯಮಗಳನ್ನು ಉಲ್ಲಂಘಿಸಿದೆ. ನಿಯಮ ಉಲ್ಲಂಘನೆಯ ಕಾರಣಕ್ಕೆ ನಾವು ಅಕ್ಬರುದ್ದೀನ್ ಅವರ ನೇಮಕವನ್ನು ವಿರೋಧಿಸುತ್ತಿದ್ದೇವೆ' ಎಂದರು.

ಶಾಸಕಾಂಗ ಪಕ್ಷಕ್ಕೆ ಕೆಸಿಆರ್ ನಾಯಕ: ಬಿಆರ್‌ಎಸ್ ಪಕ್ಷವು ತನ್ನ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಕೆ. ಚಂದ್ರಶೇಖರ ರಾವ್ ಅವರನ್ನು ಆಯ್ಕೆ ಮಾಡಿದೆ. ಹೊಸದಾಗಿ ಆಯ್ಕೆಯಾಗಿರುವ ಬಿಆರ್‌ಎಸ್ ಶಾಸಕರ ಸಭೆಯಲ್ಲಿ ಈ ಆಯ್ಕೆಯನ್ನು ಪ್ರಕಟಿಸಲಾಯಿತು.

ಎರಡು 'ಗ್ಯಾರಂಟಿ' ಯೋಜನೆಗಳಿಗೆ ಚಾಲನೆ

ಹೈದರಾಬಾದ್ (ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರು ಎರಡು 'ಗ್ಯಾರಂಟಿ' ಯೋಜನೆಗಳಾದ 'ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ' ಮತ್ತು 'ಬಡವರಿಗೆ ₹ 10 ಲಕ್ಷ ಆರೋಗ್ಯ ವಿಮೆ'ಗೆ ಶನಿವಾರ ವಿಧಾನಸಭೆ ಆವರಣದಲ್ಲಿ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ರೇವಂತ್, 'ಸೋನಿಯಾ ಗಾಂಧಿ ಅವರು ತೆಲಂಗಾಣ ರಾಜ್ಯವನ್ನು ರಚಿಸುವ 'ಗ್ಯಾರಂಟಿ'ಯನ್ನು ಈಡೇರಿಸಿದ ರೀತಿಯಲ್ಲಿಯೇ, 100 ದಿನಗಳೊಳಗಾಗಿ ಆರೂ 'ಗ್ಯಾರಂಟಿ'ಗಳನ್ನು ಜಾರಿಗೊಳಿಸಿ ಜನರ ಕಲ್ಯಾಣ ಮತ್ತು ಅಭಿವೃದ್ಧಿ ವಿಷಯದಲ್ಲಿ ತೆಲಂಗಾಣ ರಾಜ್ಯವನ್ನು ಪ್ರಖ್ಯಾತವನ್ನಾಗಿ ಮಾಡಲು ಕಾಂಗ್ರೆಸ್ ಸರ್ಕಾರ ಶ್ರಮಿಸುತ್ತದೆ' ಎಂದರು.

ಚುನಾವಣಾ ಪೂರ್ವ ತೆಲಂಗಾಣದ ಜನತೆಗೆ ಆರು 'ಗ್ಯಾರಂಟಿ' ಯೋಜನೆಗಳನ್ನು ಜಾರಿಗೊಳಿಸುವುದಾಗಿ ಕಾಂಗ್ರೆಸ್ ಪಕ್ಷ ಘೋಷಿಸಿತ್ತು. ಇದೀಗ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಜನ್ಮದಿನದಂದೇ (ಡಿಸೆಂಬರ್ 9) ಎರಡು ಯೋಜನೆಗಳಿಗೆ ಚಾಲನೆ ನೀಡಲಾಗಿದೆ.

ರಾಜೀವ್ ಆರೋಗ್ಯ ಸಿರಿ ಯೋಜನೆಯಡಿ ಬಡ ಜನರಿಗೆ ₹ 10 ಲಕ್ಷದವರೆಗೆ ಆರೋಗ್ಯ ಚಿಕಿತ್ಸೆ ನೀಡಲಾಗುತ್ತಿದೆ. ಹಾಗೆಯೇ, 'ಮಹಾಲಕ್ಷ್ಮಿ' ಯೋಜನೆಯಡಿ ರಾಜ್ಯದ ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ.

ಇದೇ ವೇಳೆ ರೇವಂತ್ ಅವರು ಏಸ್ ಬಾಕ್ಸರ್ ನಿಖಾತ್ ಜರೀನ್ ಅವರಿಗೆ ರಾಜ್ಯ ಸರ್ಕಾರದ ವತಿಯಿಂದ ಪ್ರೋತ್ಸಾಹಧನ ರೂಪದಲ್ಲಿ ₹ 2 ಕೋಟಿ ವಿತರಿಸಿದರು.

ಉಪ ಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ, ಇತರೆ ಸಚಿವರು, ವಿಧಾನಸಭೆ ಹಂಗಾಮಿ ಸ್ಪೀಕರ್ ಅಕ್ಬರುದ್ದೀನ್ ಒವೈಸಿ ಹಾಗೂ ಇತರ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ಜನರ ಮನ ಗೆಲ್ಲುವುದು ಮುಖ್ಯ'

ನವದೆಹಲಿ (ಪಿಟಿಐ): 'ಚುನಾವಣೆಯಲ್ಲಿ ಜಯಿಸುವ ಮುನ್ನ ಜನರ ಮನ ಗೆಲ್ಲುವುದು ಮುಖ್ಯ. ಜನರು ಬುದ್ಧಿವಂತರಾಗಿದ್ದು, ಅವರ ತಿಳಿವಳಿಕೆಯನ್ನು ಲಘುವಾಗಿ ಕಾಣುವುದು ಸರಿಯಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಅಂಗವಾಗಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಉದ್ದೇಶಿಸಿ ಶನಿವಾರ ಮಾತನಾಡಿದ ಅವರು, 'ಊಳಿಗಮಾನ್ಯ ಮನಃಸ್ಥಿತಿಯ ಸರ್ಕಾರ ನಮ್ಮದಲ್ಲ. ಮಕ್ಕಳು ಯಾವ ರೀತಿ ತಮ್ಮ ತಂದೆ–ತಾಯಿಯ ಸೇವೆ ಮಾಡುವರೋ, ಅದೇ ರೀತಿ ನಾನು ನಿಮ್ಮ ಸೇವೆ ಮಾಡುತ್ತೇನೆ' ಎಂದರು.

'ಮೋದಿ ಗ್ಯಾರಂಟಿ' ಮೇಲೆ ಜನರು ವಿಶ್ವಾಸವಿಟ್ಟಿದ್ದಾರೆ ಎಂಬುದನ್ನು ಐದು ರಾಜ್ಯಗಳ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಯ ಫಲಿತಾಂಶ ಸ್ಪಷ್ಟಪಡಿಸಿದೆ ಎಂದರು.

'ಸುಳ್ಳು ಘೋಷಣೆಗಳಿಂದ ಏನನ್ನೂ ಸಾಧಿಸಲು ಆಗದು ಎಂಬುದು ಕೆಲವು ರಾಜಕೀಯ ಪಕ್ಷಗಳಿಗೆ ಅರ್ಥವಾಗುತ್ತಿಲ್ಲ. ಜನರ ಸೇವೆ ಮಾಡುವುದರಿಂದ ಚುನಾವಣೆಗಳನ್ನು ಗೆಲ್ಲಬಹುದೇ ಹೊರತು, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರ ಕೈಗೊಂಡು ಚುನಾವಣೆ ಗೆಲ್ಲಲು ಸಾಧ್ಯವಿಲ್ಲ' ಎಂದು ವಿರೋಧ ಪಕ್ಷಗಳ ಕಾಲೆಳೆದರು.



ನವದೆಹಲಿಯಲ್ಲಿ ಶನಿವಾರ ಪಿಟಿಐ ಸುದ್ದಿಸಂಸ್ಥೆಯ ಕೇಂದ್ರ ಕಚೇರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡಿ, ಸಿಬ್ಬಂದಿ ಜೊತೆಗೆ ಚರ್ಚಿಸಿದರು. ಪಿಟಿಐ ಸುದ್ದಿಸಂಸ್ಥೆಯ ಸಿಇಒ ಹಾಗೂ ಪ್ರಧಾನ ಸಂಪಾದಕ ವಿಜಯ್ ಜೋಷಿ ಹಾಗೂ ಇತರ ಸಿಬ್ಬಂದಿ ಪ್ರಧಾನಿಯವರ ಮಾತು ಆಲಿಸಿದರು —ಪಿಟಿಐ ಚಿತ್ರ

ಪಿಟಿಐ ಸುದ್ದಿಮನೆಗೆ ಪ್ರಧಾನಿ ಭೇಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ಸುದ್ದಿಸಂಸ್ಥೆಯ ಇಲ್ಲಿನ ಕೇಂದ್ರ ಕಚೇರಿಗೆ ಶನಿವಾರ ಭೇಟಿ ನೀಡಿದ್ದು, ಸುಮಾರು 1 ಗಂಟೆ ಸಿಬ್ಬಂದಿ ಜೊತೆ ಮಾತುಕತೆ ನಡೆಸಿದರು.

2014ರಲ್ಲಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಸಂಸ್ಥೆಯೊಂದರ ಕಚೇರಿಗೆ ಇದು ಅವರ ಪ್ರಥಮ ಭೇಟಿಯಾಗಿದೆ.

ಪಿಟಿಐ ಸುದ್ದಿಸಂಸ್ಥೆಯು ಇತ್ತೀಚೆಗೆ ಆರಂಭಿಸಿರುವ ವಿಡಿಯೊ ಸುದ್ದಿಸೇವೆಯ ಸೌಲಭ್ಯಗಳನ್ನು ಹತ್ತಿರದಿಂದ ವೀಕ್ಷಿಸಿ ಅದರ ಕಾರ್ಯಶೈಲಿ ವಿವರ ಪಡೆದರು. ವಿವಿಧ ತಂಡಗಳಲ್ಲಿ ಎಲ್ಲ ಸಿಬ್ಬಂದಿ ಜೊತೆಗೂ ಚರ್ಚಿಸಿದರು.

ಸಂಪಾದಕೀಯ ಮತ್ತು ಸಂಪಾದಕೀಯೇತರ ವಿಭಾಗದ ಹಿರಿಯ ಸಿಬ್ಬಂದಿ ಜೊತೆಗೆ ಸಭೆ ನಡೆಸಿ, ಮಾಧ್ಯಮ ಕ್ಷೇತ್ರದ ಸವಾಲುಗಳು ಹಾಗೂ ಅವಕಾಶಗಳನ್ನು ಕುರಿತು ವಿಸ್ತೃತವಾಗಿ ಚರ್ಚೆ ನಡೆಸಿದರು.

ಒಂದು ಕಾಲದಲ್ಲಿ ಸುದ್ದಿಸೇವೆಯ ಪ್ರಮುಖ ಅಂಗವಾಗಿದ್ದ ಟೆಲಿಪ್ರಿಂಟರ್ ಮತ್ತು ಕ್ರೀಡ್ ಮಷೀನ್ ಅನ್ನು ಆಸಕ್ತಿಯಿಂದ ಗಮನಿಸಿದರು. ಪಿಟಿಐ ಕೇಂದ್ರ ಕಚೇರಿಯಲ್ಲಿ ವಿವಿಧ ವಿಭಾಗಗಳಿಗೆ ಭೇಟಿ ನೀಡಿದರು.

ಪಿಟಿಐ ಸುದ್ದಿಸಂಸ್ಥೆಯ ಸಿಇಒ ಮತ್ತು ಪ್ರಧಾನ ಸಂಪಾದಕ ವಿಜಯ್ ಜೋಷಿ ಅವರೊಂದಿಗೆ ಇತ್ತೀಚಿನ ರಾಜಕೀಯ ಬೆಳವಣಿಗೆಗಳು ಮತ್ತು ರಾಜಕೀಯ ಕ್ಷೇತ್ರದ ತಮ್ಮ ಪಯಣ ಕುರಿತು ನೇರ ಚರ್ಚೆ ನಡೆಸಿದರು.

ನಂತರ ಸಂದರ್ಶಕರ ಮಾಹಿತಿ ಪುಸ್ತಕದಲ್ಲಿ, 'ಆಚಾರ್.. ವಿಚಾರ್.. ಅಬ್ ಸಮಾಚಾರ್..' ಎಂಬ ಸಾಲುಗಳಿಂದ ಆರಂಭವಾಗುವ ಕವಿತೆಯನ್ನು ಬರೆದರು.

ಭೇಟಿಯ ನೆನಪಾಗಿ ಮೋದಿಯವರಿಗೆ ಸಿಬ್ಬಂದಿಯು, ಪಿಟಿಐ ಸುದ್ದಿಸಂಸ್ಥೆಯ ಮಹತ್ವದ ಸುದ್ದಿ ಛಾಯಾಚಿತ್ರವೊಂದನ್ನು ನೀಡಲಾಯಿತು. ವಾರಾಣಸಿಯಲ್ಲಿ ನಡೆದಿದ್ದ 2019ರ ಚುನಾವಣೆ ರ‍್ಯಾಲಿಯಲ್ಲಿ ರೋಡ್ ಷೋ ವೇಳೆ ಮೋದಿಯವರು ಜನಸಮೂಹದ ನಡುವೆ ಇರುವ ಚಿತ್ರ ಅದಾಗಿದೆ.

1947ರಲ್ಲಿ ಸ್ಥಾಪನೆಯಾದ ಪಿಟಿಐ ಸುದ್ದಿಸಂಸ್ಥೆಯು 1949ರಲ್ಲಿ ತನ್ನ ಸೇವೆ ಆರಂಭಿಸಿತ್ತು. ವಿವಿಧ ಮಾಧ್ಯಮ ಸಮೂಹ ಸಂಸ್ಥೆಗಳ ಮಾಲೀಕತ್ವವಿರುವ ಸುದ್ದಿಸಂಸ್ಥೆಯು ಭಾರತೀಯ ಸುದ್ದಿ ಸೇವಾ ಕ್ಷೇತ್ರದ ಕೇಂದ್ರ ಸ್ಥಾನದಲ್ಲಿದೆ.

ಹಲವು ಏಳು–ಬೀಳು ಕಂಡ ಮಹುವಾ



ಕೋಲ್ಕತ್ತ (ಪಿಟಿಐ): ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಹಣ ಪಡೆದ ಆರೋಪದ ಅಡಿಯಲ್ಲಿ ಲೋಕಸಭೆಯಿಂದ ಉಚ್ಚಾಟನೆ ಆಗಿರುವ ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರ 14 ವರ್ಷಗಳ ರಾಜಕೀಯ ಜೀವನದಲ್ಲಿ ಏಳು–ಬೀಳುಗಳು ಹಲವು.

ಸದ್ಯಕ್ಕೆ ಅವರ ಸಂಸದೀಯ ಬದುಕಿಗೆ ತಡೆ ಬಿದ್ದಿದೆಯಾದರೂ, ವಿರೋಧ ಪಕ್ಷಗಳು ಅವರಿಗೆ ಸೂಚಿಸಿರುವ ಬೆಂಬಲವು, ದೇಶದ ಇಂದಿನ ರಾಜಕೀಯದ ಮೇಲೆ ಮಹುವಾ ಅವರು ಬೀರಿರುವ ಪ್ರಭಾವವು ಬಹುಕಾಲ ಉಳಿಯುವಂಥದ್ದು ಎಂಬುದನ್ನು ಹೇಳುತ್ತಿದೆ.

ಮಹುವಾ ಜನಿಸಿದ್ದು ಅಸ್ಸಾಂ ರಾಜ್ಯದ ಕಛಡ್ ಜಿಲ್ಲೆಯಲ್ಲಿ. ಅವರು ಆರಂಭಿಕ ಶಿಕ್ಷಣ ಪಡೆದಿದ್ದು ಕೋಲ್ಕತ್ತದಲ್ಲಿ. ನಂತರ ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆದರು. ಜೆಪಿ ಮಾರ್ಗನ್ ಚೇಸ್‌ನಲ್ಲಿ ಇನ್ವೆಸ್ಟ್‌ಮೆಂಟ್ ಬ್ಯಾಂಕರ್ ಆಗಿ ನ್ಯೂಯಾರ್ಕ್ ಮತ್ತು ಲಂಡನ್‌ನಲ್ಲಿ ಕೆಲಸ ಮಾಡಿರುವ ಮಹುವಾ ಅವರು, ರಾಹುಲ್ ಗಾಂಧಿ ಅವರು ಆರಂಭಿಸಿದ 'ಆಮ್ ಆದ್ಮಿ ಕಾ ಸಿಪಾಯಿ' ಕಾರ್ಯಕ್ರಮದಿಂದಾಗಿ ಬದುಕಿನ ಗತಿ ಬದಲಿಸಿಕೊಂಡರು.

ತಮ್ಮ ಉದ್ಯೋಗಕ್ಕೆ ರಾಜೀನಾಮೆ ಸಲ್ಲಿಸಿ, 2009ರಲ್ಲಿ ಕಾಂಗ್ರೆಸ್ಸಿನ ಯುವ ಘಟಕವನ್ನು ಸೇರಿದರು. ಪಶ್ಚಿಮ ಬಂಗಾಳ ಘಟಕದಲ್ಲಿ ಕಾಂಗ್ರೆಸ್ ನಾಯಕ ಸುಬ್ರತ ಮುಖರ್ಜಿ ಜೊತೆ ಕೆಲಸ ಮಾಡಿದರು. 2010ರಲ್ಲಿ ಮಹುವಾ ಮತ್ತು ಮುಖರ್ಜಿ ಅವರು ಟಿಎಂಸಿ ಸೇರಿದರು.

2016ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದರು. ತಮ್ಮ ಭಾಷಣ ಹಾಗೂ ಚರ್ಚಾ ಕೌಶಲದ ಕಾರಣದಿಂದಾಗಿ ರಾಷ್ಟ್ರೀಯ ಮಾಧ್ಯಮಗಳಲ್ಲಿ ಪಕ್ಷವನ್ನು ಪ್ರತಿನಿಧಿಸುವ ಪ್ರಮುಖ ವ್ಯಕ್ತಿಯಾಗಿ ಬೆಳೆದರು. 2019ರಲ್ಲಿ ಕೃಷ್ಣನಗರ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿದು ಜಯ ಸಾಧಿಸಿದರು.

ಮನಸ್ಸಿನಲ್ಲಿ ಇದ್ದುದನ್ನು ನೇರವಾಗಿ ಹೇಳುವ ಮಹುವಾ ಅವರು, ಸಂಘಟನೆಯ ವಿಚಾರದಲ್ಲಿ ಪಕ್ಷದ ಪ್ರಮುಖರ ನಿಲುವಿಗೆ ಭಿನ್ನವಾದ ಮಾತು ಆಡುತ್ತಿದ್ದರು. ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಅವರು ಮಹುವಾ ಬಗ್ಗೆ ಸಾರ್ವಜನಿಕವಾಗಿ ಅಸಮಾಧಾನ ವ್ಯಕ್ತಪಡಿಸಿದ್ದೂ ಇದೆ.

ಕಳೆದ ಎರಡು ವರ್ಷಗಳಲ್ಲಿ ಮಹುವಾ ಅವರ ಹೆಸರು ವಿವಾದಗಳಿಗೆ ಪರ್ಯಾಯ ಪದವಾಗಿತ್ತು. ಪತ್ರಕರ್ತರನ್ನು 'ಎರಡು ಪೈಸೆ ಪತ್ರಕರ್ತರು' ಎಂದು ಹೇಳಿದ ಕಾರಣಕ್ಕೆ ಬಂಗಾಳಿ ಮಾಧ್ಯಮಗಳು ಬಹುಕಾಲ ಅವರನ್ನು ಬಹಿಷ್ಕರಿಸಿದ್ದವು.

ಅನ್ಯರ ಮಾತುಗಳಿಗೆ ಕಿವಿಯಾಗಬೇಕು: ಸಿಜೆಐ

ಮುಂಬೈ (ಪಿಟಿಐ): 'ನಮ್ಮದೇ ಮಾತುಗಳ ಪ್ರತಿಧ್ವನಿಗೆ ಕಿವಿಯಾಗುವ ಬದಲಿಗೆ, ಇನ್ನೊಬ್ಬರ ಮಾತುಗಳನ್ನು ಕೇಳಿಸಿಕೊಳ್ಳುವ ದಿಟ್ಟತನ ಬೆಳೆಸಿಕೊಳ್ಳಬೇಕು' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅಭಿಪ್ರಾಯಪಟ್ಟಿದ್ದಾರೆ.

ಪುಣೆಯಲ್ಲಿರುವ ಸಿಂಬಿಯಾಸಿಸ್ ಇಂಟರ್‌ನ್ಯಾಷನಲ್ (ಡೀಮ್ಡ್) ವಿಶ್ವವಿದ್ಯಾಲಯದ 20ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಬದುಕಿನ ಪ್ರತಿ ಘಟ್ಟದಲ್ಲಿ ಅನ್ಯರ ಮಾತು ಕೇಳಿಸಿಕೊಳ್ಳುವ ಶಕ್ತಿ ಅಗತ್ಯ. ಇದು, ಅನ್ಯರಿಗೆ ಆ ಸಮಯ ಆವರಿಸುವ ಸ್ವಾತಂತ್ರ್ಯ ನೀಡುತ್ತದೆ. ಆದರೆ, ಈಗ ನಾವು ನಮ್ಮ ಮಾತುಗಳನ್ನಷ್ಟೇ ಕೇಳಿಸಿಕೊಳ್ಳುತ್ತಿದ್ದೇವೆ' ಎಂದು ಹೇಳಿದರು.


'ಕೇಳಿಸಿಕೊಳ್ಳುವ ದಿಟ್ಟತನ ತೋರುವುದು ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡದೇ ಇರಬಹುದು. ಆದರೆ, ಅವುಗಳ ಹುಡುಕಾಟದ ಸಾಧ್ಯತೆಗಳನ್ನು ವಿಸ್ತರಿಸುತ್ತದೆ. ಜೊತೆಗೆ ನಮ್ಮದೇ ಧ್ವನಿ ಆಲಿಸುವ ನಿರಂತರತೆಗೆ ಕಡಿವಾಣ ಹಾಕುತ್ತದೆ. ನಮ್ಮ ಸುತ್ತಲಿನ ಜಗತ್ತನ್ನು ಹೊಸತಾಗಿ ಅರ್ಥಮಾಡಿಕೊಳ್ಳಲು ನೆರವಾಗಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ನಮಗೆ ಪಾಠ ಕಲಿಸುವ ಭಿನ್ನ ಮಾರ್ಗವನ್ನು ಬದುಕು ಹೊಂದಿದೆ. ಬದುಕಿನ ಈ ಪಯಣದಲ್ಲಿ ಮಾನವೀಯತೆ, ಧೈರ್ಯ ಮತ್ತು ಸಮಗ್ರತೆ ನಿಮ್ಮ ಸಂಗಾತಿಯಾಗಿರಲಿ. ಜನರನ್ನು ಮಾನವೀಯವಾಗಿ ನೋಡುವುದರಲ್ಲಿಯೇ ಮನುಷ್ಯನ ನಿಜವಾದ ಶಕ್ತಿ ಅಡಗಿದೆ' ಎಂದು ಹೇಳಿದರು.

ಮಣಿಪುರ ಸರ್ಕಾರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಮಣಿಪುರದ ಲೀತು ಗ್ರಾಮದಲ್ಲಿ ಈಚೆಗೆ 13 ಮಂದಿಯನ್ನು ಹತ್ಯೆ ಮಾಡಲಾಗಿದೆ ಎಂಬ ಮಾಧ್ಯಮ ವರದಿಯನ್ನು ಆಧರಿಸಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಾಜ್ಯ ಸರ್ಕಾರ ಮತ್ತು ಡಿಜಿಪಿಗೆ ನೋಟಿಸ್ ಜಾರಿ ಮಾಡಿದೆ. ಮಣಿಪುರದಲ್ಲಿ ಭದ್ರತಾ ಪಡೆಗಳು, ಪೊಲೀಸರು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿದ್ದಾರೆ ಎಂದೂ ಹೇಳಿದೆ.

ಬಿಎಸ್‌ಪಿಯಿಂದ ಸಂಸದ ಡ್ಯಾನಿಶ್ ಅಲಿ ಅಮಾನತು



ಡ್ಯಾನಿಶ್ ಅಲಿ

ನವದೆಹಲಿ (ಪಿಟಿಐ): ಪಕ್ಷ ವಿರೋಧಿ ಚಟುವಟಿಕೆಯ ಆರೋಪದ ಮೇರೆಗೆ ಸಂಸದ ಡ್ಯಾನಿಶ್ ಅಲಿ ಅವರನ್ನು ಬಹುಜನ ಸಮಾಜ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಗೊಳಿಸಲಾಗಿದೆ.

ಅಲಿ ಅವರು ಅಮ್ರೋಹಾ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ. ಪಕ್ಷದ ಹಿತಾಸಕ್ತಿಗೆ ಧಕ್ಕೆ ತಂದ ಆರೋಪದ ಮೇಲೆ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಉತ್ತರ ಪ್ರದೇಶದ ಬಿಎಸ್‌ಪಿ ರಾಜ್ಯ ಘಟಕ ತಿಳಿಸಿದೆ.

ಅಮಾನತಿಗೆ ಕಾರಣವೇನು?: ಸಂಸತ್ ಅಧಿವೇಶನದಲ್ಲಿ ಶುಕ್ರವಾರ ತೃಣಮೂಲ ಕಾಂಗ್ರೆಸ್‌ನ ಸಂಸದೆ ಮಹುವಾ ಮೊಯಿತ್ರಾ ಅವರ ಉಚ್ಚಾಟನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಂಡಿಸಿದ ನಿರ್ಣಯ ಖಂಡಿಸಿ ಪ್ರತಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದ್ದರು. ಬಿಎಸ್‌ಪಿಯ ಉಳಿದ ಸದಸ್ಯರು ಸದನದಲ್ಲಿ ಆಸೀನರಾಗಿದ್ದರೂ ಅಲಿ ಮಾತ್ರ ವಿಪಕ್ಷ ಸದಸ್ಯರ ನಡೆಯನ್ನು ಅನುಕರಿಸಿದ್ದರು. ಇದು ಪಕ್ಷದ ವಿರೋಧಿ ನಿಲುವಾಗಿದೆ ಎಂದು ಹೇಳಲಾಗಿದೆ.

ಮಾಯಾವತಿ ನೇತೃತ್ವದ ಬಿಎಸ್‌ಪಿ 'ಇಂಡಿಯಾ' ಮೈತ್ರಿಕೂಟದಿಂದ ಅಂತರ ಕಾಯ್ದುಕೊಂಡಿದೆ. ಆದರೆ ಅಲಿ ಅವರು, ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ನೀತಿಗಳನ್ನು ವಿರೋಧಿಸುವ ವಿಪಕ್ಷ ಸದಸ್ಯರ ಜೊತೆ ಕೈಜೋಡಿಸಿದ್ದಾರೆ ಎಂದು ಹೇಳಲಾಗಿದೆ.


'ಪಕ್ಷದ ನೀತಿ, ಸೈದ್ಧಾಂತಿಕತೆ ಹಾಗೂ ಶಿಸ್ತು ಉಲ್ಲಂಘನೆ ಮಾಡದಂತೆ ಹಲವು ಬಾರಿ ನಿಮಗೆ ಮೌಖಿಕವಾಗಿ ಸೂಚಿಸಲಾಗಿದೆ. ಆದರೆ, ಅದನ್ನು ಉಲ್ಲಂಘಿಸಿದ್ದೀರಿ' ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸತೀಶ್ ಚಂದ್ರ ಮಿಶ್ರಾ ಅವರು, ಅಲಿ ಅವರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

2018ರ ವರೆಗೆ ಅಲಿ ಅವರು ಜೆಡಿಎಸ್‌ನ ಸದಸ್ಯರಾಗಿದ್ದ ಬಗ್ಗೆಯೂ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

'ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಮನವಿ ಮೇರೆಗೆ ಅಮ್ರೋಹಾ ಲೋಕಸಭಾ ಕ್ಷೇತ್ರದಿಂದ ನಿಮಗೆ ಬಿಎಸ್‌ಪಿ ಟಿಕೆಟ್ ನೀಡಲಾಗಿತ್ತು. ಪಕ್ಷದ ನೀತಿ ನಿಯಮ ಮತ್ತು ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಾರೆಂದು ದೇವೇಗೌಡ ಕೂಡ ಭರವಸೆ ನೀಡಿದ್ದರು. ಆದರೆ, ಎಲ್ಲಾ ಭರವಸೆಯನ್ನು ಉಲ್ಲಂಘಿಸಿದ್ದೀರಿ' ಎಂದು ಹೇಳಿದ್ದಾರೆ.

ಬಿಎಸ್‌ಪಿ ಹಿತದೃಷ್ಟಿಯಿಂದ ತಕ್ಷಣಕ್ಕೆ ಜಾರಿಗೆ ಬರುವಂತೆ ಪಕ್ಷದಿಂದ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೊರ್ಬಿ ಸೇತುವೆ ಕುಸಿತ: ಪಿಂಚಣಿ ನೀಡಲು ಸೂಚನೆ



ಅಹಮದಾಬಾದ್ (ಪಿಟಿಐ): ಮೊರ್ಬಿಯ ತೂಗು ಸೇತುವೆ ಕುಸಿತ ಪ್ರಕರಣದಲ್ಲಿ ಮೃತಪಟ್ಟವರ ಸಂಬಂಧಿಕರಿಗೆ ಒಂದು ಬಾರಿ ಪರಿಹಾರ ನೀಡಿದರೆ ಸಾಲದು, ದುರಂತದಲ್ಲಿ ಪುತ್ರರನ್ನು ಕಳೆದುಕೊಂಡ ವೃದ್ಧರಿಗೆ ಜೀವನಪೂರ್ತಿ ಪಿಂಚಣಿ ನೀಡಬೇಕು ಮತ್ತು ವಿಧವೆಯರಿಗೆ ನೌಕರಿ ಅಥವಾ ಸ್ಟೈಪೆಂಡ್ ನೀಡಬೇಕು ಎಂದು ಗುಜರಾತ್ ಹೈಕೋರ್ಟ್ ಸೂಚಿಸಿದೆ.

ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸುನಿತಾ ಅಗರ್ವಾಲ್ ಮತ್ತು ನ್ಯಾಯಮೂರ್ತಿ ಅನಿರುದ್ಧ ಮಾಯಿ ಅವರಿದ್ದ ವಿಭಾಗೀಯ ನ್ಯಾಯಪೀಠವು ಸೇತುವೆಯ ನಿರ್ವಹಣೆ ಜವಾಬ್ದಾರಿ ಹೊಂದಿದ್ದ ಒರೆವಾ ಕಂಪನಿಗೆ ಈ ಸೂಚನೆ ನೀಡಿದೆ.

ದುರಂತದಿಂದಾಗಿ ಅನಾಥರಾದ ಮಕ್ಕಳಿಗೆ ಮತ್ತು ವಿಧವೆಯರಿಗೆ ನೆರವು ನೀಡುತ್ತಿದ್ದೇವೆ ಎಂದು ಕಂಪನಿಯು ನ್ಯಾಯಾಲಯಕ್ಕೆ ತಿಳಿಸಿದೆ. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ಪುತ್ರರನ್ನು ಕಳೆದುಕೊಂಡಿರುವ ವೃದ್ಧರಿಗಾಗಿ ಏನು ಮಾಡಿದ್ದೀರಿ ಎಂದು ಪ್ರಶ್ನಿಸಿದೆ. ಅವರಿಗೆ ಪಿಂಚಣಿ ನೀಡುವಂತೆಯೂ ಸೂಚಿಸಿದೆ.

ದುರಂತದಲ್ಲಿ ಮೃತಪಟ್ಟವರ ಸಂಬಂಧಿಕರ ಸ್ಥಿತಿಗತಿಗಳ ಕುರಿತು ವರದಿ ಸಲ್ಲಿಸುವಂತೆ ಹೈಕೋರ್ಟ್, ಮೊರ್ಬಿ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದೆ.

2022ರ ಅಕ್ಟೋಬರ್ 30ರಂದು ತೂಗುಸೇತುವೆ ಕುಸಿದು 135 ಮಂದಿ ಮೃತಪಟ್ಟಿದ್ದರು.

ಜಪ್ತಿ ಹಣ ₹ 290 ಕೋಟಿಗೆ

ಒಂದನೇ ಪುಟದಿಂದ...

ಪ್ರತಿಕ್ರಿಯೆಗೆ ಪಿಟಿಐ ಸುದ್ದಿಸಂಸ್ಥೆ ಯತ್ನಿಸಿದ್ದರೂ ಸಾಹು ಲಭ್ಯರಾಗಲಿಲ್ಲ.

ಹೇಳಿಕೆ ದಾಖಲು: ನೋಟುಗಳ ಎಣಿಕೆ ಪ್ರಗತಿಯಲ್ಲಿದೆ. ಪ್ರಕರಣ ಸಂಬಂಧ ಕಂಪನಿಯ ವಿವಿಧ ಅಧಿಕಾರಿಗಳು, ಸಂಬಂಧಿಸಿದ ಇತರರ ಹೇಳಿಕೆಗಳನ್ನು ದಾಖಲಿಸುವ ಕಾರ್ಯವು ಆರಂಭವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದುವರೆಗೂ ₹ 250 ಕೋಟಿ ಮೊತ್ತದ ಹಣ ಜಪ್ತಿಯಾಗಿದೆ. ಎಣಿಕೆಯ ಹಿಂದೆಯೇ ನಿರಂತರವಾಗಿ ಒಡಿಶಾದ ಸರ್ಕಾರಿ ಬ್ಯಾಂಕ್‌ನ ಶಾಖೆಗಳಿಗೆ ಜಮೆ ಮಾಡಲಾಗುತ್ತಿದೆ. ಹೆಚ್ಚಿನವು ₹ 500 ಮುಖಬೆಲೆಯ ನೋಟುಗಳು ಎಂದು ತಿಳಿಸಿದ್ದಾರೆ.

₹ 230 ಕೋಟಿ ಹಣವನ್ನು ಬೊಲಾಂಗಿರ್ ಜಿಲ್ಲೆಯಲ್ಲಿರುವ ಕಂಪನಿಯ ಕಚೇರಿಯಲ್ಲಿ 8–10 ಅಲ್ಮೇರಾಗಳಲ್ಲಿ ಜೋಡಿಸಿ ಇಡಲಾಗಿತ್ತು. ಉಳಿದದ್ದನ್ನು ತಿತ್ಲಾಗಢ, ಸಂಬಲ್‌ಪುರ್, ರಾಂಚಿಯಲ್ಲಿ ಜಪ್ತಿ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

ಇಲಾಖೆಯ ಪ್ರಧಾನ ನಿರ್ದೇಶಕ ಸಂಜಯ್ ಬಹಾದ್ದೂರ್ ಭುವನೇಶ್ವರದಲ್ಲಿಯೇ ಮೂರು ದಿನಗಳಿಂದ ವಾಸ್ತವ್ಯ ಹೂಡಿದ್ದಾರೆ. ಆದರೆ, ದಾಳಿ ಮತ್ತು ತನಿಖೆ ಪ್ರಗತಿಯ ವಿವರಗಳನ್ನು ನೀಡಲು ಅವರು ನಿರಾಕರಿಸಿದರು.

'ಇಲಾಖೆಯ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ' ಎಂದಷ್ಟೇ ಹೇಳಿದರು. ಮೂಲಗಳ ಪ್ರಕಾರ, 150 ಅಧಿಕಾರಿಗಳು ದಾಳಿ ಕಾರ್ಯದಲ್ಲಿ ಭಾಗಿಯಾಗಿದ್ದಾರೆ. ಅಲ್ಲದೆ, ವಶಪಡಿಸಿಕೊಂಡಿರುವ ಡಿಜಿಟಲ್ ದಾಖಲೆಗಳ ಪರಿಶೀಲನೆಗಾಗಿ ಇಲಾಖೆಯು ಹೈದರಾಬಾದ್‌ನಿಂದ ಹೆಚ್ಚುವರಿಯಾಗಿ 20 ಅಧಿಕಾರಿಗಳನ್ನು ಕರೆಯಿಸಿಕೊಂಡಿದೆ.

'ಕಾರ್ಯದೊತ್ತಡದ ಪರಿಣಾಮ ಎಣಿಕೆ ಯಂತ್ರಗಳು ಕೈಕೊಡುತ್ತಿವೆ. ಹೀಗಾಗಿ ವಿಳಂಬವಾಗಿದೆ. ತ್ವರಿತವಾಗಿ ಪ್ರಕ್ರಿಯೆ ಪೂರ್ಣಗೊಳಿಸಲು ಇತರೆ ಬ್ಯಾಂಕ್‌ಗಳಿಂದಲೂ ಹಣ ಎಣಿಕೆ ಯಂತ್ರಗಳನ್ನು ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮದ್ಯ ವಿತರಕರು, ಮಾರಾಟಗಾರರು, ಉದ್ಯಮ ಸಂಸ್ಥೆಗಳು ಪಾವತಿಸಿರುವ 'ದಾಖಲೆಯಿಲ್ಲದ' ದೊಡ್ಡ ಮೊತ್ತದ ನಗದನ್ನು ಸಂಗ್ರಹಿಸಲಾಗಿದೆ ಎಂಬ 'ಖಚಿತ ಮಾಹಿತಿ' ಆಧರಿಸಿ ಅಧಿಕಾರಿಗಳು ದಾಳಿ ನಡೆಸಿದ್ದರು.

ಡಿ.6ರಂದು ಬೌದ್ ಡಿಸ್ಟಿಲರಿ ಕಂಪನಿ ಕಚೇರಿ ಮೇಲೆ ದಾಳಿ ನಡೆದಿತ್ತು. ಇದು, ಬಲ್‌ದೇವ್ ಸಾಹು ಇನ್ಫ್ರಾ ಪ್ರೈವೇಟ್ ಲಿಮಿಟೆಡ್‌ನ ಅಧೀನ ಸಂಸ್ಥೆಯಾಗಿದೆ. ಇದು, ಜಾರ್ಖಂಡ್‌ನ ಕಾಂಗ್ರೆಸ್ ಸಂಸದರೊಬ್ಬರಿಗೂ ಸೇರಿದೆ ಎನ್ನಲಾಗಿದೆ. ಸಂಬಲ್‌ಪುರ್, ರೂರ್ಕೆಲಾ, ಬೊಲಾಂಗಿರ್, ಸುಂದರ್‌ಗಢ ಮತ್ತು ಭುವನೇಶ್ವರದ ವಿವಿಧೆಡೆ ದಾಳಿ ನಡೆದಿತ್ತು.

ಕಾಂಗ್ರೆಸ್, ಬಿಜೆಪಿ ನಾಯಕರಿಗೆ ಸೇರಿದ್ದಿರಬಹುದು –ಬಿಜೆಡಿ

ಭುವನೇಶ್ವರ (ಪಿಟಿಐ): ದಾಳಿ ನಡೆಸಿ, ದೊಡ್ಡ ಮೊತ್ತವನ್ನು ಜಪ್ತಿ ಮಾಡಿರುವ ಆದಾಯ ತೆರಿಗೆ ಇಲಾಖೆಯ ಕ್ರಮವನ್ನು ಒಡಿಶಾದ ಆಡಳಿತ ಪಕ್ಷ ಬಿಜೆಡಿ ಸ್ವಾಗತಿಸಿದೆ. ಈ ಕುರಿತು ಹೇಳಿಕೆಯನ್ನು ಬಿಡುಗಡೆ ಮಾಡಿದೆ.

'ಜಾರ್ಖಂಡ್‌ನ ಬಿಜೆಪಿ ನಾಯಕರ ಪ್ರಕಾರ, ಈ ಹಣ ಕಾಂಗ್ರೆಸ್ ನಾಯಕರಿಗೆ ಸೇರಿದ್ದಾಗಿದೆ. ಇನ್ನೊಂದೆಡೆ, ಕಾಂಗ್ರೆಸ್ ನಾಯಕರು ಈ ಮೊತ್ತ ಬಿಜೆಪಿ ನಾಯಕರಿಗೆ ಸೇರಿದ್ದಾಗಿದೆ ಎಂದು ಹೇಳುತ್ತಿದ್ದಾರೆ. ಬಹುಶಃ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರಿಬ್ಬರೂ ತಮ್ಮ ಹಣವನ್ನು ಅಡಗಿಸಿಡುವಂತೆ ಉದ್ಯಮಿಗೆ ನೀಡಿರಬಹುದು' ಎಂದು ಬಿಜೆಡಿ ಪ್ರತಿಕ್ರಿಯಿಸಿದೆ.

ಹಣದ ಮೂಲ ಯಾವುದು –ಪ್ರಧಾನ್

ಐ.ಟಿ ಅಧಿಕಾರಿಗಳು ಜಪ್ತಿ ಮಾಡಿರುವ ಕೋಟ್ಯಂತರ ರೂಪಾಯಿಯ ಮೂಲ ಯಾವುದು ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಪ್ರಶ್ನಿಸಿದ್ದಾರೆ.

'ಒಡಿಶಾ, ಪಶ್ಚಿಮ ಬಂಗಾಳ, ಜಾರ್ಖಂಡ್ ಮೂಲದ ಕೆಲವರಿಗೂ ಈ ಹಣಕ್ಕೂ ಸಂಬಂಧವಿದೆ ಎನ್ನಲಾಗಿದೆ. ಇದರ ಮೂಲ ಯಾವುದು, ಇದರ ಹಿಂದಿನ ಸತ್ಯ ಏನು? ಒಡಿಶಾದ ಕೆಲವರಿಗೂ ಜಪ್ತಿಯಾದ ಹಣಕ್ಕೂ ಸಂಬಂಧವಿದೆಯಾ' ಎಂದು ಎಕ್ಸ್‌ನಲ್ಲಿ ಸಂದೇಶ ಪೋಸ್ಟ್ ಮಾಡಿದ್ದಾರೆ.

ನೈತಿಕತೆ ಮತ್ತು ಪ್ರಾಮಾಣಿಕತೆ ಕುರಿತು ಮಾತನಾಡುವ ಕೆಲ ಪಕ್ಷಗಳು ಮೌನವಾಗಿ ಇರುವುದೇಕೆ ಎಂದು ಪ್ರಶ್ನಿಸಿದ್ದಾರೆ.

ದುಬೈ 'ಸಿಒಪಿ28'ನ ವಾರ್ಷಿಕ ಸಮಾವೇಶ

'ಭಾರತದ ಇಂಗಾಲ ಹೊರಸೂಸುವಿಕೆ ಇಳಿಕೆ'


ಭೂಪೇಂದ್ರ ಯಾದವ್

ದುಬೈ (ಪಿಟಿಐ): ಹವಾಮಾನ ಕ್ರಿಯಾ ಯೋಜನೆಗೆ ಸಮಾನತೆ ಮತ್ತು ಹವಾಮಾನ ನ್ಯಾಯ (ಹವಾಮಾನ ಬದಲಾವಣೆತಡೆಗೆ ನ್ಯಾಯಸಮ್ಮತ ಹೊಣೆಗಾರಿಕೆ) ಆಧಾರವಾಗಿರಬೇಕು ಎಂದು ಭಾರತ ದೃಢವಾಗಿ ನಂಬಿದೆ. ಹವಾಮಾನ ಬದಲಾವಣೆ ವಿರುದ್ಧ ಹೋರಾಡುವ ನಾಯಕತ್ವವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವಹಿಸಿಕೊಂಡಾಗ ಮಾತ್ರ ಇದು ಸಾಧ್ಯವಾಗಲಿದೆ ಎಂದು ಕೇಂದ್ರ ಪರಿಸರ ಖಾತೆ ಸಚಿವ ಭೂಪೇಂದ್ರ ಯಾದವ್ ಅವರು 'ಸಿಒಪಿ28'ರಲ್ಲಿ (ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮಾವೇಶ)' ಶನಿವಾರ ಹೇಳಿದರು.

ದುಬೈನಲ್ಲಿ ನಡೆಯುತ್ತಿರುವ 'ಸಿಒಪಿ28'ನ ವಾರ್ಷಿಕ ಸಮಾವೇಶದ ಉನ್ನತ ಮಟ್ಟದ ಸಭೆಯಲ್ಲಿ ಭಾರತದ ನಿಲುವನ್ನು ತಿಳಿಸಿದ ಯಾದವ್, 'ಹವಾಮಾನ ಬದಲಾವಣೆ ತಡೆ ನಿಟ್ಟಿನಲ್ಲಿ ಭಾರತದ ಸಾಧನೆಗಳನ್ನು ವಿವರಿಸಿದರು. 2005ರಿಂದ 2019ರ ನಡುವಿನ ಅವಧಿಯಲ್ಲಿ ಭಾರತ ತನ್ನ ಇಂಗಾಲ ಹೊರಸೂಸುವಿಕೆಯ ತೀವ್ರತೆಯನ್ನು ಶೇ 33ಕ್ಕೆ ಇಳಿಸಿದೆ. ತಾನು ಹಾಕಿಕೊಂಡಿದ್ದ ಗುರಿಯನ್ನು ಕೇವಲ 11 ವರ್ಷಗಳಲ್ಲಿಯೇ ಸಾಧಿಸಿದೆ' ಎಂದರು.

'ವಿಸ್ತೃತ ಹವಾಮಾನ ಕ್ರಿಯಾ-ಯೋಜನೆಯನ್ನು ನಿರ್ಧರಿಸುವುದಕ್ಕಾಗಿ ಅರ್ಥಪೂರ್ಣ, ಉಪಯುಕ್ತ ಸಲಹೆಗಳನ್ನು ನೀಡಲು ಭಾರತವು 'ಗ್ಲೋಬಲ್ ಸ್ಟಾಕ್‌ಟೇಕ್ (ಜಿಎಸ್‌ಟಿ)'ಅನ್ನು ಎದುರು ನೋಡುತ್ತಿದೆ' ಎಂದರು.

ಜಿಎಸ್‌ಟಿ ಎಂಬುದು ಹವಾಮಾನ ಬದಲಾವಣೆಗೆ ಸಂಬಂಧಿಸಿದ ಪ್ಯಾರಿಸ್ ಒಪ್ಪಂದದ ಗುರಿಗಳನ್ನು ಸಾಧಿಸಲು ಮತ್ತು ಜಾಗತಿಕ ತಾಪಮಾನವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸುವ ವಿಶ್ವ ಸಮುದಾಯದ ಸಾಮೂಹಿಕ ಪ್ರಯತ್ನದ ಎರಡು ವರ್ಷಗಳ ನಡುವಿನ ವಿಶ್ಲೇಷಣೆಯಾಗಿದೆ

ಪ್ರಸ್ತುತ ನಡೆಯುತ್ತಿರುವ ಹವಾಮಾನದ ಕುರಿತ ಚರ್ಚೆಗಳನ್ನು 'ಸಿಒಪಿ28 ಕ್ರಿಯಾಯೋಜನೆ' ಎಂದು ಸಚಿವ ಯಾದವ್ ಬಣ್ಣಿಸಿದರು. ಸಿಒಪಿ28ರ ಉದ್ದೇಶಗಳು ಸಮಾವೇಶದ ಮೊದಲ ದಿನದಿಂದಲೇ ಸ್ಪಷ್ಟವಾಗುತ್ತಾ ಬಂದಿದೆ ಎಂದೂ ಪ್ರಶಂಸಿಸಿದರು.

ಒಂದೇ ತಕ್ಕಡಿಗೆ ಹಾಕಬೇಡಿ: ಚೀನಾ ಮತ್ತು ಅಮೆರಿಕದಂತಹ ಅಧಿಕ ಇಂಗಾಲ ಹೊರಸೂಸುವ ದೇಶಗಳೊಂದಿಗೆ, ತಲಾವಾರು ಕಡಿಮೆ ಇಂಗಾಲ ಹೊರಸೂಸುವಿಕೆ ಹೊಂದಿರುವ ಭಾರತವನ್ನು ಒಂದೇ ತಕ್ಕಡಿಗೆ ಹಾಕುವುದು ಸರಿಯಾದ ಕ್ರಮವಲ್ಲ ಎಂದು ಯೂರೋಪ್ ಸಂಸತ್‌ನ ಪ್ರಮುಖ ರಾಜಕೀಯ ಮುಖಂಡರು ಶನಿವಾರ ಅಭಿಪ್ರಾಯ ಪಟ್ಟಿದ್ದಾರೆ.

ಜರ್ಮನಿಯ ರಾಜಕೀಯ ಮುಖಂಡ, ಯೂರೋಪ್ ಸಂಸತ್ ಸದಸ್ಯ ಪೀಟರ್ ಲೀಸ್, 'ಭಾರತದ ತಲಾವಾರು ಇಂಗಾಲ ಹೊರಸೂಸುವಿಕೆ ಪ್ರಮಾಣ ಕಡಿಮೆ ಇದೆ. ಆದರೂ, ಹವಾಮಾನ ಬದಲಾವಣೆ ಕುರಿತ ಚರ್ಚೆಗಳಲ್ಲಿ ಚೀನಾ ಮತ್ತು ಅಮೆರಿಕದಂಥ ದೇಶಗಳೊಂದಿಗೆ ಭಾರತವನ್ನು ಹೋಲಿಕೆ ಮಾಡುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ಹವಾಮಾನ ರಕ್ಷಣೆ: ಭಾರತಕ್ಕೆ 7ನೇ ಸ್ಥಾನ

ದುಬೈ (ಪಿಟಿಐ): ಹವಾಮಾನ ಸಂರಕ್ಷಣಾ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ ಭಾರತ 7ನೇ ಸ್ಥಾನಕ್ಕೇರಿದೆ ಎಂದು 'ಸಿಒಪಿ28' ಸಮಾವೇಶದಲ್ಲಿ ಬಿಡುಗಡೆ ಮಾಡಲಾದ ವರದಿಯಲ್ಲಿ ಹೇಳಲಾಗಿದೆ. ಉತ್ತಮ ಕಾರ್ಯಕ್ಷಮತೆ ಹೊಂದಿರುವ ಭಾರತ, ಕಳೆದ ವರ್ಷ 8ನೇ ಸ್ಥಾನದಲ್ಲಿತ್ತು.

ಐರೋಪ್ಯ ಒಕ್ಕೂಟ ಮತ್ತು ಇತರ 63 ದೇಶಗಳಿಗೆ ಹೋಲಿಸಿದರೆ ಹವಾಮಾನ ಸಂರಕ್ಷಣೆಯಲ್ಲಿ ಭಾರತವು ಉತ್ತಮ ಅಂಕಗಳನ್ನು ಪಡೆದಿದೆ. ಆದರೆ ಹವಾಮಾನ ನೀತಿ ಮತ್ತು ನವೀಕರಿಸಬಹುದಾದ ಶಕ್ತಿಯ ಉತ್ಪಾದನೆಯಲ್ಲಿ ಹಿಂದಿನ ವರ್ಷದಂತೆ ಮಾಧ್ಯಮ ಕ್ರಮಾಂಕದಲ್ಲಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅತಿ ಹೆಚ್ಚು ಜನಸಂಖ್ಯೆ ಹೊಂದಿದ ರಾಷ್ಟ್ರವಾಗಿದ್ದರೂ, ಭಾರತದ ತಲಾವಾರು ಇಂಗಾಲ ಹೊರಸೂಸುವಿಕೆ ಪ್ರಮಾಣ ಕಡಿಮೆ ಇದೆ.

ತಲಾವಾರು ಹಸಿರುಮನೆ ಅನಿಲ ಹೊರಸೂಸುವಿಕೆ ವಿಭಾಗದಲ್ಲಿ ಭಾರತವು ನಿಗದಿತ 2 ಡಿಗ್ರಿ ಸೆಲ್ಸಿಯಸ್‌ನ ಗುರಿಯನ್ನು ಸಾಧಿಸುವ ಹಾದಿಯಲ್ಲಿದೆ. ನವೀಕರಿಸಬಹುದಾದ ಇಂಧನದ ವಿಭಾಗದಲ್ಲಿ ಭಾರತವು ಧನಾತ್ಮಕ ಲಕ್ಷಣಗಳನ್ನು ತೋರಿಸಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜಿಡಿಪಿ ಬೆಳವಣಿಗೆ ಹೆಚ್ಚಳ; ಅಮೆರಿಕದ ಬಾಂಡ್ ಗಳಿಕೆ ಪ್ರಮಾಣ ಇಳಿಕೆ

ಎಫ್‌ಪಿಐ: ₹10,874 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು ಭಾರತದ ಷೇರುಪೇಟೆಗಳಲ್ಲಿ ಮತ್ತೆ ಹೂಡಿಕೆ ಮಾಡಲು ಆರಂಭಿಸಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಡಿಸೆಂಬರ್ 8ರವರೆಗೆ ನಡೆದಿರುವ ವಹಿವಾಟಿನಲ್ಲಿ ₹10,874 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಪ್ರೈಮರಿ ಮಾರುಕಟ್ಟೆಯಲ್ಲಿ (ಐಪಿಒ, ಡೈರೆಕ್ಟ್ ಲಿಸ್ಟಿಂಗ್...ಇತ್ಯಾದಿ) ಆಗಿರುವ ಹೂಡಿಕೆಯನ್ನೂ ಸೇರಿಸಿದರೆ ಒಟ್ಟು ಹೂಡಿಕೆಯು ₹26,605 ಕೋಟಿಯಷ್ಟು ಆಗುತ್ತದೆ.


ಭಾರತದಲ್ಲಿ ವಿದೇಶಿ ಹೂಡಿಕೆದಾರರು ಮತ್ತೆ ಬಂಡವಾಳ ತೊಡಗಿಸಲು ಹಲವು ಅಂಶಗಳು ಪ್ರಭಾವ ಬೀರುತ್ತಿವೆ. 2024ರ ಸಾರ್ವತ್ರಿಕ ಚುನಾವಣೆಯ ಬಳಿಕ ದೇಶದಲ್ಲಿ ರಾಜಕೀಯ ಸ್ಥಿರತೆ ಮೂಡುವ ಸೂಚನೆ ದೊರೆತಿದೆ. ದೇಶದ ಆರ್ಥಿಕ ಬೆಳವಣಿಗೆ ಉತ್ತಮವಾಗಿದೆ. ಹಣದುಬ್ಬರ ಇಳಿಕೆ ಕಾಣುತ್ತಿದೆ. ಅಮೆರಿಕದ ಬಾಂಡ್ ಗಳಿಕೆ ಪ್ರಮಾಣ ತಗ್ಗಿದೆ. ಈ ಅಂಶಗಳು ಭಾರತಕ್ಕೆ ಅನುಕೂಲಕರವಾಗಿ ಪರಿಣಮಿಸಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ವಿದೇಶಿ ಹೂಡಿಕೆದಾರರು ಬ್ಯಾಂಕಿಂಗ್ ಷೇರುಗಳನ್ನು ಹೆಚ್ಚಾಗಿ ಖರೀದಿಸಲು ಆರಂಭಿಸಿದ್ದಾರೆ. ಐ.ಟಿ., ದೂರಸಂಪರ್ಕ ಮತ್ತು ಆಟೊಮೊಬೈಲ್ ಷೇರುಗಳನ್ನೂ ಖರೀದಿಸುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 2,344 ಅಂಶಗಳಷ್ಟು ಏರಿಕೆ ಕಂಡಿದ್ದು, 69,825 ಅಂಶಗಳಿಗೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 701 ಅಂಶ ಹೆಚ್ಚಾಗಿ 20,969 ಅಂಶಗಳಿಗೆ ತಲುಪಿದೆ.

ಪಿಟಿಐನಲ್ಲಿ ಇರುವ ಮಾಹಿತಿಯ ಪ್ರಕಾರ, ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಸೋಮವಾರದಿಂದ ಶುಕ್ರವಾರದ ಅವಧಿಯಲ್ಲಿ ಬ್ಯಾರಲ್‌ಗೆ 3.13 ಡಾಲರ್ ಇಳಿಕೆ ಕಂಡಿದ್ದು, 75.25 ಡಾಲರ್‌ಗೆ ತಲುಪಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆ (ಕೋಟಿಗಳಲ್ಲಿ)



'ಮೊಲಾಸಿಸ್–ಬಿ, ಸಿ ಬಳಸಿದ ಎಥೆನಾಲ್ ದರ ಹೆಚ್ಚಿಸಿ'

ನವದೆಹಲಿ (ಪಿಟಿಐ): ಮೊಲಾಸಿಸ್–ಬಿ (ಕಾಕಂಬಿ) ಮತ್ತು ಮೊಲಾಸಿಸ್–ಸಿ ಬಳಸಿ ಉತ್ಪಾದಿಸಿದ ಎಥೆನಾಲ್ ಬೆಲೆಯನ್ನು ಹೆಚ್ಚಿಸುವಂತೆ ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಘವು (ಐಎಸ್‌ಎಂಎ) ಸರ್ಕಾರಕ್ಕೆ ಬೇಡಿಕೆ ಇಟ್ಟಿದೆ.

ಎಥೆನಾಲ್ ಉತ್ಪಾದನೆಗೆ ಕಬ್ಬಿನ ಹಾಲು ಮತ್ತು ಸಕ್ಕರೆ ಪಾಕ ಬಳಸದಂತೆ ನಿಷೇಧ ಹೇರಲಾಗಿದೆ. ಇದರಿಂದಾಗಿ ಆಗುವ ನಷ್ಟವನ್ನು ಭರಿಸಲು ಆಗುವಂತೆ ಈ ಬೇಡಿಕೆ ಇಟ್ಟಿರುವುದಾಗಿ ಹೇಳಿವೆ.

ಕೇಂದ್ರ ಸರ್ಕಾರವು 2023–24ನೇ ಪೂರೈಕೆ ವರ್ಷಕ್ಕೆ (ನವೆಂಬರ್–ಅಕ್ಟೋಬರ್) ಎಥೆನಾಲ್ ತಯಾರಿಸಲು ಸಕ್ಕರೆ ಪಾಕ ಮತ್ತು ಕಬ್ಬಿನ ಹಾಲು ಬಳುಸುವುದನ್ನು ನಿಷೇಧಿ ಸರ್ಕಾರ ಡಿ.7ರಂದು ಆದೇಶ ಹೊರಡಿಸಿದೆ. ದೇಶದಲ್ಲಿ ಸಕ್ಕರೆ ಲಭ್ಯತೆ ಸುಧಾರಿಸುವುದು ಮತ್ತು ಬೆಲೆ ಏರಿಕೆ ನಿಯಂತ್ರಿಸುವುದು ಇದರ ಉದ್ದೇಶವಾಗಿದೆ.

ಈ ನಿರ್ಧಾರದಿಂದ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯವು ಗಣನೀಯವಾಗಿ ತಗ್ಗಲಿದೆ. ಕಾರ್ಖಾನೆಗಳಿಗಷ್ಟೇ ಅಲ್ಲದೆ ರೈತರಿಗೂ ನಷ್ಟ ಆಗಲಿದೆ. ರೈತರಿಗೆ ಕಬ್ಬು ಬಾಕಿ ಪಾವತಿಯೂ ವಿಳಂಬ ಆಗಲಿದೆ. ಹೀಗಾಗಿ ಸರ್ಕಾರವು ದರ ಹೆಚ್ಚಳವನ್ನು ಪರಿಗಣಿಸಬೇಕು. ಕಬ್ಬು ಬೆಳೆಗಾರರ ಹಣಕಾಸಿನ ಅಗತ್ಯಗಳನ್ನು ಈಡೇರಿಸಲು ಸಕ್ಕರೆ ಕಾರ್ಖಾನೆಗಳಿಗೆ ಬೇಕಿರುವಷ್ಟು ಹಣ ಪೂರೈಕೆ ಆಗುವಂತೆ ನೋಡಿಕೊಳ್ಳಬೇಕು ಎಂದು ಒಕ್ಕೂಟವು ಪ್ರಕಟಣೆಯಲ್ಲಿ ತಿಳಿಸಿದೆ.

ಮೊಲಾಸಿಸ್–ಸಿ ಬಳಸಿ ಉತ್ಪಾದಿಸುವ ಎಥೆನಾಲ್ ಬೆಲೆಯನ್ನು ಲೀಟರಿಗೆ ₹49.41 ಮತ್ತು ಮೊಲಾಸಿಸ್–ಬಿ ಬಳಸಿ ಉತ್ಪಾದಿಸುವ ಎಥೆನಾಲ್ ಬೆಲೆ ಲೀಟರಿಗೆ ₹60.73ರಷ್ಟನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದೆ.

ಸಕ್ಕರೆ ಉತ್ಪಾದನೆ

3.3 ಕೋಟಿ ಟನ್
2023–24ಕ್ಕೆ ಅಂದಾಜು

3.73 ಕೋಟಿ ಟನ್
2022–23ರಲ್ಲಿ

ತಗ್ಗಲಿದೆ ಕಚೇರಿ ಸ್ಥಳದ ಗುತ್ತಿಗೆ

2023ರ ಕ್ರೆಡಾಯ್–ಸಿಆರ್‌ಇ–ಮ್ಯಾಟ್ರಿಕ್ ಜಂಟಿ ವರದಿ

ನವದೆಹಲಿ (ಪಿಟಿಐ): ಬೆಂಗಳೂರನ್ನೂ ಒಳಗೊಂಡು ಪ್ರಮುಖ ಆರು ನಗರಗಳಲ್ಲಿ ಕಚೇರಿ ಸ್ಥಳವನ್ನು ಗುತ್ತಿಗೆಯ ಆಧಾರದಲ್ಲಿ ನೀಡುವುದು 2023ನೇ ಕ್ಯಾಲೆಂಡರ್ ವರ್ಷದಲ್ಲಿ ಶೇ 18–22 ಆಗುವ ಅಂದಾಜು ಮಾಡಲಾಗಿದೆ ಎಂದು ವರದಿಯೊಂದು ಹೇಳಿದೆ.

ಕಚೇರಿ ಸ್ಥಳಕ್ಕೆ ಇರುವ ಬೇಡಿಕೆಯ ಕುರಿತು ಕ್ರೆಡಾಯ್ ಮತ್ತು ದತ್ತಾಂಶ ವಿಶ್ಲೇಷಕ ಕಂಪನಿ ಸಿಆರ್‌ಇ–ಮ್ಯಾಟ್ರಿಕ್ ಜಂಟಿ ವರದಿ ಬಿಡುಗಡೆ ಮಾಡಿವೆ. ಅದರಂತೆ, ಎ–ಶ್ರೇಣಿಯ ಪ್ರಿಮಿಯಂ ಕಚೇರಿ ಸ್ಥಳದ ಗುತ್ತಿಗೆ ನೀಡುವುದು 2023ನೇ ಕ್ಯಾಲೆಂಡರ್ ವರ್ಷದಲ್ಲಿ 5.5 ಕೋಟಿಯಿಂದ 5.7 ಕೋಟಿ ಚದರ ಅಡಿಯಷ್ಟು ಇರುವ ಅಂದಾಜು ಮಾಡಲಾಗಿದೆ.

2022ನೇ ಕ್ಯಾಲೆಂಡರ್ ವರ್ಷದಲ್ಲಿ 7 ಕೋಟಿ ಚದರ ಅಡಿಯಷ್ಟು ಇತ್ತು. ಬೆಂಗಳೂರು, ದೆಹಲಿ–ಎನ್‌ಸಿಆರ್, ಮುಂಬೈ ಮೆಟ್ರೊಪಾಲಿಟನ್ ರೀಜನ್, ಪುಣೆ, ಚೆನ್ನೈ ಮತ್ತು ಹೈದರಾಬಾದ್ ನಗರಗಳ ಸಂಬಂಧಿಸಿದ ಮಾಹಿತಿಗಳನ್ನು ಈ ವರದಿ ಒಳಗೊಂಡಿದೆ.

ಕಂಪನಿಗಳು ವಹಿವಾಟು ವಿಸ್ತರಣೆಯ ನಿರ್ಧಾರ ತೆಗೆದುಕೊಳ್ಳುವುದನ್ನು ತಡ ಮಾಡುತ್ತಿವೆ. ಇದಲ್ಲದೆ, ಕಳೆದ ವರ್ಷ ಗರಿಷ್ಠ ಮಟ್ಟದ ಬೇಡಿಕೆ ಇತ್ತು. ಈ ಕಾರಣದಿಂದಲೂ ಕಚೇರಿ ಸ್ಥಳಾವಕಾಶದ ಗುತ್ತಿಗೆ ನೀಡುವ ಪ್ರಮಾಣದಲ್ಲಿ ಇಳಿಕೆ ಕಂಡುಬರಲಿದೆ ಎಂದು ವರದಿ ತಿಳಿಸಿದೆ.

ಈ ಆರು ನಗರಗಳಲ್ಲಿ 2023ರ ಜನವರಿ–ಸೆಪ್ಟೆಂಬರ್ ಅವಧಿಯಲ್ಲಿ ಕಚೇರಿ ಸ್ಥಳದ ಗುತ್ತಿಗೆ ಚಟುವಟಿಕೆಯು 4.18 ಕೋಟಿ ಚದರ ಅಡಿಗಳಷ್ಟು ಆಗಿದೆ. ಕಚೇರಿ ಸ್ಥಳದ ಒಟ್ಟು ಬೇಡಿಕೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನಯೇತರ, ಬಿಎಫ್‌ಎಸ್‌ಐ ಮತ್ತು ಕೊ–ವರ್ಕಿಂಗ್ ವಲಯಗಳ ಪಾಲು ಶೇ 66ಕ್ಕೂ ಹೆಚ್ಚಿಗೆ ಇದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1600)
ಸೋಯಾ (ರಿಫೈನ್ಡ್)	₹915 (915)
ಸೂರ್ಯಕಾಂತಿ (ರಿಫೈನ್ಡ್)	₹925 (925)
ಪಾಮೋಲಿನ್	₹828 (832)

ಎನ್‌.ಆರ್‌.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್–4	₹148.50
ಆರ್‌ಎಸ್‌ಎಸ್–5	₹144.50
ಗುಡ್ ಲಾಟ್	₹127.50

ಮಯೂರ, ಸುಧಾ ಓದಿರಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	590

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12600	13000	-	177.15 ಸೆಂಟ್ಸ್
ಎಸಿ	6750	7100	-	
ಆರ್‌ಪಿ	10200	10000	-	ಲಂಡನ್-
ಆರ್‌ಸಿ	6095	6000	-	2569 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹565
12 ಮೊಟ್ಟೆಗೆ	₹75

ಮೈಸೂರು

100 ಮೊಟ್ಟೆಗೆ	₹567

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹205-456
ದ್ವಿತಳಿ (ಬಿ.ವಿ)
₹228-633

'ಚಿಟ್ ಫಂಡ್: ನಿಯಮ ಪಾಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಟ್ ಸಂಸ್ಥೆಗಳು ಗ್ರಾಹಕರಿಂದ ಗಳಿಸುವ ಲಾಭಕ್ಕೆ ಸೇವಾ ತೆರಿಗೆ ಪಾವತಿಸಲೇಬೇಕು. ಗ್ರಾಹಕರಿಂದ ಪಡೆದ ತೆರಿಗೆಯನ್ನು ಸರ್ಕಾರಕ್ಕೆ ಕಟ್ಟದಿದ್ದರೆ ಶಿಕ್ಷಾರ್ಹ ಅಪರಾಧವಾಗುತ್ತದೆ' ಎಂದು ತೆರಿಗೆ ಸಲಹೆಗಾರ ಅನಿಲ್ ಭಾರದ್ವಾಜ್ ಅವರು ಹೇಳಿದರು.

ಕರ್ನಾಟಕ ರಾಜ್ಯ ಚಿಟ್‌ಫಂಡ್ಸ್ ಒಕ್ಕೂಟವು ಬೆಂಗಳೂರಿನ ಯಶವಂತಪುರದಲ್ಲಿ ಶನಿವಾರ ಆಯೋಜಿಸಿದ್ದ ಜಿಎಸ್‌ಟಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ವ್ಯವಹಾರಗಳಲ್ಲಿ ನೀತಿ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ' ಎಂದು ಚಿಟ್ ಫಂಡ್ ಸಂಸ್ಥೆಗಳಿಗೆ ಸಲಹೆ ನೀಡಿದರು.

ಕಾರ್ಯಾಗಾರವನ್ನು ಸಂಘದ ಅಧ್ಯಕ್ಷ ವಿಜಯಕುಮಾರ್ ಉದ್ಘಾಟಿಸಿದರು. ನಿಕಟಪೂರ್ವ ಅಧ್ಯಕ್ಷ ಬಸವಲಿಂಗಪ್ಪ, ಮಾಜಿ ಅಧ್ಯಕ್ಷರಾದ ಕೃಷ್ಣಮೂರ್ತಿ, ಕಾರ್ಯದರ್ಶಿ ಸುರೇಶ್, ಉಪಾಧ್ಯಕ್ಷ ಮನೋಹರ್ ಗೋವಿಂದನ್ ಕುಟ್ಟಿ, ಕಾರ್ಯದರ್ಶಿ ಹರೀಶ್, ನಿರ್ದೇಶಕರಾದ ಕಾವ್ಯಾಂಕ, ನರೇಂದ್ರ ಉಪಸ್ಥಿತರಿದ್ದರು.

ಮುಂಬೈ ಧಾರಣೆ

ಶೇಂಗಾ

09-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1610)
ಒಂದು ವಾರದ ಡೆಲಿವರಿ	1625 (1605)
ಸೋಯಾ ಕಚ್ಚಾ	890 (890)
ಪಾಮ್ ವಾರದ ಡೆಲಿವರಿ	826 (830)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 61,575 (62,150)
ಬೆಳ್ಳಿ ಕೆ.ಜಿ 71,700 (73,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿಟೊ ಬಳಸಿ ನಿರ್ಣಯ ತಡೆದ ಅಮೆರಿಕ

ವಿಶ್ವಸಂಸ್ಥೆ (ಪಿಟಿಐ): ಇಸ್ರೇಲ್– ಹಮಾಸ್ ನಡುವೆ ಮಾನವೀಯ ನೆಲೆಯಲ್ಲಿ ಕದನವಿರಾಮ ಘೋಷಣೆ ಹಾಗೂ ಹಮಾಸ್‌ನಿಂದ ಒತ್ತೆಯಾಳುಗಳ ಬೇಷರತ್ ಬಿಡುಗಡೆಗೆ ಆಗ್ರಹಪಡಿಸುವ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮತಕ್ಕೆ ಹಾಕಲಾಗಿದ್ದ ನಿರ್ಣಯದ ಅನುಮೋದನೆಯನ್ನು ಅಮೆರಿಕ ತನ್ನ 'ವಿಟೊ' ಪರಮಾಧಿಕಾರ ಬಳಸಿ ತಡೆಹಿಡಿದಿದೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಯುಎಇ ಈ ನಿರ್ಣಯ ಮಂಡಿಸಿತ್ತು. 15 ಸದಸ್ಯರ ಭದ್ರತಾ ಮಂಡಳಿಯಲ್ಲಿ 13 ರಾಷ್ಟ್ರಗಳು ಬೆಂಬಲಿಸಿದ್ದವು. ಇಂಗ್ಲೆಂಡ್ ಮತದಾನದಿಂದ ದೂರ ಉಳಿದಿತ್ತು.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಅವರು ವಿಶ್ವಸಂಸ್ಥೆ ನಿಯಮಗಳ ವಿಧಿ 99 ಬಳಸಿ, ನಿರ್ಣಯ ಬೆಂಬಲಿಸಲು ಮನವಿ ಮಾಡಿದ್ದರು. ನಿರ್ಣಯ ಆ ವಲಯದಲ್ಲಿ ಶಾಂತಿ ಸ್ಥಾಪನೆಗೆ ಸಹಕಾರಿ ಎಂದು ಹೇಳಿದ್ದರು.

ಮತದಾನಕ್ಕೂ ಮೊದಲು 'ತಕ್ಷಣ ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಿ, ಜನರನ್ನು ರಕ್ಷಿಸುವ ಹಾಗೂ ಜೀವನಾಧಾರ ಅಗತ್ಯ ವಸ್ತುಗಳ ಪೂರೈಕೆಗೆ ಇರುವ ಯಾವುದೇ ಯತ್ನವನ್ನು ಕೈಬಿಡಬಾರದು ಎಂದು ಕೋರಿದ್ದರು.

ಮತದಾನದ ವೇಳೆ ಮಾತನಾಡಿದ ಅಮೆರಿಕದ ರಾಯಭಾರಿ, ವಿಶೇಷ ರಾಜಕೀಯ ವ್ಯವಹಾರಗಳ ಪ್ರತಿನಿಧಿ ರಾಬರ್ಟ್ ವುಡ್ ಅವರು, 'ಈ ಕರಡು ನಿರ್ಣಯ ಸಮಗ್ರವಾಗಿಲ್ಲ. ಇಸ್ರೇಲ್‌ನ ಮೇಲೆ ಅ. 7ರಂದು ಹಮಾಸ್ ನಡೆಸಿದ್ದ ದಾಳಿಯನ್ನು ಖಂಡಿಸುವ ಉಲ್ಲೇಖ ಈ ನಿರ್ಣಯದಲ್ಲಿ ಏಕೆ ಮಾಡಿಲ್ಲ' ಎಂದು ಪ್ರಶ್ನಿಸಿದರು.

'ತ್ವರಿತ ಪ್ರಕ್ರಿಯೆ ಹಾಗೂ ಸಂಬಂಧಿಸಿದವರ ಜೊತೆಗೆ ಚರ್ಚಿಸದ ಕೊರತೆ ನಡುವೆಯೂ ಈ ಕರಡು ನಿರ್ಣಯ ಕುರಿತು ಅಮೆರಿಕ ಸದ್ಭಾವನೆಯನ್ನೇ ಹೊಂದಿದೆ. ಆದರೆ, ರಚನಾತ್ಮಕ ನಿರ್ಣಯದ ಅಗತ್ಯವಿದೆ ಎಂಬುದು ನಮ್ಮ ನಿಲುವು. ಇದು, ಅಲ್ಲಿ ಅ 7ರಿಂದ ನಾವು ಕೈಗೊಂಡಿರುವ ಜೀವರಕ್ಷಿಸುವ ರಾಜತಾಂತ್ರಿಕತೆಗೆ ಬಲ ನೀಡಬೇಕು. ಮಾನವೀಯ ನೆರವು ನೀಡುವ ಅವಕಾಶ ಹೆಚ್ಚಿಸಬೇಕು. ಒತ್ತೆಯಾಳುಗಳ ಬಿಡುಗಡೆಗೆ ಪ್ರೋತ್ಸಾಹಕವಾಗಿರಬೇಕು' ಎಂದು ಪ್ರತಿಪಾದಿಸಿದರು.

ದುರದೃಷ್ಟವಶಾತ್ ನಮ್ಮ ಎಲ್ಲ ಶಿಫಾರಸುಗಳನ್ನು ನಿರ್ಣಯದಲ್ಲಿ ಕಡೆಗಣಿಸಲಾಗಿದೆ. ಇದರ ಪರಿಣಾಮವಾಗಿ ಸಮತೋಲನವಿಲ್ಲದ ಈ ಕರಡು ನಿರ್ಣಯವು ವಾಸ್ತವದಿಂದ ವಿಮುಖವಾಗಿದೆ. ಉದ್ದೇಶವನ್ನು ಈಡೇರಿಸುವುದಿಲ್ಲ. ಇದೇ ಕಾರಣದಿಂದ ನಾವು ಈ ನಿರ್ಣಯವನ್ನು ಬೆಂಬಲಿಸುತ್ತಿಲ್ಲ ಎಂದು ಕಾರಣವನ್ನು ವಿವರಿಸಿದರು.

ನಿರ್ಣಯ ಮಂಡಿಸಿದ್ದ ಯುಎಇ ರಾಯಭಾರಿ ಮೊಹಮ್ಮದ್ ಅಬುಸಾಹೇಬ್, ಈ ಬಗ್ಗೆ ನಿರಾಶೆ ವ್ಯಕ್ತಪಡಿಸಿದರು. ಇಂಗ್ಲೆಂಡ್‌ನ ಶಾಶ್ವತ ಪ್ರತಿನಿಧಿ ಬಾರ್ಬರಾ ವುಡ್‌ವರ್ಡ್ ಅವರು, 'ಹಮಾಸ್‌ನ ದೌರ್ಜನ್ಯ ಖಂಡಿಸದ ಕಾರಣಕ್ಕೆ ನಾವು ಈ ನಿರ್ಣಯವನ್ನು ಬೆಂಬಲಿಸಲಿಲ್ಲ' ಎಂದು ಪ್ರತಿಕ್ರಿಯಿಸಿದರು.


ಉಗ್ರ ಸಂಘಟನೆ ಜತೆ ರಾಜಕೀಯ ಭಿನ್ನಮತೀಯರ ನಂಟು: ಪಾಕ್

ಇಸ್ಲಾಮಾಬಾದ್ (ಪಿಟಿಐ): 'ಬ್ರಿಟನ್ ಹಾಗೂ ಇತರ ದೇಶಗಳಲ್ಲಿ ಆಶ್ರಯ ಪಡೆದ ಕೆಲವು ರಾಜಕೀಯ ಭಿನ್ನಮತೀಯರು ದೇಶದಲ್ಲಿರುವ ಉಗ್ರ ಸಂಘಟನೆಗಳೊಂದಿಗೆ ನಂಟು ಹೊಂದಿದ್ದಾರೆ' ಎಂದು ಪಾಕಿಸ್ತಾನ ಒಪ್ಪಿಕೊಂಡಿದೆ.

ಪ್ರಸ್ತುತ ಬ್ರಿಟನ್‌ನಲ್ಲಿ ನೆಲೆಸಿರುವ ಮಿರ್ಜಾ ಶಾಹ್‌ಜಾದ್ ಅವರ ಮೇಲೆ ಆ್ಯಸಿಡ್ ದಾಳಿ ಸಂಭವಿಸಿದ ಕುರಿತು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿದೇಶಾಂಗ ಕಚೇರಿಯ ವಕ್ತಾರೆ ಮುಮ್ತಾಜ್ ಜಹ್ರಾ ಬಲೋಚ್ ಅವರನ್ನು ಪ್ರಶ್ನಿಸಿದಾಗ ಈ ರೀತಿ ಪ್ರತಿಕ್ರಿಯಿಸಿದರು. ಮಿರ್ಜಾ ಅವರು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಮಾಜಿ ಆಪ್ತ ಸಹಾಯಕ.

'ಆ್ಯಸಿಡ್ ದಾಳಿಯಲ್ಲಿ ಪಾಕಿಸ್ತಾನ ಅಥವಾ ಪಾಕಿಸ್ತಾನಿ ಸಂಸ್ಥೆಗಳ ಕೈವಾಡವಿಲ್ಲ. ವಿದೇಶದಲ್ಲಿ ನೆಲೆಸಿರುವ ನಮ್ಮ ದೇಶದ ಪ್ರಜೆಗಳನ್ನು ಗುರಿಯಾಗಿಸುವುದು ನಮ್ಮ ನೀತಿಯಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಮೋದಿ ಕಠಿಣ ನೀತಿಗೆ ಪುಟಿನ್ ಪ್ರಶಂಸೆ



ಮಾಸ್ಕೊ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಯಾವುದೇ ಒತ್ತಡಕ್ಕೆ ಮಣಿಯದೆ ರಾಷ್ಟ್ರದ ಹಿತಾಸಕ್ತಿಗಾಗಿ ಕಠಿಣ ನಿಲುವು ತೆಗೆದುಕೊಳ್ಳುತ್ತಾರೆ. ಅವರು ಅನುಸರಿಸುತ್ತಿರುವ ನೀತಿಯು ಪ್ರಗತಿಪರವಾಗಿ ಅಭಿವೃದ್ಧಿ ಹೊಂದುತ್ತಿರುವ ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧಗಳ 'ಪ್ರಮುಖ ಖಾತರಿ'ಯಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪ್ರಶಂಸಿಸಿದ್ದಾರೆ.

ಭಾರತ– ದಕ್ಷಿಣ ಆಫ್ರಿಕಾ ಮೊದಲ ಟಿ20 ಪಂದ್ಯ ಇಂದು

ಯುವ ಆಟಗಾರರಿಗೆ ಸತ್ವಪರೀಕ್ಷೆ

ಡರ್ಬನ್ (ಪಿಟಿಐ): ಯುವ ಪ್ರತಿಭಾನ್ವಿತ ಆಟಗಾರರಿಂದ ಕೂಡಿರುವ ಭಾರತ, ಭಾನುವಾರ ಆರಂಭವಾಗುವ ಮೂರು ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಪ್ರಬಲ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ತಂಡದ ಕಿರಿಯ ಆಟಗಾರರಿಗೆ ಈ ಪ್ರವಾಸ ಸಾಮರ್ಥ್ಯ ಪ್ರದರ್ಶನಕ್ಕೆ ಅವಕಾಶವಾಗಿದೆ.

ಗಾಯಾಳಾಗಿರುವ ನಾಯಕ ಹಾರ್ದಿಕ್ ಪಾಂಡ್ಯ, ಅವರು ಐಪಿಎಲ್‌ವರೆಗೆ ಅಲಭ್ಯರಾಗಿದ್ದಾರೆ. ಪ್ರಮುಖ ಬೌಲರ್ ಜಸ್‌ಪ್ರೀತ್ ಬೂಮ್ರಾ ವಿರಾಮ ಪಡೆದಿದ್ದಾರೆ. ಜೂನ್‌ನಲ್ಲಿ ಟಿ20 ವಿಶ್ವಕಪ್ ಇರುವಂತೆಯೇ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಚುಟುಕು ಕ್ರಿಕೆಟ್ ಭವಿಷ್ಯ ಅನಿಶ್ಚಿತವಾಗಿದೆ. ಆದರೂ ಈ ತಂಡದ ಪ್ರದರ್ಶನವೇ ಅಂತಿಮ ಎಂದು ಹೇಳುವಂತಿಲ್ಲ. ಐಪಿಎಲ್ ನಂತರವೇ, ಆ ವೇಳೆ ಫಾರ್ಮ್, ಫಿಟ್ನೆಸ್ ಸಂಬಂಧಿಸಿ ವಿಶ್ವಕಪ್‌ಗೆ ತಂಡದ ಆಯ್ಕೆಯ ಬಗ್ಗೆ ಸ್ಪಷ್ಟ ಚಿತ್ರಣ ಸಿಗಬಹುದು.

ಸೂರ್ಯಕುಮಾರ್ ಯಾದವ್ ನೇತೃತ್ವದ ತಂಡ ಇತ್ತೀಚೆಗೆ ತವರಿನಲ್ಲಿ ವಿಶ್ವಕಪ್ ಬೆನ್ನಿಗೇ ನಡೆದ ಟಿ–20 ಸರಣಿಯಲ್ಲಿ ಆಸ್ಟ್ರೇಲಿಯಾ


ಸೂರ್ಯಕುಮಾರ್ ಯಾದವ್

ತಂಡವನ್ನು 4–1 ರಿಂದ ಸೋಲಿಸಿತ್ತು. ಆದರೆ ಆಸ್ಟ್ರೇಲಿಯಾ ತಂಡ ಪೂರ್ಣ ಪ್ರಮಾಣದಲ್ಲಿ ಆಡಿರಲಿಲ್ಲ. ಬಹುತೇಕ ಆಟಗಾರರು ವಿಶ್ವಕಪ್ ನಂತರ ತವರಿಗೆ ಮರಳಿದ್ದರು.

ದಕ್ಷಿಣ ಆಫ್ರಿಕಾ ಸರಣಿಯ ನಂತರ ಭಾರತ ತಂಡವು ಜನವರಿ ಮಧ್ಯದಲ್ಲಿ ಅಫ್ಗಾನಿಸ್ತಾನ ವಿರುದ್ಧ ಆಡಲಿದೆ.

ದಕ್ಷಿಣ ಆಫ್ರಿಕಾ ತಂಡವು ಕಗಿಸೊ ರಬಾಡ ಅವರಿಗೆ ವಿಶ್ರಾಂತಿ ನೀಡಿದೆ. ಆ್ಯನ್ರಿಚ್ ನೋರ್ಕಿಯೆ ಮತ್ತು ಲುಂಗಿ ಗಿಡಿ ಗಾಯಾಳಾಗಿದ್ದಾರೆ. ಆದರೂ ತವರಿನಲ್ಲಿ ಆತಿಥೇಯರ ಬೌಲಿಂಗ್ ಪಡೆ ಉತ್ತಮವಾಗಿದೆ.

ಭಾರತ ಟಿ20 ತಂಡದಲ್ಲಿರುವ ಶ್ರೇಯಸ್ ಅಯ್ಯರ್, ಮುಕೇಶ್ ಕುಮಾರ್ ಮತ್ತು ಇಶಾನ್ ಕಿಶನ್ ಅವರು ಏಕದಿನ ತಂಡದಲ್ಲೂ ಭಾಗಿಯಾಗಲಿದ್ದಾರೆ. ಭಾರತದ ಬೌಲರ್‌ಗಳಿಗೆ ಈ ಪ್ರವಾಸ ಸತ್ವಪರೀಕ್ಷೆ. ಕ್ವಿಂಟನ್ ಡಿಕಾಕ್ ತಂಡದಲ್ಲಿ ಇಲ್ಲದಿದ್ದರೂ ಹೆನ್ರಿಚ್ ಕ್ಲಾಸೆನ್, ಡೇವಿಡ್ ಮಿಲ್ಲರ್, ನಾಯಕ ಏಡನ್ ಮರ್ಕರಂ, ಬಿರುಸಿನ ಹೊಡೆತಗಳ ಯುವ ಆಟಗಾರ ಟ್ರಿಸ್ಟಾನ್ ಸ್ಟಬ್ಸ್ ಮೊದಲಾದ ಬ್ಯಾಟರ್‌ಗಳು ಆತಿಥೇಯ ತಂಡದಲ್ಲಿದ್ದಾರೆ.

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ಋತುರಾಜ್ ಗಾಯಕವಾಡ್, ತಿಲಕ್ ವರ್ಮಾ, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್ (ವಿಕೆಟ್ ಕೀಪರ್), ಜಿತೇಶ್ ಶರ್ಮಾ (ವಿಕೆಟ್ ಕೀಪರ್), ರವೀಂದ್ರ ಜಡೇಜ (ಉಪನಾಯಕ), ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್ ಮತ್ತು ದೀಪಕ್ ಚಾಹರ್.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಒಟ್ನೆಯಿಲ್ ಬಾರ್ತ್‌ಮ್ಯಾನ್, ಮ್ಯಾಥ್ಯೂ ಬ್ರೀಟ್ಜ್ಕೆ, ನ್ಯಾಂಡ್ರೆ ಬರ್ಗರ್, ಜೆರಾಲ್ಡ್ ಕೋಜಿ, ಡೊನವಾನ್ ಫೆರೀರಾ, ರೀಝಾ ಹೆಂಡ್ರಿಕ್ಸ್, ಮಾರ್ಕೊ ಜಾನ್ಸನ್, ಹೆನ್ರಿಚ್ ಕ್ಲಾಸೆನ್, ಕೇಶವ ಮಹಾರಾಜ್, ಡೇವಿಡ್ ಮಿಲ್ಲರ್, ಆಂಡಿಲೆ ಪಿಶುವಾಯೊ, ತಬ್ರೇಜ್ ಶಂಸಿ, ಟ್ರಿಸ್ಟಾನ್ ಸ್ಟಬ್ಸ್ ಮತ್ತು ಲಿಝಾರ್ಡ್ ವಿಲಿಯಮ್ಸ್.

ಪಂದ್ಯ ಆರಂಭ: ರಾತ್ರಿ 7 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್,

ದಾಖಲೆ ಬರೆದ ಸಮನ್ವಿ, ಶರಣ್

ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್: ಮಾನ್ಯ ,ನೈಶಾಗೆ ಎರಡು ಚಿನ್ನ

ಪ್ರಜಾವಾಣಿ ವಾರ್ತೆ

ಉಡುಪಿ: ಮೊದಲ ದಿನ ತಲಾ ಎರಡು ಚಿನ್ನ ಗೆದ್ದು ಸಂಭ್ರಮಿಸಿದ್ದ ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ (ಬಿಎಸಿ) ಸಮನ್ವಿ ಇ.ಎಸ್ ಮತ್ತು ಪಿಎಂ ಈಜುಕೇಂದ್ರದ ಶರಣ್ ಎಸ್. ಅವರು ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನ 3ನೇ ದಿನ ದಾಖಲೆಯೊಂದಿಗೆ ಮಿಂಚಿದರು.

ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಶ್ರಯದಲ್ಲಿ ಇಲ್ಲಿನ ಅಜ್ಜರಕಾಡು ಈಜುಕೊಳದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಗುಂಪು–1, ಮಹಿಳೆಯರ 200 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಸಮನ್ವಿ ಮತ್ತು ಗುಂಪು–2, ಬಾಲಕರ 800 ಮೀ ಫ್ರೀಸ್ಟೈಲ್‌ನಲ್ಲಿ ಶರಣ್ ಕ್ರಮವಾಗಿ 2019 ಮತ್ತು 2014ರ ದಾಖಲೆಗಳನ್ನು ಶನಿವಾರ ಮುರಿದರು.

3ನೇ ದಿನದ ಫಲಿತಾಂಶಗಳು: ಬಾಲಕರು ಗುಂಪು–1: 50 ಮೀ ಬಟರ್‌ಫ್ಲೈ: ಚಿಂತನ್ ಬಿ.ಶೆಟ್ಟಿ (ಮಂಗಳಾ ಸ್ವಿಮ್ಮಿಂಗ್ ಕ್ಲಬ್)–1, ಸ್ವರೂಪ್ ಧನುಚೆ (ಬಿಎಸಿ)–2, ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ಡಾಲ್ಫಿನ್ ಅಕ್ವಾಟಿಕ್ಸ್)–3. ಕಾಲ: 26.29; ಬಾಲಕಿಯರು: ನೈಶಾ ಶೆಟ್ಟಿ (ಡಾಲ್ಫಿನ್ ಅಕ್ವಾಟಿಕ್ಸ್)–1, ಇಂಚರ ಫಣೀಂದ್ರನಾಥ್ (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)–2, ಹಿತೈಷಿ ವಿ. (ವಿಜಯನಗರ ಈಜುಕೇಂದ್ರ)–3. ಕಾಲ: 29.86; 100 ಮೀ ಬ್ಯಾಕ್‌ಸ್ಟ್ರೋಕ್: ಮಹಿಳೆಯರು: ನೈಶಾ ಶೆಟ್ಟಿ–1, ಸಿದ್ಧಿ ಜಿ.ಶಾ–2 (ಇಬ್ಬರೂ ಡಾಲ್ಫಿನ್ ಅಕ್ವಾಟಿಕ್ಸ್), ಶ್ರುತಿ ಕೆ.ಆರ್ (ಗ್ಲೋಬಲ್ ಈಜುಕೇಂದ್ರ)–3. ಕಾಲ: 1:08.79; ಬಾಲಕರು: ಕುಶಾಲ್ ಕೆ–1, ಸೂರ್ಯ ಜೆ.ಟಿ.–2 (ಇಬ್ಬರೂ ಬಿಎಸಿ), ರಾಘವ್ ಸ್ವಚ್ಛಂದಂ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3. ಕಾಲ: 59.07; 200 ಮೀ ಬ್ರೆಸ್ಟ್ ಸ್ಟ್ರೋಕ್: ಬಾಲಕರು: ಸೂರ್ಯ ಜೋಯಪ್ಪ–1, ಶ್ರೇಯಸ್ ಮಂಜುನಾಥ್–2 (ಇಬ್ಬರೂ ಬಿಎಸಿ), ಸುಯೋಗ್ ಗೌಡ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3. ಕಾಲ: 2:25.80; ಬಾಲಕಿಯರು: ಸಮನ್ವಿ ಎ.ಎಸ್ (ಬಿಎಸಿ)–1, ಹಿತೈಷಿ ವಿ (ವಿಜಯನಗರ ಈಜುಕೇಂದ್ರ)–2, ಆರಾಧನಾ ಎಸ್. ಗೌಡ (ಡಾಲ್ಫಿನ್ ಅಕ್ವಾಟಿಕ್ಸ್)–3. ಕಾಲ: 2:47.34 (ಕೂಟ ದಾಖಲೆ: ಹಿಂದಿನ ದಾಖಲೆ: ಗುಣ್ ಮಟ್ಟ: 2:47.46, ಬಿಎಸಿ–2019); 800 ಮೀ ಫ್ರೀಸ್ಟೈಲ್: ಬಾಲಕರು: ರೇಣುಕಾಚಾರ್ಯ ಹೊಡಮನಿ–1, ಯಜತ್ ಅಯ್ಯಪ್ಪ–2, ಸಾಹಿಲ್ ದಲಾಲ–3 (ಮೂವರೂ ಬಿಎಸಿ). ಕಾಲ 8:42.43ಸೆ; ಮಹಿಳೆಯರು: ಜನ್ಯಾ ಬಿ.ಎಸ್–1, ಆಸರ ಸುಧೀರ್–2 (ಇಬ್ಬರೂ ಬಿಎಸಿ), ಖುಷಿಕಾ ಎಂ.ವಿ. (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)–3. ಕಾಲ: 9:46.97; 4x50 ಮೀ ಫ್ರೀ ಸ್ಟೈಲ್:ಡಾಲ್ಫಿನ್ ಈಜು ಕೇಂದ್ರ–1, ಬಿಎಸಿ 'ಎ'–2, ಬಿಎಸಿ 'ಬಿ'–3. ಕಾಲ: 1:57.58.


ಸಮನ್ವಿ


ಶರಣ್

ಗುಂಪು–2: 50 ಮೀ ಬಟರ್‌ಫ್ಲೈ: ಬಾಲಕರು: ಅನೀಶ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜುಕೇಂದ್ರ)–1, ದಕ್ಷ್ ಮಟ್ಟ–2, ವಫಿ ಅಬ್ದುಲ್ ಹಕೀಂ–3 (ಇಬ್ಬರೂ ಬಿಎಸಿ). ಕಾಲ: 27.47; ಬಾಲಕಿಯರು: ಚರಿತಾ ಫಣೀಂದ್ರನಾಥ್ (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)–1, ತಿಸ್ಯಾ ಸೊನಾರ್ (ಪಿಎಂ ಈಜು ಕೇಂದ್ರ)–2, ಅಂಜಲಿ ಹೊಸಕೆರೆ (ಬಿಎಸಿ)–3. ಕಾಲ: 29.94; 200 ಮೀ ಬ್ರೆಸ್ಟ್ ಸ್ಟ್ರೋಕ್: ಡ್ಯಾನಿಯಲ್ ಪಾಲ್–1, ಯಶ್ ಎಚ್. ಪಾಲ್–2 (ಇಬ್ಬರೂ ಬಿಎಸಿ), ಸಾಯೀಶ್ ಕಿಣಿ (ಗ್ಲೋಬಲ್ ಈಜುಕೇಂದ್ರ)–3. ಕಾಲ: 2:33.78; ಬಾಲಕಿಯರು: ಹಿಯಾ ಎಂ (ಡಾಲ್ಫಿನ್ ಅಕ್ವಾಟಿಕ್ಸ್)–1, ಗಗನಾ ಸಿ.ಎಂ. (ಗ್ಲೋಬಲ್ ಈಜು ಕೇಂದ್ರ)–2, ಕೌಶಿಕಾ ಆರ್ (ಬಿಎಸಿ)–3. ಕಾಲ: 2:50.90; 100 ಮೀ ಬ್ಯಾಕ್‌ಸ್ಟ್ರೋಕ್: ಬಾಲಕರು: ಅಭಿಮನ್ಯು ನಂಬಿಯಾರ್ (ಡಾಲ್ಫಿನ್ ಅಕ್ವಾಟಿಕ್ಸ್)–1, ಸಮರ್ಥ್ ಗೌಡ ಬಿ.ಎಸ್–2, ಇಶಾನ್ ಆರ್ಯ–3 (ಇಬ್ಬರೂ ಬಿಎಸಿ). ಕಾಲ: 1:03.31; ಬಾಲಕಿಯರು: ತನ್ಯಾ ಎಂ.ಎನ್ (ಬಿಎಸಿ)–1, ವೇದಾ ಖಾನೋಲ್ಕರ್ (ಅಬಾ ಕ್ಲಬ್)–2, ತನ್ಮಯಿ ಧರ್ಮೇಶ್ (ಗ್ಲೋಬಲ್ ಈಜುಕೇಂದ್ರ)–3. ಕಾಲ: 1:08.49; 800 ಮೀ ಫ್ರೀಸ್ಟೈಲ್: ಬಾಲಕರು: ಶರಣ್ ಎಸ್ (ಪಿಎಂಎಸ್‌ಸಿ)–1, ಧ್ರುಪದ್ ರಾಮಕೃಷ್ಣ (ಬಿಎಸಿ)–2, ಅನೀಶ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜು ಕೇಂದ್ರ)–3. ಕಾಲ: 8:47.05 (ಕೂಟ ದಾಖಲೆ: ಹಿಂದಿನ ದಾಖಲೆ: ಬಿಎಸಿಯ ಎಸ್.ಶಿವ: 8:47.15; 2014); ಬಾಲಕಿಯರು: ತನಿಶಾ ವಿನಯ್ (ಬಿಎಸಿ)–1, ಹಿತಶ್ರೀ ಎನ್ (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ಪ್ರತೀಕ್ಷಾ ಎನ್. ಗೌಡ (ಡಿಕೆವಿ ಈಜುಕೇಂದ್ರ)–3. ಕಾಲ: 10:01.59; 4x50 ಮೀ ಫ್ರೀಸ್ಟೈಲ್: ಬಾಲಕಿಯರು: ನೆಟ್ಟಕಲ್ಲಪ್ಪ ಈಜು ಕೇಂದ್ರ–1, ಪಿಎಂ ಈಜುಕೇಂದ್ರ–2, ಬಿಎಸಿ 'ಎ'–3; ಕಾಲ: 2:00.89.

ಗುಂಪು–3: 25 ಮೀ ಫ್ರೀಸ್ಟೈಲ್: ಬಾಲಕರು: ನಿಖಿಲ್ ತೇಜ್ ರೆಡ್ಡಿ (ಬಿಎಸಿ)–1, ರೋನಿತ್ ಅರುಣ್ ಕುಮಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)–2, ಹವಿಶ್ ಆರ್ (ವಿಜಯನಗರ ಈಜು ಕೇಂದ್ರ)–3. ಕಾಲ: 14.00; ಬಾಲಕಿಯರು: ಮಾನ್ಯ ಆರ್.ವಾಧ್ವ (ಪಿಎಂಎಸ್‌ಸಿ)–1, ಹಂಸಿಕಾ ಪಿ.ರೆಡ್ಡಿ (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ಶ್ರೇಯಾ ಸುರೇಶ್ ಪೂಜಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)–3. ಕಾಲ: 14.83; 50 ಮೀ ಬಟರ್‌ಫ್ಲೈ: ಬಾಲಕರು: ರೋನಿತ್ ಅರುಣ್ ಕುಮಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)–1, ವ್ಯಾಸ್ ವಿಜಯ್ (ಡಿಕೆವಿ ಈಜುಕೇಂದ್ರ)–2, ಸರ್ವೇಶ್ ರಾಜ್ (ಬಿಎಸಿ)–3. ಕಾಲ:33.01; ಬಾಲಕಿಯರು: ಮಾನ್ಯ ಆರ್.ವಾಧ್ವ (ಪಿಎಂ ಈಜುಕೇಂದ್ರ)–1, ಶ್ವಿತಿ ದಿವಾಕರ್ ಸುವರ್ಣ (ಡಾಲ್ಫಿನ್ ಅಕ್ವಾಟಿಕ್ಸ್)–2, ರಿಶ್ಮಿಕಾ ಆರ್ (ಬಿಎಸಿ)–3. ಕಾಲ: 33.18; 100 ಮೀ ಬ್ಯಾಕ್‌ಸ್ಟ್ರೋಕ್; ಬಾಲಕರು: ಲೋಹಿತಾಶ್ವ ನಾಗೇಶ್ (ಡಿಕೆವಿ ಈಜುಕೇಂದ್ರ)–1, ನಿಖಿಲ್ ತೇಜ್ ರೆಡ್ಡಿ (ಬಿಎಸಿ)–2, ಹವಿಶ್ ಆರ್. (ವಿಜಯನಗರ ಈಜು ಕೇಂದ್ರ)–3. ಕಾಲ: 1:16.62; ಬಾಲಕಿಯರು: ಸುಮನ್ವಿ ವಿ–1, ಸುಮೇಧಾ ವಿ–2, ಅವ್ವನಿ ಬೆಳ್ಳಿಯಪ್ಪ–3 (ಮೂವರೂ ಡಿಕೆವಿ ಈಜುಕೇಂದ್ರ). ಕಾಲ: 1:15.57; 4x50 ಮೀ ಫ್ರೀಸ್ಟೈಲ್: ಬಾಲಕಿಯರು: ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ–1. ಡಿಕೆವಿ ಈಜು ಕೇಂದ್ರ–2, ಬಿಎಸಿ–3. ಕಾಲ: 2:08.93.

ಕುಸಿದ ಭಾರತ; ಇಂಗ್ಲೆಂಡ್ ಮಹಿಳಾ ತಂಡಕ್ಕೆ ಸರಣಿ

ಮುಂಬೈ (ಪಿಟಿಐ): ಇಂಗ್ಲೆಂಡ್ ಬೌಲರ್‌ಗಳ ಶಿಸ್ತುಬದ್ಧ ದಾಳಿಯೆದುರು ಪರದಾಡಿದ ಭಾರತ ಮಹಿಳಾ ತಂಡ ಟಿ20 ಕ್ರಿಕೆಟ್‌ನಲ್ಲಿ ಮೂರನೇ ಅತಿ ಕಡಿಮೆ ಮೊತ್ತಕ್ಕೆ ಕುಸಿಯಿತು. ಪ್ರವಾಸಿ ತಂಡ, ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಟಿ20 ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡದ ಮೇಲೆ ನಾಲ್ಕು ವಿಕೆಟ್‌ಗಳ ಸುಲಭ ಜಯಪಡೆದು ಒಂದು ಪಂದ್ಯ ಉಳಿದಿರುವಂತೆ ಸರಣಿಯನ್ನು ಕೈವಶ ಮಾಡಿಕೊಂಡಿತು.

ಭಾರತದ ಅನುಭವಿ ಆಟಗಾರ್ತಿಯರು ಪರದಾಡಿದರು. ಶೆಫಾಲಿ ವರ್ಮಾ (0), ಸ್ಮೃತಿ ಮಂದಾನಾ (10), ನಾಯಕಿ ಹರ್ಮನ್‌ಪ್ರೀತ್ ಕೌರ್ (9), ದೀಪ್ತಿ ಶರ್ಮಾ (0) ವಿಫಲರಾಗಿ ಭಾರತ 16.2 ಓವರುಗಳಲ್ಲಿ 80 ರನ್ನಿಗೆ ಕುಸಿಯಿತು. ಇಂಗ್ಲೆಂಡ್ 11.2 ಓವರುಗಳಲ್ಲಿ ಗುರಿ ತಲುಪಿ ಸರಣಿಯಲ್ಲಿ 2–0 ಮುನ್ನಡೆ ಸಂಪಾದಿಸಿತು.

ಮೂರನೇ ಹಾಗೂ ಅಂತಿಮ ಪಂದ್ಯ ಭಾನುವಾರ ನಡೆಯಲಿದೆ.

ರೇಣುಕಾ ಸಿಂಗ್ ಮೊದಲ ಓವರ್‌ನಲ್ಲೇ ನಾಲ್ಕು ವೈಡ್ ಹಾಕಿ ಒಟ್ಟು ಎಂಟು ರನ್ ನೀಡಿದರು. ಮೊದಲ 2 ಓವರ್‌ಗಳಲ್ಲಿ 17 ರನ್‌ಗಳು ಬಂದವು. ರೇಣುಕಾ ನಂತರ ಎರಡು ವಿಕೆಟ್ (ಸೋಫಿಯಾ ಡಂಕ್ಲಿ ಮತ್ತು ಡ್ಯಾನಿ ವ್ಯಾಟ್) ಪಡೆದರೂ, ಅಲೈಸ್ ಕ್ಯಾಪ್ಸಿ (25, 21 ಎಸೆತ) ಮತ್ತು ನಾಟ್ ಶಿವರ್–ಬ್ರಂಟ್ (16, 13ಎಸೆತ) ಅವರು ತಂಡ ಕುಸಿಯದಂತೆ ನೋಡಿಕೊಂಡರು. ಏಳು ಓವರುಗಳಲ್ಲಿ ತಂಡ 50ರ ಗಡಿ ದಾಟಿತು. ಅಂತಿಮ ಏಳು ರನ್‌ಗಳು ಉಳಿದಿರುವಂತೆ ಭಾರತ ಮತ್ತೆ ಎರಡು ವಿಕೆಟ್ ಪಡೆದರೂ ಹೆಚ್ಚಿನ ಪ್ರಯೋಜನವಾಗಲಿಲ್ಲ. ಸೋಫಿ ಎಕ್ಲೆಸ್ಟೋನ್ (9*) ಬೌಂಡರಿಯೊಡನೆ ಗೆಲುವಿಗೆ ನೆರವಾದರು.

ಇದಕ್ಕೆ ಮೊದಲು ಭಾರತ ತಂಡದ ಪರ ಅನುಭವಿ ಜೆಮಿಮಾ ರಾಡ್ರಿಗಸ್ (30 ಎಸೆತಗಳಲ್ಲಿ 33) ಮಾತ್ರ ಹೋರಾಟ ತೋರಿದರು. ಇಂಗ್ಲೆಂಡ್ ಕಡೆ ಚಾರ್ಲಿ ಡೀನ್ (16ಕ್ಕೆ2), ಲಾರೆನ್ ಬೆಲ್ (18ಕ್ಕೆ2), ಸೋಫಿ ಎಕ್ಲೆಸ್ಟೋನ್ (13ಕ್ಕೆ2) ಮತ್ತು ಸಾರಾ ಗ್ಲೆನ್ (13ಕ್ಕೆ2) ಉತ್ತಮ ಬೌಲಿಂಗ್ ಪ್ರದರ್ಶಿಸಿದರು.

ಈ ಹಿಂದೆ ಟಿ20 ಪಂದ್ಯಗಳಲ್ಲಿ ಆಸ್ಟ್ರೇಲಿಯಾ ವಿರುದ್ಧ 62 ರನ್ ಗಳಿಸಿದ್ದೇ ಭಾರತದ ಅತಿ ಕಡಿಮೆ ಮೊತ್ತ. ದಕ್ಷಿಣ ಆಫ್ರಿಕಾ ವಿರುದ್ಧ 2019ರಲ್ಲಿ 70 ರನ್ನಿಗೆ ಆಲೌಟ್ ಆಗಿದ್ದು ಎರಡನೇ ಅತಿ ಕಡಿಮೆ ಮೊತ್ತವಾಗಿತ್ತು.

ಭಾರತ ಮೊದಲ ಪಂದ್ಯವನ್ನು 38 ರನ್‌ಗಳಿಂದ ಸೋತಿತ್ತು.


ಭಾರತ ತಂಡದ ಆಟಗಾರ್ತಿಯ ವಿಕೆಟ್ ಪಡೆದ ಸಂಭ್ರಮದಲ್ಲಿ ಇಂಗ್ಲೆಂಡ್ ತಂಡ. –ಪಿಟಿಐ ಚಿತ್ರ

ಸೋಲಿನ ಸರಪಳಿಯಿಂದ ಹೊರಬರದ ಬುಲ್ಸ್

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯಲ್ಲಿ ಬೆಂಗಳೂರು ಬುಲ್ಸ್ ತಂಡದ ಸೋಲಿನ ಸರಪಳಿ ಮುಂದುವರಿದಿದೆ. ನಾಲ್ಕನೇ ಪಂದ್ಯದಲ್ಲೂ ಸೌರಭ್ ನಂದಲ್ ಬಳಗ ಗೆಲುವಿನ ಖಾತೆ ತೆರೆಯಲು ವಿಫಲವಾಯಿತು.

ಕಂಠೀರವ ಒಳಾಂಗಣ ಕ್ರೀಡಾಂಗಣ ದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬುಲ್ಸ್ ತಂಡವು 32–38 ಅಂತರದಿಂದ ಹರಿಯಾಣ ಸ್ಟೀಲರ್ಸ್ ಎದುರು ಮಂಡಿಯೂರಿತು. ಯುಪಿ ಯೋಧಾಸ್ ವಿರುದ್ಧ ಮೊದಲ ಪಂದ್ಯದಲ್ಲಿ 57–27ರಿಂದ ಹೀನಾಯವಾಗಿ ಸೋತಿದ್ದ ಹರಿಯಾಣ, ಇಲ್ಲಿ ಸಾಂಘಿಕ ಪ್ರದರ್ಶನ ನೀಡಿ ಗೆಲುವನ್ನು ದಕ್ಕಿಸಿಕೊಂಡಿತು.

ಅಹಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಹಾಗೂ ಬೆಂಗಾಲ್ ವಾರಿಯರ್ಸ್ ವಿರುದ್ಧ ಸೋತಿದ್ದ ಬುಲ್ಸ್ ತಂಡ, ಶುಕ್ರವಾರ ತವರಿನಲ್ಲಿ ದಬಾಂಗ್ ಡೆಲ್ಲಿ ಎದುರು 31–38 ರಿಂದ ಪರಾಭವಗೊಂಡಿತ್ತು. ಹ್ಯಾಟ್ರಿಕ್ ಸೋಲಿನ ಬಳಿಕ ತವರಿನಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ಗೆಲುವಿನ ಖಾತೆ ತೆರೆಯಬಹುದೆಂಬ ಬುಲ್ಸ್ ಅಭಿಮಾನಿಗಳ ನಿರೀಕ್ಷೆ ಹುಸಿಯಾಯಿತು.

ಪಂದ್ಯದ ಆರಂಭದಲ್ಲೇ ಭರತ್ ಅಮೋಘ ರೈಡಿಂಗ್ ಮಾಡಿ ಬುಲ್ಸ್ ತಂಡಕ್ಕೆ 5 ಅಂಕ ತಂದುಕೊಟ್ಟರು. ಆದರೆ, ಈ ಮುನ್ನಡೆ ಹೆಚ್ಚು ಹೊತ್ತು ಉಳಿಯಲಿಲ್ಲ. ಪಂದ್ಯದ ಎರಡನೇ ನಿಮಿಷದಲ್ಲೇ ಎದುರಾಳಿ ತಂಡವನ್ನು ಆಲೌಟ್ ಮಾಡುವ ಅವಕಾಶವನ್ನು ಕೈಚೆಲ್ಲಿದ ಆತಿಥೇಯ ತಂಡ, ನಂತರ ಹಿನ್ನಡೆ ಕಾಣುತ್ತ ಹೋಯಿತು.

ವಿರಾಮದ ವೇಳೆಗೆ 13–27ರಿಂದ ಹಿನ್ನಡೆ ಅನುಭವಿಸಿದ್ದ ಬೆಂಗಳೂರು ತಂಡ ಉತ್ತರಾರ್ಧದಲ್ಲಿ ಕೊಂಚ ಪ್ರತಿರೋಧ ತೋರಿತು. ಕೊನೆಯ 10 ನಿಮಿಷದ ವೇಳೆ ಪಂದ್ಯ ರೋಚಕವಾಗಿ ಸಾಗಿದರೂ, ಸ್ಟೀಲರ್ಸ್ ಆಟಗಾರರು ಎಲ್ಲ ವಿಭಾಗಗಳಲ್ಲಿ ಉತ್ತಮ ಆಟ ಪ್ರದರ್ಶಿಸಿ ಗಮನ ಸೆಳೆದರು. ಬುಲ್ಸ್ ತಂಡವು ಎರಡು ಬಾರಿ ಆಲೌಟ್ ಆದರೆ, ಎದುರಾಳಿ ತಂಡದ ಅಂಗಣವನ್ನು ಒಮ್ಮೆ ಖಾಲಿ ಮಾಡಿತು.

ಭರತ್ 14 ಪಾಯಿಂಟ್ಸ್‌ಗಳೊಂದಿಗೆ ಸತತ ಎರಡನೇ ಸೂಪರ್ 10 ಮಾಡಿದರು. ತಂಡವು ರೈಡಿಂಗ್‌ಗೆ ಅವರೊಬ್ಬರನ್ನೇ ಅವಲಂಬಿಸಿದ್ದು ಈ ಪಂದ್ಯದಲ್ಲೂ ಮುಳುವಾಯಿತು. ಅವರಿಗೆ ಉಳಿದ ಆಟಗಾರರಿಂದ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ಹರಿಯಾಣ ತಂಡದ ವಿನಯ್ (8), ಸಿದ್ಧಾರ್ಥ್ ದೇಸಾಯಿ (7) ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಯುಪಿ ಯೋಧಾಸ್‌ಗೆ ಗೆಲುವು: ಮತ್ತೊಂದು ಪಂದ್ಯದಲ್ಲಿ ಯುಪಿ ಯೋಧಾಸ್ ತಂಡವು 48–33 ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು. ಸುರೇಂದರ್ ಗಿಲ್ (14) ಮತ್ತು ಪ್ರದೀಪ್ ನರ್ವಾಲ್ (8) ಯೋಧಾಸ್ ಪರ ಮಿಂಚಿದರು. ಟೈಟನ್ಸ್ ತಂಡದ ನಾಯಕ ಪವನ್ ಸೆಹ್ರಾವತ್ (11) ಅವರಿಗೆ ಉಳಿದ ಆಟಗಾರರಿಂದ ಸಾಥ್ ದೊರೆಯಲಿಲ್ಲ.

ಇಂದಿನ ಪಂದ್ಯಗಳು
ಬೆಂಗಾಲ್ ವಾರಿಯರ್ಸ್– ತಮಿಳು ತಲೈವಾಸ್ (ರಾತ್ರಿ 8) ದಬಾಂಗ್ ಡೆಲ್ಲಿ– ಹರಿಯಾಣ ಸ್ಟೀಲರ್ಸ್ (ರಾತ್ರಿ 9)


ಬೆಂಗಳೂರು ಬುಲ್ಸ್‌ನ ರೈಡರ್ ಸುಶೀಲ್ (ಕೆಂಪು) ಅವರನ್ನು ಹರಿಯಾಣ ಸ್ಟೀಲರ್ಸ್ ತಂಡದ ಆಟಗಾರರು ಹಿಡಿದೆಳೆದರು. –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಹಾಕಿ:ಕೆನಡಾ ಸದೆಬಡಿದ ಭಾರತ

ಕ್ವಾಲಾಲಂಪುರ (ಪಿಟಿಐ): ಆಕ್ರಮಣಕಾರಿ ಆಟ ಪ್ರದರ್ಶಿಸಿದ ಭಾರತ ತಂಡ, ಪುರುಷರ ಜೂನಿಯರ್ ವಿಶ್ವ ಕಪ್ ಹಾಕಿ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಶನಿವಾರ ಕೆನಡಾ ತಂಡವನ್ನು 10–1 ಗೋಲುಗಳಿಂದ ಸದೆಬಡಿಯಿತು. ಈ ಭರ್ಜರಿ ವಿಜಯದೊಡನೆ ಕ್ವಾರ್ಟರ್‌ಫೈನಲ್‌ಗೆ ಸ್ಥಾನ ಕಾದಿರಿಸಿತು

ನ್ಯಾಷನಲ್ ಹಾಕಿ ಸ್ಟೇಡಿಯಮ್‌ನಲ್ಲಿ ನಡೆದ 'ಸಿ' ಗುಂಪಿನ ಈ ಪಂದ್ಯದಲ್ಲಿ ಭಾರತದ ಪರ ಆದಿತ್ಯ ಅರ್ಜುನ್ ಲಾಲ್ಗೆ (8, 43ನೇ ನಿಮಿಷ), ರೋಹಿತ್ (12, 55ನೇ), ಅಮನ್‌ದೀಪ್ ಲಾಕ್ರಾ (23, 52ನೇ ನಿಮಿಷ), ವಿಷ್ಣುಕಾಂತ್ (42ನೇ), ರಾಜಿಂದರ್ (43), ಕುಶ್ವಾಹ ಸೌರಭ್ ಆನಂದ್ (51ನೇ) ಮತ್ತು ಉತ್ತಮ್ ಸಿಂಗ್ (58ನೇ) ಅವರು ಗೋಲು ಗಳಿಸಿದರು.

ಜೂಡ್ ನಿಕೋಲ್ಸನ್ ಕೆನಡಾ ತಂಡದ ಏಕೈಕ ಗೋಲು ಗಳಿಸಿದರು. ವಿರಾಮದ ವೇಳೆಗೆ ವಿಜೇತರು 3–1 ರಿಂದ ಮುಂದಿದ್ದರು. ಭಾರತ ಗುಂಪಿನ ಮೊದಲ ಪಂದ್ಯದಲ್ಲಿ ಕೊರಿಯಾ ವಿರುದ್ಧ ಜಯಗಳಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ ಸ್ಪೇನ್ ಎದುರು ಸೋಲನುಭವಿಸಿತ್ತು.

ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್

ಫೈನಲ್‌ಗೆ ಇಟಲಿಯ ಪೆರುಗಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಇಟಲಿಯ ಸರ್ ಸಿಕೋಮಾ ಪೆರುಗಿಯಾ ತಂಡ ಸೆಮಿಫೈನಲ್‌ನಲ್ಲಿ 3-0 ನೇರ ಸೆಟ್‌ಗಳಿಂದ ಟರ್ಕಿಯ ಹಾಲ್ಕ್‌ಬ್ಯಾಂಕ್ ಸ್ಪೋರ್ ಕುಲುಬು (ಕ್ಲಬ್) ವಿರುದ್ಧ ಜಯಗಳಿಸಿ ವಾಲಿಬಾಲ್ ಪುರುಷರ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡನೇ ಬಾರಿಗೆ ಫೈನಲ್ ಪ್ರವೇಶಿಸಿತು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಇಟಲಿಯ ಕ್ಲಬ್ 25-14, 25-16, 31-29 ರಿಂದ ಟರ್ಕಿಯ ಕ್ಲಬ್ ಮೇಲೆ ಜಯಗಳಿಸಿತು. ಈ ಪಂದ್ಯಾವಳಿಯಲ್ಲಿ ಸತತ ಪ್ರಶಸ್ತಿಗಳನ್ನು ಗೆದ್ದ ಮೂರನೇ ತಂಡವಾಗುವ ಗುರಿಯತ್ತ ಹೆಜ್ಜೆಯಿಟ್ಟಿರುವ ಇಟಲಿಯ ಕ್ಲಬ್ ಇದುವರೆಗೆ ಆಡಿದ ಮೂರು ಪಂದ್ಯಗಳಲ್ಲಿ ಒಂದೂ ಸೆಟ್ ಕಳೆದುಕೊಂಡಿಲ್ಲ.

ಸಿಮೋನ್ ಗಿಯಾನೆಲ್ಲಿ, ಫ್ಲೇವಿಯೊ ರೆಸೆಂಡೆ ಮತ್ತು ಸೆಬಾಸ್ಟಿಯನ್ ಸೋಲ್ ಅವರಂತಹ ಆಟಗಾರರನ್ನು ಹೊಂದಿರುವ ಪೆರುಗಿಯಾ ತಂಡ ಆರಂಭದಿಂದಲೇ ಮುನ್ನಡೆ ಪಡೆಯಿತು.

ಮೊದಲ ಸೆಟ್‌ಅನ್ನು ಕೇವಲ 22 ನಿಮಿಷಗಳಲ್ಲಿ ಪಡೆಯಿತು. ಎರಡನೇ ಸೆಟ್‌ನಲ್ಲಿ ನಿಮಿರ್ ಅಬ್ದೆಲ್-ಅಜೀಜ್ ಮತ್ತು ಎರ್ವಿನ್ ಎನ್ಗಪೆತ್ ಅವರ ಬ್ಯಾಕ್-ಕೋರ್ಟ್ ಸ್ಪೈಕ್‌ಗಳಿಂದ ಇಟಲಿ ಮೇಲುಗೈ ಸಾಧಿಸಿತು.

ಮೂರನೇ ಸೆಟ್ ನ ಆರಂಭದಲ್ಲಿ ಪೆರುಗಿಯಾದ ಆಟದ ಮಟ್ಟ ಸ್ವಲ್ಪ ಕುಸಿಯಿತು. ಇದು ಹಾಲಿ ಚಾಂಪಿಯನ್ ಮೇಲೆ ಒತ್ತಡ ಹೇರಲು ಹಾಲ್ಕ್ ಬ್ಯಾಂಕ್ ಕ್ಲಬ್‌ಗೆ ಅವಕಾಶ ಮಾಡಿಕೊಟ್ಟಿತು. ಟರ್ಕಿಯ ತಂಡವು ನಾಲ್ಕು ಸೆಟ್ ಪಾಯಿಂಟ್ ಗಳನ್ನು ಗಳಿಸಿತು ಆದರೆ ಅವುಗಳನ್ನು ಪರಿವರ್ತಿಸಲು ವಿಫಲವಾಯಿತು. ಹೋರಾಟದ ನಂತರ ಇಟಲಿ ನಿರ್ಣಾಯಕ ಸೆಟ್ ಮತ್ತು ಪಂದ್ಯವನ್ನು ತನ್ನದಾಗಿಸಿಕೊಂಡಿತು. ಪೆರುಗಿಯಾ ಪರ ಸೆಮೆನಿಕ್ 15 ಅಂಕಗಳನ್ನು ಗಳಿಸಿದರೆ, ಹೆರೆರಾ 13 ಅಂಕಗಳೊಂದಿಗೆ ಉತ್ತಮ ಬೆಂಬಲ ನೀಡಿದರು.


ಸರ್ ಸಿಕೋಮಾ ಪೆರುಗಿಯಾ ತಂಡದ ಆಟಗಾರರಾದ ಜಿಯಾನೆಲ್ಲಿ ಸಿಮೋನ್ ಹಾಗೂ ಸೋಲ್ ಸೆಬಾಸ್ಟಿಯನ್ ಅವರು ಟರ್ಕಿಯ ಹಾಲ್ಕ್‌ಬ್ಯಾಂಕ್ ಆಟಗಾರ ಪೆರಿನ್ ಗೊರ್ಡಾನ್ ಅವರ ಹೊಡೆತವನ್ನು ಬ್ಲಾಕ್ ಮಾಡಲು ಯತ್ನಿಸಿದ ಕ್ಷಣ –ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

'ಕ್ರೀಡೆಯಲ್ಲಿ ರಾಜಕೀಯ ಹಸ್ತಕ್ಷೇಪ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡಾಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ನೀಡಿದರೆ, ಆ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಶ್ರೀಲಂಕಾದ ಮಾಜಿ ಸ್ಪಿನ್ನರ್ ಅಜಂತಾ ಮೆಂಡಿಸ್ ಅಭಿಪ್ರಾಯ ಪಟ್ಟರು.

ನಗರದ ಆರ್ಕಿಡ್ಸ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಶನಿವಾರ ಏರ್ಪಡಿಸಿದ್ದ 'ಮಾಸ್ಟರ್ ಕ್ಲಾಸ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು ಮಾಧ್ಯಮದವರ ಜತೆ ಮಾತನಾಡಿದರು.

ಕರ್ತವ್ಯ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ತಡೆಯಲು ಶ್ರೀ ಲಂಕಾದ ಕ್ರಿಕೆಟ್ ಮಂಡಳಿ ವಿಫಲವಾಗಿದೆ ಎಂದು ಐಸಿಸಿ ದೇಶದ ಕ್ರಿಕೆಟ್ ಮಂಡಳಿಯನ್ನು ಅಮಾನತುಗೊಳಿಸಿದೆ. ಕ್ರಿಕೆಟ್ ಮಾತ್ರವಲ್ಲ ಕ್ರೀಡಾ ಕ್ಷೇತ್ರದಲ್ಲಿಯೇ ಕೆಟ್ಟ ರಾಜಕೀಯ ಇರಬಾರದು.


ಅಜಂತಾ ಮೆಂಡಿಸ್

ಇದು ಒಳ್ಳೆಯ ಬೆಳವಣಿಗೆಯಲ್ಲ. ಅಲ್ಲಿನ ಆಡಳಿತ ಸುಗಮವಾಗಿ ನಡೆದುಕೊಂಡು ಹೋಗಬೇಕು. ಸದ್ಯಕ್ಕೆ ಪರಿಸ್ಥಿತಿ ಸುಧಾರಿಸುತ್ತಿದೆ. ಅದು ಶೀಘ್ರವೇ ಸಹಜ ಸ್ಥಿತಿಗೆ ಬರಬೇಕು ಎಂದು ತಿಳಿಸಿದರು.

ಯುವ ಕ್ರಿಕೆಟಿಗರಿಗೆ ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಬಹಳ ಮುಖ್ಯ. ಕೋಚ್‌ಗಳು, ಹಿರಿಯ ಆಟಗಾರರ ಅನುಭವ ಕೇಳಿ ತಿಳಿದುಕೊಳ್ಳಬಹುದು. ಯುವ ಪೀಳಿಗೆಗೆ ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಕಷ್ಟು ಅವಕಾಶ ಇದೆ. ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ. ಫಿಟ್‌ನೆಸ್ ಕಡೆಗೆ ಹೆಚ್ಚು ಗಮನ ನೀಡಬೇಕು. ಸವಾಲುಗಳನ್ನು ಎದುರಿಸಿ ನಿರಂತರ ಶ್ರಮ, ದೃಢ ವಿಶ್ವಾಸದಿಂದ ಗುರಿ ಸಾಧಿಸಲು ಹೊರಟರೆ ಯಶಸ್ಸು ಕಟ್ಟಿಟ್ಟಬುತ್ತಿ ಎಂದು ಯುವ ಕ್ರೀಡಾಪಟುಗಳಿಗೆ ಸಲಹೆ ನೀಡಿದರು.

ವಿಶ್ವಕಪ್‌ನಲ್ಲಿ ಶ್ರೀಲಂಕಾ ಕ್ರಿಕೆಟ್ ತಂಡ ಕಳಪೆ ಪ್ರದರ್ಶನ ನೀಡಿದೆ. ಆದರೆ, ಇದು ಮುಂದುವರಿಯಬಾರದು. ಭವಿಷ್ಯದಲ್ಲಿ ನಾವು ಉತ್ತಮ ತಂಡ ಹೊಂದುವ ವಿಶ್ವಾಸವಿದೆ ಎಂದು ಅವರು ಹೇಳಿದರು.

'ಭಾರತ ಕ್ರಿಕೆಟ್ ಆಟಗಾರರ ಜತೆ ಉತ್ತಮ ಬಾಂಧವ್ಯ ಹೊಂದಿದ್ದೇನೆ. ವಿವಿಧ ಪಂದ್ಯಾವಳಿ ಆಡಲು ಸಾಕಷ್ಟು ಬಾರಿ ಭಾರತಕ್ಕೆ ಬಂದಿದ್ದೇನೆ. ನನ್ನ ಪತ್ನಿಗೆ ಹಿಂದಿ ಭಾಷೆ ಗೊತ್ತಿದೆ. ಆಕೆಯಿಂದ ನಾನು ಕೆಲವು ಪದಗಳನ್ನು ಕಲಿತಿದ್ದೇನೆ' ಎಂದು ಅವರು ತಿಳಿಸಿದರು.

ಶಾಲೆಯ ಹರಳೂರು ಕ್ಯಾಂಪಸ್‌ನಲ್ಲಿ ನಡೆದ 'ಮಾಸ್ಟರ್ ಕ್ಲಾಸ್' ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಾಲಾ ಆಡಳಿತ ಮಂಡಳಿ ಉಪಾಧ್ಯಕ್ಷೆ ಮಂಜುಳಾ ಇದ್ದರು.

ಕ್ವಾರ್ಟರ್‌ಗೆ ಕೇರಳ, ಬೆಂಗಾಲ್

ರಾಜ್‌ಕೋಟ್: ಆರಂಭಿಕ ಆಟಗಾರರಾದ ಕೃಷ್ಣಪ್ರಸಾದ್ (144; 137ಎ) ಮತ್ತು ರೋಹನ್ ಕುನ್ನುಮ್ಮಾಲ್ (120; 95ಎ) ಅವರ ಶತಕಗಳ ಬಲದಿಂದ ಕೇರಳ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಮಹಾರಾಷ್ಟ್ರವನ್ನು 153 ರನ್‌ಗಳಿಂದ ಮಣಿಸಿ ಎಂಟರ ಘಟ್ಟ ಪ್ರವೇಶಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕೇರಳ 50 ಓವರ್‌ಗಳಲ್ಲಿ 4 ವಿಕೆಟ್‌ಗೆ 383 ರನ್ ಗಳಿಸಿತು.

ಮಹಾರಾಷ್ಟ್ರವು, ಎದುರಾಳಿ ತಂಡದ ಸ್ಪಿನ್ ದಾಳಿಗೆ ಸಿಲುಕಿ 37.4 ಓವರ್‌ಗಳಲ್ಲಿ 230 ಗಳಿಸಿ ಆಲೌಟ್ ಆಯಿತು.

ಮತ್ತೊಂದು ಪಂದ್ಯದಲ್ಲಿ ಬೆಂಗಾಲ್ ತಂಡವು ಗುಜರಾತ್ ತಂಡದ ವಿರುದ್ಧ ಎಂಟು ವಿಕೆಟ್‌ಗಳ ಜಯ ಸಾಧಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸುದ್ದಿ

ಕೋಚ್ ಕೈಬಿಡಲು ಬಿಎಫ್‌ಸಿ ನಿರ್ಧಾರ

ಬೆಂಗಳೂರು (ಪಿಟಿಐ): ಪ್ರಸಕ್ತ ಋತುವಿನಲ್ಲಿ ಇಂಡಿಯನ್ ಸೂಪರ್ ಲೀಗ್‌ನಲ್ಲಿ ಕಳಪೆ ಪ್ರದರ್ಶನದ ಬೆನ್ನಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ ತನ್ನ ಮುಖ್ಯ ಕೋಚ್ ಸೈಮನ್ ಗ್ರೇಸನ್ ಮತ್ತು ಅಸಿಸ್ಟೆಂಟ್ ಕೋಚ್ ನೀಲ್ ಮೆಕ್‌ಡೊನಾಲ್ಡ್ ಅವರ ಸೇವೆಯನ್ನು ಕೊನೆಗೊಳಿಸಲು ನಿರ್ಧರಿಸಿದೆ.

ಭಾರತ ತಂಡದ ಮಾಜಿ ಆಟಗಾರ ರೆನೆಡಿ ಸಿಂಗ್ ಅವರು ನೂತನ ಮುಖ್ಯ ಕೋಚ್ ನೇಮಕವಾಗುವವರೆಗೆ ತಂಡದ ಕೋಚಿಂಗ್ ಉಸ್ತುವಾರಿ ವಹಿಸಲಿದ್ದಾರೆ ಎಂದು ಕ್ಲಬ್ ಹೇಳಿಕೆಯಲ್ಲಿ ತಿಳಿಸಿದೆ.

ಶುಕ್ರವಾರ, ಮುಂಬೈ ಎಫ್‌ಸಿ ವಿರುದ್ಧ ತವರಿನಲ್ಲಿ 0–4 ಗೋಲುಗಳಿಂದ ಹೊಡೆಸಿಕೊಂಡ ನಂತರ ಈ ಬೆಳವಣಿಗೆ ನಡೆದಿದೆ.

ಇಂಗ್ಲೆಂಡ್‌ನ ಗ್ರೇಸನ್, 2022–23ರ ಋತುವಿನಲ್ಲಿ ಬಿಎಫ್‌ಸಿ ಕೋಚ್ ಆಗಿ ಅಧಿಕಾರ ವಹಿಸಿಕೊಂಡ ನಂತರ ತಂಡವು ಐಎಸ್‌ಎಲ್‌ನಲ್ಲಿ ಎರಡನೇ ಸ್ಥಾನ ಪಡೆದುಕೊಂಡಿತ್ತು. ಸೂಪರ್‌ಕಪ್ ಪ್ರಶಸ್ತಿಯನ್ನೂ ಗೆದ್ದುಕೊಂಡಿತ್ತು. ಜೊತೆಗೆ ಡ್ಯುರಾಂಡ್ ಕಪ್‌ನಲ್ಲೂ ಚಾಂಪಿಯನ್ ಆಗಿತ್ತು. ಆದರೆ ಈ ಋತುವಿನಲ್ಲಿ ಬಿಎಫ್‌ಸಿ ದಯನೀಯ ಸ್ಥಿತಿಯಲ್ಲಿದ್ದು, 9 ಪಂದ್ಯಗಳಲ್ಲಿ ಕೇವಲ ಒಂದರಲ್ಲಿ ಜಯಗಳಿಸಿದ್ದು, ತಲಾ ನಾಲ್ಕು ಪಂದ್ಯಗಳಲ್ಲಿ 'ಡ್ರಾ' ಮತ್ತು ಸೋಲು ಕಂಡಿದೆ. ಲೀಗ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದೆ.

ಕಿವೀಸ್‌ಗೆ ಜಯ

ಢಾಕಾ: ಒತ್ತಡದ ಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಿ ಅಜೇಯ 40 ರನ್ (48ಎ, 4x4, 1x6) ಗಳಿಸಿದ ಗ್ಲೆನ್ ಫಿಲಿಪ್ಸ್, ನ್ಯೂಜಿಲೆಂಡ್ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಲು ನೆರವಾದರು. ಸರಣಿ ಈಗ 1–1ರಲ್ಲಿ ಸಮನಾಗಿದೆ. ನಾಲ್ಕನೇ ದಿನವಾದ ಶನಿವಾರ ಬೆಳಿಗ್ಗೆ ಎಡಗೈ ಸ್ಪಿನ್ನರ್ ಎಜಾಜ್ ಪಟೇಲ್ (57ಕ್ಕೆ6) ದಾಳಿಗೆ ಕುಸಿದ ಆತಿಥೇಯರ ಮೊದಲ ಇನಿಂಗ್ಸ್ 144 ರನ್ನಿಗೆ ಕೊನೆಗೊಂಡಿತ್ತು. ಗೆಲುವಿಗೆ 137 ರನ್‌ಗಳ ಗುರಿ ಎದುರಿಸಿದ ಪ್ರವಾಸಿ ನ್ಯೂಜಿಲೆಂಡ್ ಟೀ ನಂತರ 6 ವಿಕೆಟ್‌ಗೆ 139 ರನ್ ಬಾರಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಅತ್ಯಮೂಲ್ಯ 87 ರನ್ ಬಾರಿಸಿದ್ದ ಫಿಲಿಪ್ಸ್, ಎರಡನೇ ಸರದಿಯಲ್ಲೂ ಉಪಯುಕ್ತ ಕಾಣಿಕೆ ನೀಡಿದ 'ಪಂದ್ಯದ ಪುರುಷೋತ್ತಮ'ರಾದರು. ಆಲ್‌ರೌಂಡರ್ ಮಿಚೆಲ್ ಸ್ಯಾಂಟ್ನರ್ (ಔಟಾಗದೇ 35) ಜೊತೆಗೆ ಮುರಿಯದ ಏಳನೇ ವಿಕೆಟ್‌ಗೆ 70 ರನ್ ಸೇರಿಸಿದರು. ಒಂದು ಹಂತದಲ್ಲಿ ಪ್ರವಾಸಿಗರು 6 ವಿಕೆಟ್‌ಗೆ 69 ರನ್ ಗಳಿಸಿ ಸಂಕಟಕ್ಕೆ ಸಿಲುಕಿದ್ದರು.

ಕುಸ್ತಿ ಫೆಡರೇಷನ್ ಚುನಾವಣೆ ಡಿ.21ಕ್ಕೆ

ನವದೆಹಲಿ (ಪಿಟಿಐ): ಈಗಾಗಲೇ ಸಾಕಷ್ಟು ವಿಳಂಬವಾಗಿರುವ ಭಾರತ ಕುಸ್ತಿ ಫೆಡರೇಷನ್‌ನ ಚುನಾವಣೆ ಡಿಸೆಂಬರ್ 21ರಂದು ನಡೆಯಲಿದ್ದು, ಅಂದೇ ಫಲಿತಾಂಶ ಪ್ರಕಟವಾಗಲಿದೆ ಎಂದು ಚುನಾವಣಾ ಅಧಿಕಾರಿ ಶನಿವಾರ ತಿಳಿಸಿದ್ದಾರೆ.

ಮತದಾನ, ಮತಎಣಿಕೆ ಮತ್ತು ಫಲಿತಾಂಶ ಪ್ರಕಟಣೆ ಅಂದೇ ನಡೆಯಲಿದೆ. ಆದರೆ, ಫಲಿತಾಂಶವು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಂದಿರುವ ಅರ್ಜಿ ವಿಚಾರಣೆಯ ಅಂತಿಮ ಆದೇಶಕ್ಕೆ ಒಳಪಡಲಿದೆ ಎಂದು ಚುನಾವಣಾ ಅಧಿಕಾರಿ ನ್ಯಾ.(ನಿವೃತ್ತ) ಎಂ.ಎಂ. ಕುಮಾರ್ ಕಚೇರಿಯ ಹೇಳಿಕೆ ತಿಳಿಸಿದೆ.

ಡಬ್ಲ್ಯುಪಿಎಲ್ ಬಿಡ್: ಕಶ್ವಿ, ಅನ್ನಾಬೆಲ್ ಸುದರ್‌ಲ್ಯಾಂಡ್‌ಗೆ ತಲಾ ₹2 ಕೋಟಿ

₹1.3 ಕೋಟಿ ಗಳಿಸಿದ ವೃಂದಾ ದಿನೇಶ್

ಮುಂಬೈ (ಪಿಟಿಐ): ಪಂಜಾಬ್‌ನ ಮಧ್ಯಮ ವೇಗದ ಬೌಲರ್ ಕಶ್ವೀ ಗೌತಮ್ ಅವರು ಶನಿವಾರ ನಡೆದ ಮಹಿಳಾ ಪ್ರೀಮಿಯರ್ ಕ್ರಿಕೆಟ್ ಲೀಗ್‌ನ ಹರಾಜಿನಲ್ಲಿ ಎರಡು ಕೋಟಿ ರೂಪಾಯಿ ಮೊತ್ತಕ್ಕೆ ಗುಜರಾತ್ ಜೈಂಟ್ಸ್ ತಂಡದ ಪಾಲಾಗಿದ್ದಾರೆ. 22 ವರ್ಷದ ಕರ್ನಾಟಕದ ಆಟಗಾರ್ತಿ ವೃಂದಾ ದಿನೇಶ್ ಕೂಡ ಬಿಡ್ಡಿಂಗ್‌ನಲ್ಲಿ ಬಂಪರ್ ಮೌಲ್ಯ ಪಡೆದರು. ಅವರನ್ನು ₹1.3 ಕೋಟಿಗೆ ಯುಪಿ ವಾರಿಯರ್ಸ್ ತಂಡ ಪಡೆಯಿತು.

ಡಬ್ಲ್ಯುಪಿಎಲ್‌ನ ಎರಡನೇ ಆವೃತ್ತಿಯ ಬಿಡ್ಡಿಂಗ್‌ನಲ್ಲಿ 20 ವರ್ಷದ ಆಟಗಾರ್ತಿ ಕಶ್ವಿ ಅವರ ಮೂಲ ಮೌಲ್ಯ ₹10 ಲಕ್ಷ ಎಂದು ನಿಗದಿಪಡಿಸಲಾಗಿತ್ತು. ಜೈಂಟ್ಸ್ ಜೊತೆಗೆ ಯುಪಿ ವಾರಿಯರ್ಸ್ ಕೂಡ ಕಶ್ವಿ ಅವರನ್ನು ತಂಡಕ್ಕೆ ಪಡೆಯಲು ಪ್ರಯತ್ನಿದವು.

22 ವರ್ಷದ ಕರ್ನಾಟಕ ಆಟಗಾರ್ತಿ ವೃಂದಾ ಇನ್ನೂ ರಾಷ್ಟ್ರೀಯ ತಂಡದಲ್ಲಿ ಆಡಿಲ್ಲ. ಆದರೆ ಅವರು ಮತ್ತು ಕಶ್ವೀ ಭಾರತ 'ಎ' ತಂಡದ ಪರ, ಇಂಗ್ಲೆಂಡ್ 'ಎ' ವಿರುದ್ಧ ಮೂರು ಪಂದ್ಯಗಳ ಸರಣಿಯಲ್ಲಿ ಆಡಿದ್ದರು.

ಬಿಡ್ಡಿಂಗ್‌ನ ಆರಂಭದಲ್ಲಿ ಆಸ್ಟ್ರೇಲಿಯಾದ ಆಟಗಾರ್ತಿಯರಾದ ಅನ್ನಾಬೆಲ್ ಸುದರ್‌ಲ್ಯಾಂಡ್ ಅವರು ಎರಡು ಕೋಟಿ ಮೊತ್ತಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ಪಾಲಾದರು. ಉದ್ಘಾಟನಾ ಆವೃತ್ತಿಯಲ್ಲಿ ಸುದರ್‌ಲ್ಯಾಂಡ್ ಜೈಂಟ್ಸ್ ಪರ ಆಡಿದ್ದರು. ಆದರೆ ಲೀಗ್ ನಂತರ ಅವರನ್ನು ಉಳಿಸಿಕೊಳ್ಳಲಿಲ್ಲ. 20 ವರ್ಷದ ಎಡಗೈ ಬ್ಯಾಟರ್ ಫೋಬಿ ಲಿಚ್‌ಫೀಲ್ಡ್ ಅವರನ್ನು ಒಂದು ಕೋಟಿ ಕೊಟ್ಟು ಗುಜರಾತ್ ಜೈಂಟ್ಸ್, ತಂಡಕ್ಕೆ ಸೇರಿಸಿಕೊಂಡಿತು. ಇವರೂ ಆಸ್ಟ್ರೇಲಿಯಾದವರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಆಸ್ಟ್ರೇಲಿಯಾದ ಜಾರ್ಜಿಯಾ ವಾರ್ಹ್ಯಾಮ್ ಅವರನ್ನು (₹40 ಲಕ್ಷ) ಮತ್ತು ಇಂಗ್ಲೆಂಡ್‌ನ ಕೇಟ್ ಕ್ರಾಸ್ (₹30 ಲಕ್ಷ) ಅವರನ್ನು ಬಿಡ್‌ನಲ್ಲಿ ಪಡೆಯಿತು. 37 ವರ್ಷದ ಸ್ಪಿನ್ನರ್ ಏಕ್ತಾ ಬಿಷ್ಠ್ ಅವರನ್ನೂ ಮೂಲಬೆಲೆಗಿಂತ ಎರಡು ಪಟ್ಟು ಹೆಚ್ಚು ನೀಡಿ (₹40 ಲಕ್ಷ) ಆರ್‌ಬಿಸಿ ಪಡೆಯಿತು.


ವೃಂದಾ ದಿನೇಶ್

ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಶಬ್ನಮ್ ಇಸ್ಮಾಯಿಲ್ ಅವರು ಮೂಲಬೆಲೆಗಿಂತ ಮೂರು ಪಟ್ಟು ಹೆಚ್ಚು ಮೊತ್ತಕ್ಕೆ ಮುಂಬೈ ತಂಡದ ಪಾಲಾದರು.

ಶಬ್ನಮ್ ಮಹಿಳಾ ಕ್ರಿಕೆಟ್‌ನಲ್ಲಿ ಪ್ರಸ್ತುತ ಅತಿ ವೇಗದ ಬೌಲರ್ ಎನಿಸಿದ್ದಾರೆ. ಅವರಿಗೆ ಸಾಕಷ್ಟು ಅನುಭವವಿದೆ' ಎಂದು ಮುಂಬೈ ಇಂಡಿಯನ್ಸ್ ಮೆಂಟರ್ ಜೂಲನ್ ಗೋಸ್ವಾಮಿ ಹೇಳಿದರು.


ರಾಷ್ಟ್ರೀಯ ತಂಡದಿಂದ ಹೊರಬಿದ್ದಿರುವ ಕರ್ನಾಟಕದ ವೇದಾ ಕೃಷ್ಣಮೂರ್ತಿ ಅವರನ್ನು ₹30 ಲಕ್ಷ ಮೂಲಬೆಲೆಗೆ ಗುಜರಾತ್ ಜೈಂಟ್ಸ್ ಪಡೆಯಿತು.

ಬಿಡ್ ನಂತರ ಆರ್‌ಸಿಬಿ ತಂಡ: ಉಳಿಸಿಕೊಂಡ ಆಟಗಾರ್ತಿಯರು: ಸ್ಮೃತಿ ಮಂದಾನಾ , ಆಶಾ ಶೋಭನಾ, ದಿಶಾ ಕಸತ್, ಎಲಿಸಿ ಪೆರಿ, ಹೀದರ್ ನೈಟ್, ಇಂದ್ರಾಣಿ ರಾಯ್, ಕನಿಕಾ ಅಹುಜಾ, ರೇಣುಕಾ ಸಿಂಗ್, ರಿಚಾ ಘೋಷ್, ಶ್ರೇಯಾಂಕಾ ಪಾಟೀಲ್, ಸೋಫಿ ಡಿವೈನ್.

ಬಿಡ್‌ನಲ್ಲಿ ಪಡೆದವರು: ಜಾರ್ಜಿಯಾ ವಾರ್ಹೆಮ್ (ಬಿಡ್‌ನಲ್ಲಿ ಪಡೆದ ಮೊತ್ತ ₹40 ಲಕ್ಷ), ಕೇಟ್ ಕ್ರಾಸ್ (₹30 ಲಕ್ಷ), ಏಕ್ತಾ ಬಿಷ್ಠ್ (₹60 ಲಕ್ಷ), ಶುಭಾ ಸತೀಶ್ (₹10ಲಕ್ಷ), ಎಸ್.ಮೇಘನಾ (₹30ಲಕ್ಷ), ಸಿಮ್ರಾನ್ ಬಹಾದೂರ್ (₹30ಲಕ್ಷ), ಸೋಫಿ ಮೊಲಿನೆಕ್ಸ್ (₹30ಲಕ್ಷ).

ಹೆಚ್ಚು ಮೊತ್ತ ಗಳಿಸಿದ ಮೊದಲ ಐವರು ಆಟಗಾರ್ತಿಯರು

ಆಟಗಾರ್ತಿ	ದೇಶ	ಮೊತ್ತ (ಕೋಟಿಗಳಲ್ಲಿ)	ಫ್ರಾಂಚೈಸಿ
ಅನ್ನಾಬೆಲ್ ಸುದರ್‌ಲ್ಯಾಂಡ್	ಆಸ್ಟ್ರೇಲಿಯಾ	₹2	ಡೆಲ್ಲಿ ಕ್ಯಾಪಿಟಲ್ಸ್
ಕಶ್ವೀ ಗೌತಮ್	ಭಾರತ	₹2	ಗುಜರಾತ್ ಜೈಂಟ್ಸ್
ವೃಂದಾ ದಿನೇಶ್	ಭಾರತ	₹1.30	ಯು.ಪಿ ವಾರಿಯರ್ಸ್
ಶಬ್ನಾ ಇಸ್ಮಾಯಿಲ್	ದಕ್ಷಿಣ ಆಫ್ರಿಕಾ	₹1.20	ಮುಂಬೈ ಇಂಡಿಯನ್ಸ್
ಫೋಬಿ ಲಿಚ್‌ಫೀಲ್ಡ್	ಆಸ್ಟ್ರೇಲಿಯಾ	₹1	ಗುಜರಾತ್ ಜೈಂಟ್ಸ್



ಅರ್ಜುನ ಅಂದ್ರೆ ಪುನೀತ್ ರಾಜ್‌ಕುಮಾರ್!

‘ಈ ಕಾಕನಕೋಟೆ ಕಾಡಲ್ಲಿ ವೀರಾನೆ ಅಂದ್ರೆ ಪುನೀತ್ ರಾಜ್‌ಕುಮಾರೇ. ಅಂದ್ರೆ ನಮ್ಮ ಅರ್ಜುನ. ಅದಕ್ಕೇ, ಪುನೀತ್ ರಾಜ್‌ಕುಮಾರ್ ಲೆವೆಲ್‌ನಲ್ಲೇ ಅದನ್ನ ನೋಡ್ಕೋತಿದ್ದೆವು’ ಎಂದರು ಮಾವುತ ಸಣ್ಣಪ್ಪ. ‘ಕಾಡಲ್ಲಿ ಯಾವ ಕೆಲ್ಸ ಕೊಟ್ರೂ ಅಚ್‌ಕಟ್ಟಾಗಿ ಮಾಡ್ಕೊಂಡ್ ಹೋಗ್ತಿದ್ವಿ. ತಾನೂ ಥೀ ಅನ್ನಿಸಿಕೊಳ್ಳಲಿಲ್ಲ. ನಮ್ಮನ್ನೂ ಥೀ ಅನ್ನಿಸಿಕೊಳ್ಳಕೆ ಬಿಡಲಿಲ್ಲ. ಬಳ್ಳೆ ಹಾಡಿಗೆ ಅರ್ಜುನನೇ ಫೇಮಸ್. ಚಿನ್ನ ಇದ್ದಂಗಿತ್ತು. ಆದ್ರೆ ಬರಿ ಚಿನ್ನ ಅನ್ನಂಗಿಲ್ಲ, ವಜ್ರಾನೇ ಅದು. ಅದರ ಜೊತೆ ಐದು ವರ್ಷ ಅಂಬಾರಿ ಹೊತ್ತಿದ್ದೆ’ ಎಂದು ಸ್ಮರಿಸಿದರು. ‘ನಮ್ಮ ಬಳ್ಳೆ ಕ್ಯಾಂಪಲ್ಲಿ ಅರ್ಜುನ ಇಲ್ಲ ಅಂದ್ರೆ ಹವಾ ಇಲ್ಲ. ಮತ್ತೆ ಅಂಥ ಅರ್ಜುನ ಹುಟ್ಟಲ್ಲ. ಆ ಗತ್ತು, ಆ ನಡೆ, ಸೇವ್‌ಕಟ್ಟು, ಅದರ ಲುಕ್ಕು, ಅದರ ಸ್ವಭಾವ ಹುಡುಕೋದು ಕಷ್ಟ. ಇನ್ ಅಂತ ಆನೆ ಸಿಗಲ್ಲ’ ಎನ್ನುತ್ತಾ ಸಣ್ಣಪ್ಪ ಕಣ್ಣೀರಾದರು.

ಸೂಪರ್‌ಫ್ಯಾನ್‌ಗಳ ಆರಾಧನಾ ಕಥನ

ಕ್ರಿಕೆಟ್‌ನ ಸೂಪರ್‌ಫ್ಯಾನ್‌ಗಳು ನೆಚ್ಚಿನ ಆಟಗಾರರನ್ನು ಆರಾಧಿಸುವ ಪರಿಗೆ ಸಾಟಿಯೇ ಇಲ್ಲ. ದೇಶ, ವಿದೇಶಗಳ ಹಲವೆಡೆಗಳಲ್ಲಿ ಸೂಪರ್‌ಫ್ಯಾನ್‌ಗಳು ಪಯಣಿಸುವುದಾದರೂ ಹೇಗೆ? ಇಷ್ಟಕ್ಕೂ ಮೆಚ್ಚಿದ ಆಟಗಾರರ ಮನ ಗೆದ್ದ ಬಗೆಯಾದರೂ ಏನು?

ನಾಗೇಶ್ ಶೆಣೈ ಪಿ.

‘ಅಂದು ನಾನು ವಿವಿಧ ದಿರಿಸುಗಳನ್ನು ತೊಟ್ಟು ಆರ್‌ಸಿಬಿ ತಂಡ ಪ್ರೋತ್ಸಾಹಿಸಲು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹೋಗುವಾಗ ‘ಇವನಿಗೇನೂ ಉದ್ಯೋಗವಿಲ್ಲ. ಪ್ರಚಾರಕ್ಕೆ ಈ ರೀತಿ ಮಾಡುತ್ತಾನೆ’ ಎಂದು ಹಂಗಿಸಿದ್ದವರೇ ಇಂದು ನನ್ನ ಬಳಿ ದೇಶದ ಕ್ರಿಕೆಟಿಗರ ಹಸ್ತಾಕ್ಷರ, ಪರಿಚಯ ಮಾಡಿಕೊಡುವಂತೆ ಕೇಳುತ್ತಿದ್ದಾರೆ. ಇದಕ್ಕಿಂತ ಖುಷಿ ಇನ್ನೇನು ಬೇಕು.... ’ ಎನ್ನುವಾಗ ಬೆಂಗಳೂರಿನ ದೊಮ್ಮಲೂರು ನಿವಾಸಿ ಸುಗುಮಾರ್ ಮೊಗದಲ್ಲಿ ಏನೋ ಸಾಧಿಸಿದ ಭಾವ. ಇವರು ಟೀಮ್ ಇಂಡಿಯಾದ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತಂಡದ ಸೂಪರ್‌ಫ್ಯಾನ್.

ದೇಶದಲ್ಲಿ ತಾರಾ ವರ್ಚಸ್ಸು ಪಡೆದಿರುವ ಕ್ರಿಕೆಟಿಗರನ್ನು ಆರಾಧಿಸುವವರು ಹೇರಳವಾಗಿದ್ದಾರೆ. ಅದರ ನಡುವೆ ಸುಗುಮಾರ್ ಅವರಂಥ ಸೂಪರ್‌ಫ್ಯಾನ್‌ಗಳ ಮಿಂಚೂ ಉಂಟು. ಕ್ರಿಕೆಟ್ ಪಂದ್ಯಗಳ ವೇಳೆ, ವಿಭಿನ್ನ ವೇಷಭೂಷಣ, ಮೈಗೆಲ್ಲಾ ತ್ರಿವರ್ಣ ಧ್ವಜದ ಅಥವಾ ತಂಡ ಪ್ರತಿನಿಧಿಸುವ ಬಣ್ಣ ಬಳಿದು, ಎದೆಯ ಮೇಲೆ ತಮ್ಮ ನೆಚ್ಚಿನ ಆಟಗಾರನ ಹೆಸರು, ಜರ್ಸಿ ನಂಬರ್ ಬರೆದು, ರಾಷ್ಟ್ರಧ್ವಜ ಬೀಸಿ ತಂಡವನ್ನು ಪ್ರೋತ್ಸಾಹಿಸುವವರನ್ನು ಕಂಡೇ ಇರುತ್ತೀರಿ. ಇವರೇ ಆ ಸೂಪರ್‌ಫ್ಯಾನ್‌ಗಳು.

ನೆಚ್ಚಿನ ಕ್ರಿಕೆಟಿಗರ ಮೇಲೆ ಇರುವ ಪ್ರೀತಿ–ಅಭಿಮಾನವೇ ಸೂಪರ್‌ಫ್ಯಾನ್‌ಗಳನ್ನು ಈ ಕೆಲಸಕ್ಕೆ ಪ್ರೇರೇಪಿಸಿವೆ. ಸುಗುಮಾರ್ ಅವರಂತೆಯೇ ದೀಪಕ್ ಪಟೇಲ್ (ರೋಹಿತ್ ಶರ್ಮಾ ಸೂಪರ್‌ಫ್ಯಾನ್), ಸುಧೀರ್ ಕುಮಾರ್ ಚೌಧರಿ (ಸಚಿನ್ ತೆಂಡೂಲ್ಕರ್ ಸೂಪರ್‌ಫ್ಯಾನ್), ರಾಮ್‌ಬಾಬು, ಸರವಣನ್ ಹರಿ (ಮಹೇಂದ್ರ ಸಿಂಗ್ ಧೋನಿ ಸೂಪರ್‌ಫ್ಯಾನ್), ಪಿಂಟು ಬೆಹರಾ (ವಿರಾಟ್ ಕೊಹ್ಲಿ ಸೂಪರ್‌ಫ್ಯಾನ್) ಕೂಡ ಪ್ರಮುಖ ಸೂಪರ್‌ಫ್ಯಾನ್‌ಗಳು. ಇಂಥವರಿಗೆ ಆಯಾ ಆಟಗಾರರು ಅಥವಾ ಕೆಲವೊಮ್ಮೆ ತಂಡದ ವ್ಯವಸ್ಥಾಪಕರು ಪಂದ್ಯದ ಟಿಕೆಟ್‌ಗಳನ್ನು ನೀಡುತ್ತಾರೆ. ಇವರಲ್ಲಿ ಸಚಿನ್ ಅಭಿಮಾನಿ ಸುಧೀರ್ ದೇಶದ ‘ಸೀನಿಯರ್ ಮೋಸ್ಟ್ ಸೂಪರ್‌ಫ್ಯಾನ್’!

ಸೂಪರ್‌ಫ್ಯಾನ್‌ಗಳು ಭಾರತದಲ್ಲಿ ಮಾತ್ರ ಅಲ್ಲ, ಇತರ ದೇಶಗಳಲ್ಲೂ ಕಾಣಸಿಗುತ್ತಾರೆ. ಪಾಕಿಸ್ತಾನದ ಚಾಚಾ ಎಂಬ ಬಿಳಿಯ ಗಡ್ಡಧಾರಿ ವ್ಯಕ್ತಿಯೂ ಕ್ರಿಕೆಟ್ ಪ್ರಿಯರಿಗೆ ಪರಿಚಿತ ಸೂಪರ್‌ಫ್ಯಾನ್. ಪಾಕ್ ತಂಡ ಹೋದಕಡೆಯಲ್ಲೆಲ್ಲಾ ಅವರು ಹಾಜರು.

11ನೇ ಪುಟಕ್ಕೆ...



ದೀಪಕ್ ಹಾಗೂ ಸುಗುಮಾರ್

ರೋಹಿತ್‌ಗಾಗಿ ಆರು ದಿನ ಕಾಯ್ದದ್ದು...

ಅದು 2021. ಲಾಕ್‌ಡೌನ್ ಕಳೆದಿತ್ತು. ನನಗೆ ರೋಹಿತ್ ಸರ್ ಮಾಲ್ಡೀವ್ಸ್ ಪ್ರವಾಸಕ್ಕೆ ಹೋದ ವಿಷಯ ಗೊತ್ತಿರಲಿಲ್ಲ. ಮುಂಬೈಗೆ ಹೋಗಿ ಅವರ ಮನೆಯ ಮುಂದೆ ಕಾದೆ. ಒಂದಲ್ಲ, ಎರಡಲ್ಲ... ಆರು ದಿನ. ನಂತರ ಭೇಟಿಯಾದೆ. ಮನೆಗೆ ಕರೆದರು. ಅಂದಿನಿಂದ ನನ್ನ ಈ ಪಯಣ ಮುಂದುವರಿದಿದೆ.

ನನ್ನ ಅಂಗೈನಲ್ಲಿ ಒಂಬತ್ತು ಭಾಷೆಗಳಲ್ಲಿ ರೋಹಿತ್ ಹೆಸರನ್ನು ಬರೆಸಿಕೊಂಡಿದ್ದೇನೆ. ರೋಹಿತ್ ಹಸ್ತಾಕ್ಷರವೂ ಇದೆ. ಮುಂಬೈನಲ್ಲಿ ಹಾಕಿದ್ದ ಆ ಹಸ್ತಾಕ್ಷರ ಹಾಳಾಗದಂತೆ ನಾಗ್ಪುರಕ್ಕೆ ಹೋಗಿ ಅದನ್ನೇ ಟ್ಯಾಟೂ ಮಾಡಿಸಿದ್ದೆ.

ಈ ವರ್ಷದ ಏಪ್ರಿಲ್ ತಿಂಗಳು. ಮುಂಬೈನ ಹೋಟೆಲ್ ಒಂದರಲ್ಲಿ ನಡೆದ ಕಾರ್ಯಕ್ರಮದಲ್ಲಿ ನನಗೂ ಆಹ್ವಾನವಿತ್ತು. ಅಲ್ಲಿ ರೋಹಿತ್ ಶರ್ಮಾ ಅವರಿಗೆ ಹುಟ್ಟುಹಬ್ಬದ ಶುಭಾಶಯ ಹೇಳುವಂತೆ ತಿಳಿಸಿದರು. ಅಲ್ಲೆಲ್ಲೂ ರೋಹಿತ್ ಸರ್ ಕಂಡಿರಲಿಲ್ಲ. ನಾನು ಶುಭಾಶಯ ಕೋರಿದ ಮೇಲೆ ಹಠಾತ್ತನೇ ಹಿಂದಿನಿಂದ ಧ್ವನಿ ಕೇಳಿತು: ‘ಅಲ್ಲೇಕೆ ಶುಭಾಶಯ ಕೋರುತ್ತಿ. ನಾನಿಲ್ಲಿ ಇದ್ದೇನಲ್ಲ’. ಸ್ವತಃ ರೋಹಿತ್ ಸರ್ ಹೀಗೆ ಹೇಳಿದಾಗ ನಂಬಲಾಗಲಿಲ್ಲ. ಆ ಸಂದರ್ಭ ನನ್ನ ಪಾಲಿಗೆ ಅವಿಸ್ಮರಣೀಯ.

ನನಗೆ ಟಿಕೆಟ್ ಕಳಿಸುತ್ತಾರೆ. ಆದರೆ ನಾನು ಅವರಿಂದ ಹಣ ಕೇಳುವುದಿಲ್ಲ. ಊರಿನಲ್ಲಿ ಝೊಮೆಟೊದಲ್ಲಿ ಕೆಲಸ ಮಾಡುತ್ತೇನೆ. ಬಣ್ಣ ಹಚ್ಚಲು ಮೂರು ಗಂಟೆ, ತೆಗೆಯಲು ಒಂದೂವರೆ ಗಂಟೆ ಬೇಕಾಗುತ್ತದೆ. ಈ ಅವಧಿಯಲ್ಲಿ ನಿದ್ರೆ ಮಾಡುವಂತಿಲ್ಲ.

ದೀಪಕ್ ಪಟೇಲ್, ನಾಗ್ಪುರ

ಅರ್ಜುನ ಬಹುತೇಕರ ದೃಷ್ಟಿಯಲ್ಲಿ ಅಂಬಾರಿ ಹೊತ್ತ ಆನೆ. ಅದರ ಜೊತೆಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿರುವ ಮಾವುತರ ಅಂತರಂಗದಲ್ಲಿ ಉಳಿದಿರುವ ಅರ್ಜುನನ ಚಿತ್ರ ಬೇರೆಯದೇ ಇದೆ. ಅದನ್ನು ಕಾಣಿಸುವ ನುಡಿನಮನ ಇದು.

ಕಾಕನಕೋಟೆಯ ಹೀರೊ

ಕೆ.ನರಸಿಂಹಮೂರ್ತಿ

‘ಅರ್ಜುನನ ಕತ್ತಿಗೆ ಕಟ್ಟಿದ್ದ ಘಂಟೆ ಸದ್ದಾದರೆ ನಮ್ಮಪ್ಪ, ನಮ್ಮವ್ವ, ನನ್ ಹೆಂಡ್ತಿ, ಮಕ್ಕು ಎಲ್ರೂ ಬೆಲ್ಲ ಹಿಡ್ಕೊಂಡು ಮನೆಯಿಂದ ಈಚೆ ಬರೋವ್ರು. ಈಗ ಯಾರಿಗ್ ಕೊಡೋದು ನಾವು? ಯಾವ್ ಆನೆ ಬರುತ್ತೆ ನಮ್ ಹತ್ರಾ? ದೇವ್ರನ್ನ ಕಳ್ಕೊಂಡ್ವಲ್ಲ ಸಾರ್ ನಾವು...’

ಹಾಸನದ ಅರಣ್ಯ ಪ್ರದೇಶಗಳಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆಗೆಂದು ಬಳ್ಳೆ ಶಿಬಿರದಿಂದ ನವೆಂಬರ್ ಕೊನೆ ವಾರ ಅರ್ಜುನನೊಂದಿಗೆ ಹೋಗಿದ್ದ ವಿನು ವಾಪಸು ಬರಿಗೈಯಲ್ಲಿ ಬಂದಿದ್ದರು. ಆದರೆ ಅವರ ಮೈಮೇಲೆ ಗಾಯಗಳಿದ್ದವು. ಮರೆಯಾಗದ ನೋವುಗಳಿದ್ದವು. ಪಡಸಾಲೆಯ ನೆಲದ ಮೇಲೆ, ಅರ್ಜುನನನ್ನು ಕಟ್ಟಿಹಾಕಲು ಬಳಸುತ್ತಿದ್ದ ಹಗ್ಗಗಳ ರಾಶಿ ಇತ್ತು. ಕತ್ತಿಗೆ ಕಟ್ಟುತ್ತಿದ್ದ ಘಂಟೆಯ ಸರಪಳಿಯೂ ಮೌನವಾಗಿತ್ತು.

–ಅದು ಮೈಸೂರಿನ ಎಚ್.ಡಿ.ಕೋಟೆ ತಾಲ್ಲೂಕಿನ ನಾಗರಹೊಳೆ ಉದ್ಯಾನವನ ವ್ಯಾಪ್ತಿಯ ಡಿ.ಬಿ.ಕುಪ್ಪೆ ವನ್ಯಜೀವಿ ವಲಯದ ಬಳ್ಳೆ ಆನೆ ಶಿಬಿರದ ಹಾಡಿಯ ಮನೆ. ಪಡಸಾಲೆಯಲ್ಲಿ ಕುಳಿತು ಮಾವುತ ವಿನು ಕಣ್ಣೀರಿಡುತ್ತಿದ್ದಾಗ, ಅವರ ಮನೆಯವರೆಲ್ಲರಲ್ಲೂ ದುಃಖ ಮಡುಗಟ್ಟಿತ್ತು. ಅಲ್ಲಿ, ರಾಜನಂತೆ ತಾವು ಸಾಕಿದ ಮನೆಯ ಧೀರ ಮಗನನ್ನು ಅನಿವಾರ್ಯವಾಗಿ ಬೇರೆಲ್ಲೋ ಮಣ್ಣು ಮಾಡಿ ಬಂದ ಅಸಹಾಯಕತೆ ಇತ್ತು. ‘ಕೊನೆಬಾರಿಗೆ ಅವನ ಮುಖ ನೋಡುವ ಅವಕಾಶವನ್ನೂ ಕೊಡಲಿಲ್ಲ’ ಎಂಬ ಆಕ್ರೋಶ, ಸಂಕಟಗಳಿದ್ದವು.

ಕೊನೆ ಇರದ ಶೋಕ

ಕಾರ್ಯಾಚರಣೆಯಲ್ಲಿ ಒಂಟಿ ಸಲಗದ ದಾಳಿಯಿಂದ ವೀರಮರಣವನ್ನಪ್ಪಿದ ಅರ್ಜುನ, ಮೈಸೂರು ದಸರಾ ಉತ್ಸವದಲ್ಲಿ ಎಂಟು ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ವಿಶಿಷ್ಟ ಸ್ವಭಾವದ, ಧೀರೋದಾತ್ತ ನಡವಳಿಕೆಯ ಅಪರೂಪದ ಸಾಕಾನೆ. ಈ ಬಾರಿಯ ದಸರೆಯಲ್ಲಿ ‘ನಿಶಾನೆ ಆನೆ’ಯಾಗಿದ್ದೇ ಕೊನೆಯ ನೆನಪು. ಉತ್ಸವಕ್ಕೆಂದು ಗಜಪಡೆ ಜೊತೆಗೆ ಬಂದು ಅರಣ್ಯ ಭವನದಲ್ಲಿ ನಾಲ್ಕು ರಾತ್ರಿ ಕಳೆದು, ಅರಮನೆಗೆ ಗಜಪಡೆ ಪ್ರವೇಶವಾದ ದಿನವೇ, ಕೋಟೆ ತಾಲ್ಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನದಂಚಿನ ಕಲ್ಲಹಟ್ಟಿಯಲ್ಲಿ ಬಾಲಕನ ಕೊಂದ ಹುಲಿ ಸೆರೆ ಕಾರ್ಯಾಚರಣೆಗೆಂದು ಕರೆದೊಯ್ಯಲಾಗಿತ್ತು. ಅದರ ಅಲಂಕಾರವೂ ಮಾಸಿರಲಿಲ್ಲ. ಅದಾಗಿ ಕೆಲವು ತಿಂಗಳು ಕಳೆಯುವಷ್ಟರಲ್ಲೇ, ಅವನ ಅಕಾಲಿಕ ಸಾವಿಗೆ ಇಡೀ ನಾಡು ಬೆಚ್ಚಿಬಿದ್ದಿದೆ. ಬಳ್ಳೆ ಹಾಡಿಯ ಎರಡು ಕುಟುಂಬಗಳನ್ನು ಮಾತ್ರ ಕೊನೆ ಇರದ ಶೋಕಕ್ಕೆ ನೂಕಿದೆ.

1968ರಲ್ಲಿ ಖೆಡ್ಡಾ ವಿಧಾನದಲ್ಲಿ ಇದೇ ಕಾಕನಕೋಟೆ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿದ ಬಳಿಕ ಕೊಡಗಿನ ದುಬಾರೆ ಶಿಬಿರಕ್ಕೆ ಅವನನ್ನು ಕಳಿಸಲಾಗಿತ್ತು. ಮತ್ತೆ ಅಲ್ಲಿಂದ ಬಳ್ಳೆ ಹಾಡಿಗೆ ಬಂದು ಇಲ್ಲಿಯೇ ಹದಿಹರೆಯದ ತುಂಟತನಗಳೊಂದಿಗೇ ನಾಲ್ಕು ದಶಕಕ್ಕೂ ಹೆಚ್ಚು ಕಾಲ ಗಂಭೀರನಾಗಿ ಬೆಳೆದ ಅರ್ಜುನ, ಈ ಕುಟುಂಬಗಳಿಗಷ್ಟೇ ಅಲ್ಲದೆ, ಈ ಭಾಗದ ಸುತ್ತಮುತ್ತಲಿನ ಹಳ್ಳಿಜನರೆಲ್ಲರಿಗೂ ‘ಕಾಕನಕೋಟೆಯ ಹೀರೊ’ ಆಗಿದ್ದ.


ಹೀಗಾಗಿಯೇ, ಕೋಟೆಯಿಂದ ಬಳ್ಳೆ ಹಾಡಿಯವರೆಗೆ ದಾರಿಯುದ್ದಕ್ಕೂ ಸಿಗುವ ಹಳ್ಳಿಗಳಲ್ಲಿ ಅರ್ಜುನನ ಆಳೆತ್ತರದ ಬ್ಯಾನರ್‌ಗಳನ್ನು ಜನ ಕಟ್ಟಿ ‘ಕನ್ನಡದ ಕಂದ ಅರ್ಜುನ, ವಿ ಮಿಸ್ ಯೂ ಲೆಜೆಂಡ್’ ಎಂದು ಬರೆದಿದ್ದರು. 64 ವರ್ಷ ಬದುಕಿದ್ದ ಅವನು ನಿಜಕ್ಕೂ ಕನ್ನಡ ನಾಡು ಮತ್ತು ಕಾಡಿನ ಲೆಜೆಂಡ್.

ಬಳ್ಳೆಗೆ ಬಂದಾಗಿನಿಂದ ಸುಮಾರು ನಾಲ್ಕು ದಶಕ ಕಾಲ ಅರ್ಜುನನನ್ನು ಮಾವುತ ದೊಡ್ಡಮಾಸ್ತಿಯವರ ಕುಟುಂಬ ಸಾಕಿತ್ತು. ನಂತರ, ತಮ್ಮ ಕೈಗೆ ಬಂದ ಮೇಲೆ ಕೊನೆವರೆಗೂ ನೋಡಿಕೊಂಡ ಮಾವುತರಾದ ದೊಡ್ಡಪ್ಪಾಜಿ ಮತ್ತು ವಿನುವಿನ ಕುಟುಂಬಕ್ಕೆ ಅವನು ದೇವರೇ ಆಗಿದ್ದ. ಏಕೆಂದರೆ, ಅವನ ಸೇವೆ ಎಂದರೆ ಅವರಿಗೆ ಆನೆ ಸೇವೆ ಅಲ್ಲ, ಗಣಪತಿ ಸೇವೆ. ಅದು ಅವರ ಮನೆ ದೇವರು. ಅರ್ಜುನನ ಎಲ್ಲ ಏಳು–ಬೀಳುಗಳಿಗೆ ಈ ಎರಡು ಕುಟುಂಬಗಳೇ ಜೀವಂತ ಸಾಕ್ಷಿ.

‘ಅದಕ್ಕೆ ವಯಸ್ಸಾಯ್ತು ಅಂತ ಅಂಬಾರಿ ಹೊರೋದರಿಂದ ರಿಟೈರ್‌ಮೆಂಟ್ ಕೊಟ್ರು. ಆದರೆ ಹುಲಿ, ಆನೆ ಹಿಡಿಯೋದಕ್ಕೆ ಕರ್ಕೊಂಡು ಹೋಗೋವಾಗ ವಯಸ್ಸಾಗಿರಲಿಲ್ಲವೇ’ ಎಂಬುದು ಈ ಜೀವಗಳು ಸಂಕಟದಿಂದ ಕೇಳುವ ಪ್ರಶ್ನೆ.

ವಿನುವಿನ ತಂದೆ ದೊಡ್ಡಪ್ಪಾಜಿ ಹತ್ತು ಬಾರಿ ದ್ರೋಣನ ಜೊತೆ ಅಂಬಾರಿ ಹೊತ್ತಿದ್ದವರು. ಅವರ ಎರಡನೇ ಮಗ ರಾಜು, ಅರ್ಜುನನೊಂದಿಗೆ ಕಾವಾಡಿಯಾಗಿದ್ದರು. ಅವರ ಮನೆಯ ಹೆಂಗಸರು, ಚಿಕ್ಕಮಕ್ಕಳಾದಿಯಾಗಿ ಎಲ್ಲರಿಗೂ ಅರ್ಜುನ ಆಪ್ತಸ್ನೇಹಿತನಂತಿದ್ದ. ಈ ಕುಟುಂಬಕ್ಕೆ ಅರ್ಜುನನೊಂದಿಗೆ ಐದು ವರ್ಷದ ನಂಟು.

ಆದರೆ, ದೊಡ್ಡಮಾಸ್ತಿಯವರ ಕುಟುಂಬಕ್ಕೆ ಅರ್ಜುನನೊಂದಿಗೆ ದಶಕಗಳ ನಂಟು. ಚಿಕ್ಕವನಿದ್ದಾಗ ದುಬಾರೆಯಲ್ಲಿ ಮಾವುತ ಸಣ್ಣಪ್ಪನವರ ಕೈಯಲ್ಲಿ ಪಳಗಿ, ಮತ್ತೆ ಬಳ್ಳೆ ಹಾಡಿಗೆ ಬಂದ ಕೆಲ ದಿನಗಳಲ್ಲೇ ಮಾವುತ ಕೂಸ ಅವರಿಂದ ದೊಡ್ಡಮಾಸ್ತಿಯವರಿಗೆ ಅರ್ಜುನನ ಉಸ್ತುವಾರಿ ಬಿದ್ದಿತ್ತು. ಮಕ್ಕಳೊಂದಿಗೆ ಮತ್ತೊಂದು ಮಗುವೆಂಬಂತೆ ಮನೆ–ಕಾಡು ಎರಡೂ ಕಡೆ ಅವನು ಬೆಳೆದ.



ಅರ್ಜುನನ ಹೀರೊ ಮಾಡಿದ ದೊಡ್ಡಮಾಸ್ತಿ

‘ಎಲ್ಲರಿಂದಲೂ ಕೇಡಿ ಎಂದೇ ಕರೆಸಿಕೊಂಡು, ಮೂಲೆಗುಂಪಾಗಿದ್ದ ಅರ್ಜುನನನ್ನು ಹೀರೊ ಮಾಡಿದ್ದೇ ನಮ್ಮಪ್ಪ ದೊಡ್ಡಮಾಸ್ತಿ’ ಎನ್ನುತ್ತಾರೆ ಅವರ ದೊಡ್ಡ ಮಗ ಬೋಳ.

‘ಅರ್ಜುನ ಯಾವತ್ತಿಗೂ ಹಸಿದು ಮಲಗೋ ಹಂಗಿರಲಿಲ್ಲ. ಆನೆ ರೇಷನ್ ಅಂಗಡಿಯಲ್ಲಿ ಕೊಡುತ್ತಿದ್ದ ಆಹಾರದ ಜೊತೆಗೆ ಮನೆಯಲ್ಲೂ ಬೇಯಿಸಿ ಹಾಕಲು ಅಪ್ಪ ನಮಗೆ ಹೇಳುತ್ತಿದ್ದರು. ಅಷ್ಟು ದೊಡ್ಡ ಜೀವಕ್ಕೆ ಇಷ್ಟೇ ಆಹಾರಾವೇ ಎನ್ನುತ್ತಿದ್ದರು’ ಎಂದು ಕಣ್ಣೀರಾದರು.

ಕಾಳಗಕ್ಕಿಳೀತಿದ್ದ ಮರ್ಕಾ..!

‘ಕಾಡಿಗೆ ಸೊಪ್ಪು, ಸೆದೆ ತರಲು ಅರ್ಜುನನೊಂದಿಗೆ ಹೋದಾಗ ಕಾಡಾನೆ ಏನಾದರೂ ಎದುರಾದರೆ, ಮೊದಲು ನನ್ನನ್ನು ಮರ ಹತ್ತಿಸಿ, ಸೇಫ್ ಮಾಡಿ ಆಮೇಲೆ ಫೈಟಿಂಗ್‌ಗೆ ಇಳೀತಿತ್ತು. ಎಂಥ ದಟ್ಟ ಕಾಡಿನಲ್ಲೇ ಇದ್ದರೂ ಮರ್ಕಾ ಎನ್ನುತ್ತಿದ್ದಂತೆ ಓಡಿ ಬರ್ತಿತ್ತು’ ಎಂದು ತಂದೆ ದೊಡ್ಡಮಾಸ್ತಿ ಹೇಳುತ್ತಿದ್ದುದು ಅವರ ಎರಡನೇ ಮಗ ಸಣ್ಣಪ್ಪನವರ ನೆನಪಿನಲ್ಲಿದೆ. ಅದು ರೋಚಕ ಕತೆಯಾಗಿ ಅವರ ಮಕ್ಕಳಲ್ಲಿ ನೆಲೆಸಿದೆ! ‘ಮರ್ಕಾ’ ಎಂಬುದು ಅರ್ಜುನನ ಮತ್ತೊಂದು ಹೆಸರು.

ದೊಡ್ಡಮಾಸ್ತಿಯ ಕಕ್ಕುಲತೆ

ಅರ್ಜುನನನ್ನು ಸಾಕುವಲ್ಲಿ ಸಹಾಯಕರ ಶ್ರಮದ ಬಗ್ಗೆ ತೃಪ್ತಿಗೊಳ್ಳದ ದೊಡ್ಡಮಾಸ್ತಿ, ಮೈಸೂರು ಅರಮನೆಯ ಆನೆಗಳನ್ನು ನೋಡಿಕೊಳ್ಳುತ್ತಿದ್ದ ತಮ್ಮಿಬ್ಬರು ಮಕ್ಕಳಾದ ಬೋಳ ಮತ್ತು ಸಣ್ಣಪ್ಪನ ಪೈಕಿ ಎರಡನೆಯವನನ್ನು ಜೊತೆಗೆ ಸೇರಿಸಿಕೊಂಡರು. ತಂದೆಯ ನಿಧನದ ನಂತರ ಸಣ್ಣಪ್ಪ ಮುಂದುವರಿದರು.

ಅಪ್ಪನಿಗೆ ದುಂಬಾಲು ಬಿದ್ದು ಅರ್ಜುನನ ಮೇಲೆ ಹತ್ತುತ್ತಿದ್ದ ನೆನಪುಗಳ ಜೊತೆಗೆ, ಸಣ್ಣಪ್ಪನವರಿಗೆ, ಅದೇ ರೀತಿ ದುಂಬಾಲು ಬೀಳುತ್ತಿದ್ದ ತಮ್ಮ ಮಕ್ಕಳನ್ನೂ ಅರ್ಜುನನ ಮೇಲೆ ಹತ್ತಿಸುತ್ತಿದ್ದ ನೆನಪುಗಳೂ ಇವೆ. ಅರ್ಜುನ ನಡೆದು ಬರುತ್ತಿದ್ದರೆ, ಅವರಿಗೆ ಅಪ್ಪನೇ ಬರುತ್ತಿದ್ದಾನೆಂಬಂತೆ ಕಾಣುತ್ತಿತ್ತು. ಹೀಗೆ ನಾಲ್ಕು ತಲೆಮಾರಿನ ಬದುಕು ಅರ್ಜುನನೊಂದಿಗೆ ಬೆಸೆದುಕೊಂಡಿದೆ.

ಅರ್ಜುನ ಭೌತಿಕವಾಗಿ ಸತ್ತಿರಬಹುದು. ಆದರೆ ಅವರೆಲ್ಲರ ಎದೆಯಲ್ಲಿ ಜೀವಂತವಾಗಿದ್ದಾನೆ.

ಸಣ್ಣಪ್ಪನವರ ಮಾತಿನಲ್ಲೇ ಹೇಳುವುದಾದರೆ, ‘ಅರ್ಜುನನನ್ನು ಅವರು ನಮ್ಮಿಂದ ಕಿತ್ತುಕೊಂಡಿರಬಹುದಷ್ಟೇ. ಆದರೆ ಅದು ನಮ್ಮ ಮನಸ್ಸಿನಲ್ಲಿದೆ. ನಮಗೆ ಅದು ಅನ್ನದಾನ ಮಾಡಿ ಹೊರಟುಹೋಯಿತು.’

ಅರ್ಜುನನ ಉಸ್ತುವಾರಿ ವಹಿಸುವುದು ಕಾಕನಕೋಟೆಯ ಅರಣ್ಯದ ಮಾವುತ, ಕಾವಾಡಿಗಳಿಗೆ ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತು. ಈ ಪ್ರತಿಷ್ಠೆಗಾಗಿಯೇ ಎರಡೂ ಕುಟುಂಬಗಳ ಹಲವು ಬಗೆಯ ಮೇಲಾಟ–ಸೆಣಸಾಟಗಳೂ ಅರಣ್ಯ ಇಲಾಖೆಯಲ್ಲಿ ಸಂಚಲನೆಗೂ ಕಾರಣವಾಗಿತ್ತು. ಕೊನೆಗೆ ದೊಡ್ಡಪ್ಪಾಜಿಯ ಮಕ್ಕಳಾದ ಮಾವುತ ವಿನು ಮತ್ತು ಕಾವಾಡಿ ರಾಜು ಅವರಿಗೆ ವಹಿಸಲಾಗಿತ್ತು. ಅರ್ಜುನನನ್ನು ಕಳೆದುಕೊಂಡು ಸಂಕಟದಲ್ಲಿರುವ ಈ ಎರಡೂ ಕುಟುಂಬಗಳ ನೋವು ಕಡಿಮೆ ಮಾಡಲು ಸದ್ಯ ಯಾವುದೇ ಮುಲಾಮಿಲ್ಲ, ಭಾರವಾದ ನೆನಪುಗಳ ಯಾನ ಬಿಟ್ಟು.

‘ಆನೆ ನಡೆದಿದ್ದೇ ದಾರಿ’ ಎಂಬ ಮಾತು ಎಲ್ಲ ಆನೆಗಳಿಗೂ ಅನ್ವಯಿಸಲಾರದು. ಆದರೆ, ಅರ್ಜುನ ಆ ಮಾತಿಗೆ ಅನ್ವರ್ಥವಾಗಿಯೇ ಬದುಕಿದ್ದ.

ಶಕ್ತಿಗಾಗಿ ಸಂಘಟನಾ ಸಮಾವೇಶ

ಇಂದು(ಡಿ.10) ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತಮಹೋತ್ಸವವು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಈಡಿಗರ ಸಂಘದ ನಡೆಗಳು ಹಾಗೂ ಸಮುದಾಯದ ಹೆಜ್ಜೆಗುರುತುಗಳ ಮೆಲುಕು...


ಕೆ.ಎನ್. ಗುರುಸ್ವಾಮಿ ಅವರು 1958ರ ನವೆಂಬರ್ 10ರಂದು ಬೆಂಗಳೂರಿನಲ್ಲಿ ನಡೆದ ಆರ್ಯ ಈಡಿಗರ ಸಂಘದ ಸಮ್ಮೇಳನದಲ್ಲಿ ಮೈಸೂರಿನ ಮಹಾರಾಜರಾಗಿದ್ದ ಹಾಗೂ ಮೈಸೂರಿನ ಆಗಿನ ರಾಜ್ಯಪಾಲರೂ ಆಗಿದ್ದ ಹಿಸ್ ಹೈನೆಸ್ ಜಯಚಾಮರಾಜೇಂದ್ರ ಒಡೆಯರ್ ಅವರ ಮುಂದೆ ತಮ್ಮ ಮಾತುಗಳನ್ನು ಪ್ರಸ್ತುತಪಡಿಸಿದರು
–ಕೆ.ಎನ್. ಹರಿಕುಮಾರ್ ಅವರ ‘ಅಜ್ಜ–ಅಜ್ಜಿ ನೆನಪುಗಳು’ ಕೃತಿಯಿಂದ ಬಳಸಿದ ಚಿತ್ರ

ಲಕ್ಷ್ಮಣ ಕೊಡಸೆ

ದೇಶದಲ್ಲಿ ಬ್ರಿಟಿಷರ ಆಳ್ವಿಕೆ 1857ರ ನಂತರ ಸ್ಥಿರಗೊಂಡು ಶಿಕ್ಷಣವನ್ನು ಸಮಾಜದ ಎಲ್ಲ ವರ್ಗಗಳಿಗೆ ಮುಕ್ತವಾಗಿ ತೆರೆದಿದ್ದರೂ ಕರ್ನಾಟಕದ ವಿವಿಧ ಸಮುದಾಯಗಳಲ್ಲಿ ಜಾಗೃತಿ ಮೂಡಿದ್ದು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ. ಶಿಕ್ಷಣ, ಸಂಘಟನೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳುವ ಸಮಾನ ಉದ್ದೇಶದಿಂದ ವೀರಶೈವ ಮಹಾಸಭೆ (1904), ಒಕ್ಕಲಿಗರ ಸಂಘ (1906) ಅಸ್ತಿತ್ವಕ್ಕೆ ಬಂದವು. ಕುರುಬರ ಸಂಘ ಮತ್ತು ದೇವಾಂಗ ಸಂಘಗಳು 1923-24ರ ಸುಮಾರಿಗೆ ರೂಪುಪಡೆದವು.

ಅಂದಿನ ಮೈಸೂರು ಸಂಸ್ಥಾನದಲ್ಲಿ ಅಬಕಾರಿ ವ್ಯವಹಾರವನ್ನು ಬೆಳೆಸಿದವರಲ್ಲಿ ಕೆ.ನೆಟ್ಟಕಲ್ಲಪ್ಪನವರು ಪ್ರಮುಖರು. ಆಂಧ್ರಪ್ರದೇಶದ ರಾಯದುರ್ಗದ ಕಣೇಕಲ್‌ನವರಾಗಿದ್ದ ನೆಟ್ಟಕಲ್ಲಪ್ಪನವರು ಅಬಕಾರಿ ಕಂಟ್ರಾಕ್ಟ್ ಮಾಡಲು ಬೆಂಗಳೂರಿಗೆ ಬಂದು ನೆಲೆಸಿದರು. ಅವರ ದಾನ, ಧರ್ಮ ಹಾಗೂ ಇನ್ನಿತರ ಸೇವಾಕಾರ್ಯಗಳನ್ನು ಮೆಚ್ಚಿದ ಅಂದಿನ ಪ್ರಭುತ್ವ ಕಣೇಕಲ್ ನೆಟ್ಟಕಲ್ಲಪ್ಪನವರಿಗೆ ‘ರಾವ್ ಸಾಹೇಬ್’ ಬಿರುದನ್ನು ಕೊಟ್ಟು ಗೌರವಿಸಿತ್ತು.

ಅವರು ಬೆಂಗಳೂರಿಗೆ ಬರುವ ಮೊದಲು ಈಡಿಗ ಸಮುದಾಯದ ಸಂಘಟನೆಗೆ ಸಂಬಂಧಿಸಿ 1910ರ ಸುಮಾರಿಗೆ ಬಳ್ಳಾರಿಯಲ್ಲಿ ಪ್ರಯತ್ನ ನಡೆದಿತ್ತು. ಅವರ ಮುಂದಾಳತ್ವದಲ್ಲಿ ಜನಾಂಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ವಿದ್ಯಾರ್ಥಿನಿಲಯ 1914ರಲ್ಲಿ ಬಳ್ಳಾರಿಯಲ್ಲಿ ಸ್ಥಾಪನೆಗೊಂಡಿತು. ಅದರ ಮುಂದುವರಿಕೆಯಾಗಿ 1944ರ ವೇಳೆಗೆ, ರಾವ್ ಸಾಹೇಬ್ ನೆಟ್ಟಕಲ್ಲಪ್ಪನವರ ಹಿರಿಯ ಪುತ್ರ ಕೆ. ಎನ್. ಗುರುಸ್ವಾಮಿಯವರ ಮುಂದಾಳುತನದಲ್ಲಿ ಈಡಿಗರ ಸಂಘಟನೆಗೆ ಚಾಲನೆ ಲಭಿಸಿತು. ಗುರುಸ್ವಾಮಿಯವರ ವ್ಯವಹಾರದಲ್ಲಿ ಸಹಭಾಗಿತ್ವ ಹೊಂದಿದ್ದ ಕೆ.ವೆಂಕಟಸ್ವಾಮಿಯವರ ಒತ್ತಾಸೆಯಿಂದ 1944ರ ಮೇ 10ರಂದು ಆರ್ಯ ಈಡಿಗರ ಸಂಘ ಅಸ್ತಿತ್ವಕ್ಕೆ ಬಂದಿತ್ತು. ಕೆ.ಎನ್.ಗುರುಸ್ವಾಮಿಯವರು ಸಂಘ ಸ್ಥಾಪನೆಗೆ ಮೊದಲೇ ಸುಲ್ತಾನ್ ಪೇಟೆಯ ತಮ್ಮ ಗಾಡಿಖಾನೆಯಲ್ಲಿ ವಿದ್ಯಾರ್ಥಿಗಳಿಗಾಗಿ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಚಿಕ್ಕಮಾವಳ್ಳಿಯಲ್ಲಿ ಒಂದು ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಮುಂದೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಸ್ವಂತ ಕಟ್ಟಡದಲ್ಲಿ ವಿದ್ಯಾರ್ಥಿನಿಲಯ ಸ್ಥಾಪನೆ ಆಯಿತು.


ಕೆ. ಎನ್. ಗುರುಸ್ವಾಮಿ


ಕೆ. ವೆಂಕಟಸ್ವಾಮಿ


ಕೆ.ಎ. ನೆಟ್ಟಕಲ್ಲಪ್ಪ

ಗುರುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಈಡಿಗರ ಪುರೋಭಿವೃದ್ಧಿಗಾಗಿ 1958ನೇ ನವೆಂಬರ್ 9 ಮತ್ತು 10ರಂದು ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದ ಪ್ರಥಮ ಈಡಿಗರ ಸಮ್ಮೇಳನದಲ್ಲಿ ಕೆಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಈಡಿಗರು, ಬಿಲ್ಲವರು, ನಾಮಧಾರಿಗಳು, ಹಳೇಪೈಕರು, ದೀವರು ಮತ್ತು ಈಳಿಗರು ಎಂಬ ಭಿನ್ನ ಭಿನ್ನವಾದ ಪಂಗಡಗಳು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿದ್ದು, ಇಡೀ ಜನಾಂಗದ ಏಕತೆ ಮತ್ತು ಪುರೋಭಿವೃದ್ಧಿಗಾಗಿ ಈ ಎಲ್ಲ ಪಂಗಡಗಳವರೂ ಸೇರಿದ ಈ ಸಂಘಕ್ಕೆ ‘ಮೈಸೂರು ಪ್ರದೇಶ ಆರ್ಯ ಈಡಿಗರ ಸಂಘ’ ಎಂದು ನಾಮಕರಣ ಮಾಡಲು ಸಮ್ಮೇಳನದಲ್ಲಿ ನಿರ್ಣಯಿಸಲಾಯಿತು.

ಈಡಿಗ ಸಂಘದ ಎರಡನೇ ಸಮ್ಮೇಳನವು ಮೈಸೂರಿನಲ್ಲಿ 1961ನೇ ಜನವರಿಯಲ್ಲಿ ಸಮಾವೇಶಗೊಂಡಿತ್ತು. ಅಧಿವೇಶನವನ್ನು ಆಂಧ್ರದ ಮಾಜಿ ಮಂತ್ರಿ ಲಚ್ಚಣ್ಣನವರು ಉದ್ಘಾಟಿಸಿದರು. ಎರಡನೇ ದಿನದ ಸಮ್ಮೇಳನವನ್ನು ಉದ್ಘಾಟಿಸಿದ ಕೇರಳದ ಮಾಜಿ ಮುಖ್ಯಮಂತ್ರಿಯಾಗಿದ್ದ ಆರ್. ಶಂಕರ್, ಕೇರಳದಲ್ಲಿ ಈ ಜನಾಂಗದವರು (ಈಳವರು) ಸಂಘಟಿತರಾದ ರೀತಿ, ಎದುರಿಸಿದ ಸಮಸ್ಯೆಗಳನ್ನು ವಿವರಿಸಿದ್ದರು.

ಮೈಸೂರಿನಲ್ಲಿ ಈಡಿಗರ ಎರಡನೇ ಸಮ್ಮೇಳನವು ನಡೆದ ಸಂದರ್ಭದಲ್ಲಿಯೇ ಪ್ರಥಮ ಯುವಕ ಸಮ್ಮೇಳನವೂ ನಡೆಯಿತು. ಅಲ್ಲಿ ಕೆ.ಎನ್. ಗುರುಸ್ವಾಮಿಯವರ ದತ್ತುಪುತ್ರ ಕೆ.ಎ.ನೆಟ್ಟಕಲ್ಲಪ್ಪ ಅವರು ಯುವಕ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಕೇಂದ್ರ ಸಂಘವು ಕೆ.ಎ. ನೆಟ್ಟಕಲ್ಲಪ್ಪನವರನ್ನು ಈಡಿಗ ವಿದ್ಯಾರ್ಥಿನಿಲಯ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿತು.

ಯುವಕ ಸಂಘವು, ರಾಜಕುಮಾರ್ ಅವರ ತಂಡದವರಿಂದ ಬೆಂಗಳೂರು ವಿದ್ಯಾರ್ಥಿನಿಲಯದ ಸಹಾಯಾರ್ಥ ಬೆಂಗಳೂರಿನ ಪುರಭವನದಲ್ಲಿ ‘ಬೇಡರ ಕಣ್ಣಪ್ಪ’ ನಾಟಕ ಪ್ರದರ್ಶನವನ್ನು ಏರ್ಪಡಿಸಿ 28 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿತು. ಈ ಹಣವನ್ನು ಬೆಂಗಳೂರು ಈಡಿಗ ಸಂಘದ ವಿದ್ಯಾರ್ಥಿನಿಲಯದ ಮುಂಭಾಗದ ಕಟ್ಟಡದ ವಿಸ್ತರಣೆ ಕಾರ್ಯಕ್ಕೆ ಉಪಯೋಗಿಸಲಾಯಿತು.

ಕೆ.ಎ.ನೆಟ್ಟಕಲ್ಲಪ್ಪನವರ ಪ್ರೇರಣೆಯಂತೆ ಎಂ.ಕೆ. ಶ್ರೀನಿವಾಸ್ ಅವರಿಂದ ಮೈಸೂರಿನಲ್ಲಿ ವಿದ್ಯಾರ್ಥಿನಿಲಯ ಆರಂಭವಾಯಿತು. ಬೆಂಗಳೂರು ವಿದ್ಯಾರ್ಥಿನಿಲಯದಲ್ಲಿದ್ದು ಓದಿ ವಕೀಲರಾಗಿದ್ದ ಕಾಗೋಡು ತಿಮ್ಮಪ್ಪನವರು ಸಾಗರದಲ್ಲಿ ವಿದ್ಯಾರ್ಥಿನಿಲಯ ಆರಂಭಿಸಿದರು.

12ನೇ ಪುಟಕ್ಕೆ...

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಇತ್ತೀಚೆಗೆ ಪ್ರದರ್ಶಿತವಾದ 'ಗ್ಲಾನಿ' ನಾಟಕವು ಹಲವು ವಾಗ್ವಾದಗಳೊಂದಿಗೆ ಸಮಕಾಲೀನ ಪ್ರಶ್ನೆಯೊಂದನ್ನು ಮೇಳೈಸಿಕೊಂಡಿದೆ.

ಪೌರಾಣಿಕ ಆವರಣ ಸಮಕಾಲೀನ ಆಯಾಮ



'ಗ್ಲಾನಿ' ನಾಟಕದಲ್ಲಿ ರಾಮ ಮತ್ತು ಕಾಲಪುರುಷ ನಡುವಿನ ಸಂವಾದದ ದೃಶ್ಯ

ಪ್ರಕಾಶ ಕುಗ್ವೆ

ರಂಗಭೂಮಿ

ಕಾಲಕ್ಕೆ ಎಲ್ಲರೂ ಅಧೀನರೇ; ಅದು ಮನುಷ್ಯನಾಗಿರಬಹುದು, ದೇವರಾಗಿರಬಹುದು. ಅವರವರ ಆಯುಸ್ಸು ಕೊನೆಗೊಳ್ಳಲೇಬೇಕು. ಈ ಸಾರ್ವಕಾಲಿಕ ಸತ್ಯವನ್ನು ಪೌರಾಣಿಕ ಆವರಣದಲ್ಲಿ ಸಮಕಾಲೀನ ಆಯಾಮದೊಂದಿಗೆ ಶೋಧಿಸಲು ಹೊರಟಿದೆ 'ಗ್ಲಾನಿ' ನಾಟಕ.

ಇದು ರಾಮಾಯಣ ಮೂಲದ್ದು. ಮಂಕುಹಿಡಿದ ಸ್ಥಿತಿ ಅಥವಾ ಖಿನ್ನತೆಗೆ 'ಗ್ಲಾನಿ' ಎಂದೇ ಅರ್ಥೈಸಲಾಗುತ್ತದೆ. ತ್ರೇತಾಯುಗದಲ್ಲಿ ತನ್ನ ಅವತಾರವನ್ನು ಅಂತ್ಯ ಮಾಡಿಕೊಳ್ಳಬೇಕಾದ ರಾಮ ಅದಕ್ಕೆ ಮನಸ್ಸು ಮಾಡುತ್ತಿಲ್ಲ. ಅನಿವಾರ್ಯವಾಗಿ ನಾರದನು ಕಾಲಪುರುಷ ಮತ್ತು ದೂರ್ವಾಸ ಮುನಿಯೊಂದಿಗೆ ತಂತ್ರ ಹೂಡುತ್ತಾನೆ. ಕೊನೆಗೂ ರಾಮ ದೇಹತ್ಯಾಗ ಮಾಡಬೇಕಾಗುತ್ತದೆ. ಈ ಅಂಶವನ್ನೇ ಪ್ರಧಾನವಾಗಿಟ್ಟುಕೊಂಡು ರಾಮನ ಅವಸಾನದ ಅನಿವಾರ್ಯ, ಕೃಷ್ಣಾವತಾರದ ಅಗತ್ಯವನ್ನು ಈ ಹೊತ್ತಿನ ಬಿಕ್ಕಟ್ಟುಗಳಿಗೆ ನಾಟಕ ಮುಖಾಮುಖಿಯಾಗಿಸುತ್ತದೆ.

ವಾಚಿಕ ಗುಣಲಕ್ಷಣಗಳೇ ಹೆಚ್ಚಿರುವ, ಮತ್ತೊಂದು ತಾಳಮದ್ದಲೆ ಪ್ರಸಂಗವಾಗಿ ರೂಪುಗೊಳ್ಳಬಹುದಾಗಿದ್ದ ಈ ಅವತಾರದ ಅಂತ್ಯದ ಸನ್ನಿವೇಶ-ಸಂದರ್ಭಕ್ಕೆ ಲೇಖಕ ಜಿ.ಎಸ್. ಭಟ್ಟರು ತಮ್ಮ ಸೃಜನಶೀಲತೆಯಿಂದ ನಾಟಕೀಯ ಗುಣ ದಕ್ಕಿಸಿದ್ದಾರೆ. ಭಾರತೀಯ ರಂಗಭೂಮಿಯ ಈ ಹೊತ್ತಿನ ಸತ್ವಶಾಲಿ ನಿರ್ದೇಶಕರಲ್ಲಿ ಒಬ್ಬರಾದ ಚಿದಂಬರರಾವ್ ಜಂಬೆ ಅವರು ಹೊಸದೊಂದು ರಂಗಸಾಧ್ಯತೆ ಕಲ್ಪಿಸುತ್ತಾರೆ. ಇವರಿಬ್ಬರ ಹದಪಾಕದಿಂದಾಗಿ ಈ ನಾಟಕ ರಂಗದಲ್ಲಿ ಪರಿಣಾಮಕಾರಿ ಪ್ರಯೋಗವಾಗಿ ಸಾಗರದಲ್ಲಿ ಈಚೆಗೆ ಪ್ರದರ್ಶನ ಕಂಡಿತು.

ಅಧಿಕಾರದ ಮಂಪರಿನಲ್ಲಿದ್ದ ರಾಮನನ್ನು ಆತ್ಮಾವಲೋಕನಕ್ಕೆ ದೂಡಿ ಅವತಾರವನ್ನು ಪರಿಸಮಾಪ್ತಿಗೊಳಿಸಿಕೊಳ್ಳಲು ಈ ನಾಟಕ ಪ್ರೇರೇಪಿಸುತ್ತಲೇ ಯಾವುದಕ್ಕೂ ಅಳದಿರುವ, ಎಲ್ಲದಕ್ಕೂ ನಗುವ ಸಮಕಾಲೀನ ಆಡಳಿತದ ನಿರ್ಲಿಪ್ತ ನೇತಾರರ ವ್ಯಕ್ತಿತ್ವ, ವೈಖರಿಗಳಿಗೆ ಕನ್ನಡಿ ಹಿಡಿಯುತ್ತದೆ. ಪುರಂದರ ದಾಸರ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎನ್ನುವ ಮಾತು ನಾಟಕದ ಉದ್ದಕ್ಕೂ ಧ್ವನಿಸುತ್ತದೆ.

ಹಲವು ವಾಗ್ವಾದಗಳಿರುವ ಈ 'ಗ್ಲಾನಿ'ಯನ್ನು ಅತ್ಯಂತ ಸರಳ ರಂಗಸಜ್ಜಿಕೆಯಲ್ಲಿ ಆಪ್ತ ರಂಗಭೂಮಿ ಮೂಲಕ ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ದಾಟಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ.

ಬಹುಮುಖ್ಯವಾಗಿ ಇಲ್ಲಿನ ಸಂಭಾಷಣೆಗಳು ಗಮನಸೆಳೆಯುತ್ತವೆ. ರಾಮ ಮತ್ತು ಕಾಲಪುರುಷನ ನಡುವಿನ ಸಂವಾದವನ್ನಂತೂ ಸಮಕಾಲೀನ ಸಂದರ್ಭದ ಬಹುದೊಡ್ಡ ಚರ್ಚೆ ಎಂದೇ ಪರಿಗಣಿಸಬಹುದು. ಇಲ್ಲಿ ಕಾಲಪುರುಷನ ಪ್ರಶ್ನೆ ನಮ್ಮೆಲ್ಲರ ಪ್ರಶ್ನೆಯೂ ಹೌದು.

'ರಾಮ, ನಿನ್ನನ್ನು ಆರಾಧಿಸುವವರು ಶಿಷ್ಟರೆಂದೂ, ವಿರೋಧಿಸುವವರು ದುಷ್ಟರೆಂದೂ ಗುರುತಿಸುವಂತಾಯಿತು. ಕೊನೆಗೆ ಶಿಷ್ಟ ರಕ್ಷಣೆ, ದುಷ್ಟ ಶಿಕ್ಷಣೆ ಎನ್ನುವ ಪ್ರಜಾಪ್ರಿಯ ಘೋಷವಾಕ್ಯವಾಗಿ ಹೋಯಿತು'- ಕಾಲಪುರುಷನ ಈ ಪ್ರಶ್ನೆ ಸಮಕಾಲೀನ ವಿದ್ಯಮಾನದ ಪ್ರತಿಬಿಂಬವೂ ಹೌದು.

'ಪ್ರತಿ ಮಾತಿಗೂ ನಾನು ಸಾಮಾನ್ಯ ಮನುಷ್ಯ ಅಂತ ಹೇಳುತ್ತೀಯ. ಆದರೆ ಸಾಮಾನ್ಯ ಮನುಷ್ಯನಿಗಿಂತ ದೀರ್ಘ ಕಾಲ ಬದುಕಿ, ಅಧಿಕಾರ ಸುಖ ಅನುಭವಿಸಿಬಿಟ್ಟಿದ್ದೀಯ. ನಿನ್ನ ಜೀವನ ಮಹಾಪೂರದಲ್ಲಿ ಬೇಕಾದುದು, ಬೇಡದಿರುವುದು ಎಲ್ಲ ಸೇರಿಹೋಗಿವೆ. ಅನುಯಾಯಿಗಳು ಅತೃಪ್ತರಾಗಿದ್ದಾರೆ. ಅಧಿಕಾರ, ಅವಕಾಶ, ಆದಾಯ ಇವೆಲ್ಲವನ್ನು ಅನುಭವಿಸಬೇಕೆಂದು ನಿನ್ನೊಂದಿಗೇ ಹುಟ್ಟಿ, ನಿನಗಾಗಿ ಸಕಲವನ್ನೂ ತ್ಯಾಗ ಮಾಡುತ್ತಿರುವ ನಿನ್ನ ಸಹವರ್ತಿಗಳಿಗೂ ಹಂಬಲ ಇದ್ದೇ ಇರುತ್ತದೆಯಲ್ಲವೇ? ಪ್ರಾಪ್ತಿ ಸಿದ್ಧಿಗಳಲ್ಲಿ ಅವರಿಗೂ ಪಾಲು ಬೇಡವೇ? ಮತ್ತು ನೀನೇ ಎಲ್ಲವನ್ನೂ ನಿಯಂತ್ರಿಸುವುದೂ, ನೈತಿಕವಾಗಿ ಕಣ್ಗಾವಲು ಇಡುವುದೂ ಸಾಕು. ಯಾಕೆ ಇನ್ನೂ ಅರಸನಾಗಿರುವೆ ಎಂದು ನಾನು ಕೇಳುತ್ತಿಲ್ಲ; ಲೋಕ ಕೇಳುತ್ತಿದೆ' ಎನ್ನುವ ಕಾಲಪುರುಷನ ಪ್ರಶ್ನೆಗೆ ರಾಮನದು ಮೌನದ ಉತ್ತರ.

ಮತ್ತೊಂದು ಕಡೆಯಲ್ಲಿ ದೂರ್ವಾಸರು, 'ಸೀತೆಗಾಗಿ ಸಮುದ್ರಕ್ಕೇ ಸೇತುವೆ ನಿರ್ಮಿಸಿದೆ ಅಲ್ಲವೇ? ಅದು ಸೀತೆ ಮೇಲಿನ ಪ್ರೀತಿಗೋ? ಅಥವಾ ನಿನ್ನ ಅಹಂಕಾರಕ್ಕೋ'- ಪ್ರಶ್ನೆ ಮಾಡುತ್ತಾರೆ. ಆದರೆ, ಇದ್ಯಾವುದಕ್ಕೂ ರಾಮನಲ್ಲಿ ಸ್ಪಷ್ಟ ಉತ್ತರಗಳಿಲ್ಲ. ಅವನ ಹೊಯ್ದಾಟಗಳು ಅವನಿಗಷ್ಟೇ ಗೊತ್ತು. ಕೊನೆಗೂ ಪರಿಸಮಾಪ್ತಿಗೊಳ್ಳಲು ಅವನೇ ಅಣಿಯಾಗುತ್ತಾನೆ.

ನಾಟಕ ಆರಂಭವಾಗುವುದೇ ಸೀತೆ, ತನ್ನ ಹುಟ್ಟೂರು ಮಿಥಿಲೆ ನೆನಪಿಸಿಕೊಂಡು ಹಳಹಳಿಸುವುದರಿಂದ; ಸು.ರಂ. ಎಕ್ಕುಂಡಿ ಅವರ 'ಮಿಥಿಲೆ' ಕವಿತೆ ಸಂದರ್ಭಕ್ಕೆ ಸೂಕ್ತವಾಗಿದೆ. ಕಾಲಪುರುಷನ ಕಿವಿಗಳಿಗೆ ಹೂ ಮುಡಿಸಿದ್ದು, ಆಗಾಗ್ಗೆ ಧ್ವನಿವರ್ಧಕ ಕಿರುಗುಟ್ಟಿದ್ದು ಅಸ್ವಾದನೆಗೆ ಅಡ್ಡಿಯಾದವು. ಸಂಗೀತವು ನಾಟಕದ ಗುಣಾತ್ಮಕ ಅಂಶವಾಗಿದೆ.

ಈ ಪ್ರಯೋಗದಲ್ಲಿ ಕಲಾವಿದರದ್ದು ಪೈಪೋಟಿಯ ಅಭಿನಯ. ಬಹುತೇಕರೆಲ್ಲರೂ ಅನುಭವಿ ನಿರ್ದೇಶಕರು. ತಮ್ಮದೇ ನಾಟಕ ತಂಡಗಳನ್ನು ಕಟ್ಟಿ ರಾಜ್ಯದಾದ್ಯಂತ ಅಸಂಖ್ಯಾತ ನಟರನ್ನು ರೂಪಿಸಿದ ನಿರ್ದೇಶಕರು. ಅಭಿನಯಕ್ಕಾಗಿ ವೇದಿಕೆ ಹತ್ತದೆ ಹಲವು ದಶಕಗಳೇ ಕಳೆದಿವೆ. ಅವರೆಲ್ಲರೂ ಇಲ್ಲಿ ವಿನೀತ ನಟರಾಗಿ ರಂಗದಲ್ಲಿ ವಿಜೃಂಭಿಸಿದ್ದು ಈ ಪ್ರಯೋಗದ ಮತ್ತೊಂದು ವಿಶೇಷತೆ.

ಕೆ.ಜಿ. ಕೃಷ್ಣಮೂರ್ತಿ ಅವರು ರಾಮನ ಪಾತ್ರದಲ್ಲಿ ಜೀವಿಸಿದಂತೆ ಕಂಡರು. ಎಲ್ಲಿಯೂ ಅವರ ವಯಸ್ಸಿನ ಆಯಾಸ ಕಾಣಲಿಲ್ಲ. ದೀರ್ಘ ಸಂಭಾಷಣೆಯಲ್ಲೂ ಒಂದಿನಿತೂ ಏದುಸಿರು ಬಿಡಲಿಲ್ಲ. ಕಾಲಪುರುಷನಾಗಿ ಹುಲಗಪ್ಪ ಕಟ್ಟಿಮನಿ ಅವರ ಧ್ವನಿಪೂರ್ಣ ಮಾತು, ಭಾವನೆಗಳ ಏರಿಳಿತವನ್ನು ನೋಡಿಯೇ ಅನುಭವಿಸಬೇಕು. ದೂರ್ವಾಸನಾಗಿ ದೇವೇಂದ್ರ ಬೆಳೆಯೂರು, ನಾರದನ ಪಾತ್ರದಲ್ಲಿ ಗಣಪತಿ ಹೆಗಡೆ ಹಿತ್ಲಕೈ, ಇಂದ್ರನಾಗಿ ಮಂಜುನಾಥ ಜೇಡಿಕುಣಿ ಅವರದ್ದೂ ಅತಿರೇಕವಿಲ್ಲದ ಅಭಿನಯ.

ಸಾಗರದಲ್ಲಿ ಹೊಸ ರಂಗಪರಂಪರೆಗೆ 1948ರಲ್ಲೇ ನಾಂದಿ ಹಾಡಿದ್ದ 'ಉದಯ ಕಲಾವಿದರು' ಸಂಸ್ಥೆ ಈ ನಾಟಕವನ್ನು ಆಯೋಜಿಸಿದ್ದು ಹೆಗ್ಗಳಿಕೆ. ಹಳೇ ಬೇರುಗಳೆಲ್ಲವೂ ಹೀಗೆ ಸಂಘಟಿತಗೊಂಡು ಕನ್ನಡ ರಂಗಭೂಮಿಗೆ ಹೊಸ ಚಲನಶೀಲತೆ ದೊರಕಿಸಿಕೊಡಬೇಕಾದದ್ದು ಈ ಕಾಲದ ಅಗತ್ಯವೂ ಹೌದು.

ಎಂ.ಆರ್.ಬಾಳಿಕಾಯಿ ಅವರು ಧಾರವಾಡದಲ್ಲಿ ಹೊಸ ತಲೆಮಾರುಗಳಿಗೆ ಚಿತ್ರಕಲೆಯ ಬೇರು ಹಬ್ಬಿಸಿದವರು. ಅವರ ಜೀವಮಾನ ಸಾಧನೆಗೆ 'ಚಿತ್ರಕಲಾ ಶಿಲ್ಪಿ ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್' ಈಚೆಗೆ 'ಕುಂಚ ಕಲಾ ತಪಸ್ವಿ' ಪ್ರಶಸ್ತಿ ನೀಡಿ ಗೌರವಿಸಿದೆ.



ಮನುಷ್ಯನ ಮುಖವನ್ನು ಕೇಂದ್ರೀಕರಿಸಿ ಕಲಾವಿದ ಬಾಳಿಕಾಯಿ ರಚಿಸಿದ ಕಲಾಕೃತಿಗಳು

ದಕ್ಕಿದ್ದೆಲ್ಲದರ ಮೇಲೆ ಚಿತ್ರಕಲೆ

ಮಹಮ್ಮದ್ ಶರೀಫ್

'ರೀ ನಿಮಗ ಮುಖದ್ ಚಿತ್ರ ಬಿಡ್ಸಕ್ಕೇ ಬರವಲ್ಲು' ಎಂದು ತಮ್ಮ ಗುರು ನೇರವಾಗಿ ಹೇಳಿದಾಗ ಆ ಹಠವಾದಿ ಶಿಷ್ಯನಿಗೆ ಸಹಿಸಿಕೊಳ್ಳಲು ಆಗಲಿಲ್ಲ. ಒತ್ತಾಯ ಮಾಡಿ ಆ ಗುರುವನ್ನೇ ಎದುರಿನಲ್ಲಿ ಕೂರಿಸಿ ಅವರ ಚಿತ್ರ ಬರೆದುಕೊಟ್ಟರು! ಮುಂದೆ ಮುಖಭಾವಗಳ ಸೃಜನಶೀಲ ಅಭಿವ್ಯಕ್ತಿಗಳೇ ಅವರ ಚಿತ್ರಗಳ ಕೇಂದ್ರವಸ್ತುಗಳಾದವು. 'ಮುಖ ವಿಕಾರ'ಗಳನ್ನು ವಿಶಿಷ್ಟ, ಅಮೂರ್ತ ರೂಪಗಳಲ್ಲಿ ರಚಿಸಿ ಬೆರಗುಗೊಳಿಸಿದರು. ಅವರ ಜೀವಮಾನ ಸಾಧನೆಗಾಗಿ ಅದೇ ಗುರುಗಳ ಹೆಸರಿನ ಟ್ರಸ್ಟ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಧಾರವಾಡದ ಡಿ.ವಿ. ಹಾಲಭಾವಿ ಸ್ಮಾರಕ ಟ್ರಸ್ಟ್‌ನ 'ಕುಂಚ ಕಲಾ ತಪಸ್ವಿ' ಪ್ರಶಸ್ತಿಗೆ ಆಯ್ಕೆಯಾದ ಹಿರಿಯ ಕಲಾವಿದ ಮಹಾವೀರ ರಾಯಪ್ಪ ಬಾಳಿಕಾಯಿ ಅವರ ಕಲಾಶ್ರದ್ಧೆಗೆ ಪುಟ್ಟ ನಿದರ್ಶನವಿದು. ತಮ್ಮ ಗುರು ಡಿ.ವಿ. ಹಾಲಭಾವಿ ಹೆಸರಿನ ಟ್ರಸ್ಟ್‌ನಿಂದಲೇ ಪ್ರಶಸ್ತಿ ಸಿಕ್ಕಿರುವುದು ಅವರಿಗೆ ಹೆಮ್ಮೆ ಮೂಡಿಸಿದೆ.


ಎಂ.ಆರ್. ಬಾಳಿಕಾಯಿ ಎಂದೇ ಪ್ರಸಿದ್ಧರಾದ ಅವರು, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹೆಬ್ಬಾಳದವರು. ಚಿತ್ರಕಲಾ ಪದವಿ ವ್ಯಾಸಂಗಕ್ಕಾಗಿ ಧಾರವಾಡಕ್ಕೆ ಬಂದವರು ಪ್ರಸ್ತುತ ಸಾಧನಕೇರಿಯಲ್ಲಿ ದ.ರಾ. ಬೇಂದ್ರೆ ಅವರ ಮನೆಯ ಸಮೀಪದಲ್ಲೇ ಮನೆ ಮಾಡಿಕೊಂಡಿದ್ದಾರೆ. 83ರ ಇಳಿವಯಸ್ಸಿನಲ್ಲೂ ನಿರರ್ಗಳ ಮಾತು, ಓಡಾಟ, ಲವಲವಿಕೆ. ಪ್ರತಿದಿನ ಕನಿಷ್ಠ ಒಂದು ಚಿತ್ರವನ್ನಾದರೂ ಮಾಡಲೇಬೇಕೆಂಬ ಹಠ ಈಗಲೂ ಇದೆ.

ಬದುಕಿನ 40 ವರ್ಷಗಳನ್ನು ಚಿತ್ರಕಲಾ ಶಿಕ್ಷಕರಾಗಿಯೇ ಕಳೆದ ಅವರು, ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ತಮ್ಮ ವಿದ್ಯಾರ್ಥಿಗಳ ಸಾಧನೆ ಕಂಡು ರೋಮಾಂಚಿತರಾಗುತ್ತಾರೆ. ಧಾರವಾಡದ ಸರ್ಕಾರಿ ಚಿತ್ರಕಲಾ ಕಾಲೇಜಿನಲ್ಲಿ 27 ವರ್ಷ ಕೆಲಸ ಮಾಡಿ 1999ರಲ್ಲಿ ನಿವೃತ್ತರಾದ ಅವರು, ನಾಲ್ಕು ವರ್ಷ ಬಾದಾಮಿಯ ಶಿಲ್ಪ ಮತ್ತು ಚಿತ್ರಕಲಾ ಶಾಲೆಯಲ್ಲಿ ಗೌರವ ಉಪನ್ಯಾಸಕರಾಗಿ ದುಡಿದವರು.

ಹೊಸ ಸಾಧ್ಯತೆಗಳನ್ನು ಶೋಧಿಸುತ್ತ, ಕಲೆಯ ಬಲೆ ಹೆಣೆಯುವುದು ಅವರ ವಿಶೇಷತೆ. ಅವರಿಗೆ ಚಿತ್ರ ಬರೆಯಲು ಇಂಥದ್ದೇ ಪೇಪರ್ ಬೇಕೆಂಬ ನಿಯಮವಿಲ್ಲ. ಅವರ ಭಾವಾಭಿವ್ಯಕ್ತಿಗೆ ಕಂಡದ್ದೆಲ್ಲ ಕ್ಯಾನ್ವಾಸೇ. ತೆಂಗಿನ ಮರದ ನಾರಿನಲ್ಲಿ ಬರೆದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಚಿತ್ರ, ಬಾಳಿಕಾಯಿ ಅವರ ಪ್ರಯೋಗಶೀಲ ಪ್ರಯತ್ನಕ್ಕೆ ಹಿಡಿದ ಕೈಗನ್ನಡಿ. 'ಈ ಜಗತ್ತಿನಲ್ಲಿ ಯಾವುದೂ ವ್ಯರ್ಥವಲ್ಲ. ನಿಸರ್ಗವನ್ನು ಸರಿಯಾಗಿ ಬಳಸಿಕೊಳ್ಳುವುದನ್ನು ಜನರು ಕಲಿಯಬೇಕು. ಭಾವನೆಗಳನ್ನು ವ್ಯಕ್ತಪಡಿಸುವುದು ನನ್ನ ಉದ್ದೇಶವಷ್ಟೆ. ಬಸ್ ಟಿಕೆಟ್‌ಗಳ ಮೇಲೆಯೇ 60 ಚಿತ್ರಗಳನ್ನು ಬರೆದಿದ್ದೇನೆ' ಎಂದು ನಗುತ್ತಾರೆ ಅವರು.

ತೈಲವರ್ಣ, ಜಲವರ್ಣ, ಕ್ರಯಾನ್, ಅಕ್ರಿಲಿಕ್, ಜೆಲ್ ಪೆನ್... ಹೀಗೆ ಚಿತ್ರಕಲೆಗೆ ದಕ್ಕುವುದನ್ನೆಲ್ಲ ಅವರು ಬಳಸಿದ್ದಾರೆ. ಪತ್ರಿಕೆ, ಎಲೆಗಳ ಚೂರು ಬಳಸಿ ಕೊಲಾಜ್ ರೂಪದಲ್ಲಿ ಕೆಲವು ವಸ್ತು ಚಿತ್ರಣಗಳನ್ನು ರಚಿಸಿದ್ದು ಕಣ್ಸೆಳೆಯುವಂತಿದೆ.

ಒಮ್ಮೆ ಕವಿ ಚನ್ನವೀರ ಕಣವಿ ಅವರು ತಮ್ಮ ಕೃತಿಗೆ ಐದು ಚಿತ್ರಗಳನ್ನು ಬರೆಯುವಂತೆ ತಿಳಿಸಿದರು. ತಮ್ಮ ಮನೆಗೆ ಕರೆದು ಬಾಳಿಕಾಯಿ ಅವರಿಗೆ ಚಿತ್ರಕ್ಕೆ ಬೇಕಾದ ಐದು ವಿಷಯಗಳನ್ನು ವಿವರಿಸಿದರು. ಸಾಹಿತ್ಯದ ಧಾಟಿಯಲ್ಲಿದ್ದ ಅವು ಯಾವುವೂ ಅವರಿಗೆ ಅರ್ಥವೇ ಆಗಲಿಲ್ಲ. ಆದರೂ ಚಿತ್ರ ಬರೆಯಲು ಒಪ್ಪಿ ಒಂದೆರಡು ಬಾರಿ ಬರೆದುಕೊಟ್ಟಾಗ ಕಣವಿ ಅವರಿಗೆ ಹಿಡಿಸಲಿಲ್ಲ. ಮೂರನೇ ಬಾರಿ ಬರೆದಾಗಲೂ ಇಷ್ಟವಾಗದೆ, 'ಬಿಟ್ಟುಬಿಡ್ರಿ, ಸುಮ್ನ ತ್ರಾಸ್ ತಗೋಬ್ಯಾಡ್ರಿ' ಎಂದರು. 'ಇಲ್ಲ ಕಣವಿಯವರೇ ನಾನು ನಿಮಗೆ ಚಿತ್ರ ಬರೆದೇ ತೀರುವೆ. ಹತ್ತು ವರ್ಷವಾದ್ರೂ ಪರವಾಗಿಲ್ಲ. ನಾನು ನಿಲ್ಲಿಸಲಾರೆ' ಎಂದುಬಿಟ್ಟರು ಬಾಳಿಕಾಯಿ. ಅವರ ಹಠ ನೋಡಿದ ಕಣವಿಯವರು, 'ಒಂದು ಕೆಲ್ಸಾ ಮಾಡ್ರಿ, ನೀವು ಇಲ್ಲಿವರೆಗೆ ಬಿಡಿಸಿದ ಚಿತ್ರ ತಗೋಬರ್ರಿ. ಅದ್ರಾಗ ಬೇಕಾದ್ದ ನಾ ತಗೋತೀನಿ' ಎಂದಾಗ ಚಿತ್ರಗಳ ಚೀಲ ಹೊತ್ತು ತಂದು ಅವರ ಮುಂದಿಟ್ಟರು. ಅವುಗಳಿಂದ ಐದು ಸೂಕ್ತ ಚಿತ್ರಗಳನ್ನು ಆಯ್ದ ಕಣವಿ, 'ನಿಮಗ ಸುಮ್ನ ತ್ರಾಸ್ ಕೊಟ್ಟಂಗಾತಲ್ಲ, ನನಗ ಬೇಕಾಗಿದ್ದ್ ನೀವು ಮೊದಲೇ ಮಾಡಿಟ್ಟೀರಿ. ನನಗಿಂತ ಅಡ್ವಾನ್ಸ್ ಅದೀರಿ ನೀವು' ಎಂದರು.



ತಮ್ಮ ಮನೆಯ ಮೇಲಿರುವ ಗ್ಯಾಲರಿಯಲ್ಲಿ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಎಂ.ಆರ್. ಬಾಳಿಕಾಯಿ

ಪ್ರಜಾವಾಣಿ ಚಿತ್ರಗಳು: ಗೋವಿಂದರಾಜ ಜವಳಿ

ತಮ್ಮ ಮನೆಯ ಮೇಲೆ ನಿರ್ಮಿಸಿರುವ 'ಚಿತ್ರಮನೆ' ಗ್ಯಾಲರಿ ಅವರ ಕಾಯಕ ಕೇಂದ್ರ. ವಿಕಾಸ ನಗರದಲ್ಲಿರುವ 'ಎಂ.ಆರ್. ಬಾಳಿಕಾಯಿ ಆರ್ಟ್ ಗ್ಯಾಲರಿ'ಯಲ್ಲಿ ಅವರ ಹಲವಾರು ಚಿತ್ರಗಳನ್ನು ಜೋಡಿಸಿಡಲಾಗಿದೆ.

'ವೈವಿಧ್ಯಮಯ ರೇಖಾಚಿತ್ರಗಳು' ಅವರ ಪುಸ್ತಕ. ಕಳೆದ ಜನವರಿಯಲ್ಲಿ ನಡೆದ ಹುಕ್ಕೇರಿ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿರುವುದು ಅವರ ಪಾಲಿಗೆ ಅವಿಸ್ಮರಣೀಯ. 'ಒಬ್ಬ ಚಿತ್ರಕಲಾವಿದನನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದ್ದು ಸಣ್ಣ ವಿಚಾರವಲ್ಲ. ಅದಕ್ಕಿಂತ ದೊಡ್ಡ ಗೌರವ ಇನ್ನೇನಿದೆ' ಎಂದು ಹರ್ಷಗೊಳ್ಳುತ್ತಾರೆ ಅವರು.

ಹೊರೆ, ಸಂಕಟ, ಯಾತನೆಗಳನ್ನು ವ್ಯಕ್ತಗೊಳಿಸುವ ಮುಖಗಳು, ವಿಕಾರ ಮುಖಗಳು, ಇಲಸ್ಟ್ರೇಶನ್ ಮಾದರಿಯಲ್ಲಿ ಮೂಡಿದ ಮುಖಗಳು, ರೇಖಾಚಿತ್ರಗಳು ಥಟ್ಟನೆ ನೋಡುಗರನ್ನು ಸೆಳೆಯುತ್ತವೆ. ಜೊತೆಗೆ ನೀರಿನ ಅಲೆಗಳು ಉಕ್ಕಿ ಬರುವ ದೃಶ್ಯಗಳನ್ನು ಜಲವರ್ಣ ಹಾಗೂ ಅಕ್ರಿಲಿಕ್ ಬಳಸಿ ರಚಿಸಿದ್ದಾರೆ.

ಪುತ್ರ, ಕಲಾವಿದ ರಮೇಶ ಬಾಳಿಕಾಯಿ ಅವರು ತಂದೆಯ ಕಲಾ ಪ್ರೀತಿಗೆ ಸಹಕಾರ ನೀಡುತ್ತ, ಅವರ ಚೈತನ್ಯಕ್ಕೆ ಶಕ್ತಿ ತುಂಬುತ್ತಿದ್ದಾರೆ. ಇಳಿವಯಸ್ಸಿನಲ್ಲಿಯೂ ಕಲೆಯ ಧ್ಯಾನದಲ್ಲಿರುವ ಎಂ.ಆರ್.ಬಾಳಿಕಾಯಿ ಅವರಿಗೆ ತಮ್ಮ ಬಾಳೇ ಕಲೆಯ ಸಾಗರದಂತೆ ತೋರಿದೆ ಎನ್ನಬಹುದು.

ಸೂಪರ್‌ಫ್ಯಾನ್‌ಗಳ...

10ನೇ ಪುಟದಿಂದ...

ಗಯಾನ್ ಎಂಬ ಅಂಗವಿಕಲ ವ್ಯಕ್ತಿ ಶ್ರೀಲಂಕಾ ತಂಡದ ಸೂಪರ್‌ಫ್ಯಾನ್. ಬಾಂಗ್ಲಾದೇಶ ತಂಡದ ಶೋಯೆಬ್ ಅಲಿ 'ಟೈಗರ್' ಅವರೂ ಕ್ರೀಡಾಂಗಣದಲ್ಲಿ ಕಾಣಸಿಗುತ್ತಾರೆ.

ಧೋನಿಗೆ ಇಬ್ಬರು ಸೂಪರ್‌ಫ್ಯಾನ್ಸ್: ಭಾರತ ತಂಡದ ಮಾಜಿ ನಾಯಕ ಧೋನಿ ಅವರಿಗೆ ಇಬ್ಬರು ಸೂಪರ್‌ಫ್ಯಾನ್‌ಗಳಿದ್ದಾರೆ. ಚಂಡೀಗಢದ ರಾಮ್‌ಬಾಬು ಎಂಬುವವರು ಮೊದಲು ಸೂಪರ್‌ಫ್ಯಾನ್ ಆದವರು. ಈಗ ಚೆನ್ನೈನ ಸರವಣನ್ ಹರಿ ಎಂಬವರೂ ಫ್ಯಾನ್ ಆಗಿದ್ದಾರೆ. 'ನನ್ನ ಉಸಿರು ಕ್ರೀಡೆ. ಚೆನ್ನೈ ಸೂಪರ್ ಕಿಂಗ್ಸ್, ಧೋನಿ ನನ್ನ ಎರಡು ಕಣ್ಣುಗಳಿದ್ದಂತೆ' ಎಂದೇ ಲವಲವಿಕೆಯಿಂದ ಮಾತು ಆರಂಭಿಸಿದರು ಸರವಣನ್. ಇವರು ಚೆನ್ನೈ ಸೂಪರ್ ಕಿಂಗ್ಸ್ ಕಟ್ಟಾ ಅಭಿಮಾನಿ. ಗುಂಗುರುಕೂದಲಿನ ವಿಗ್ ಧರಿಸಿ ಮೈಗೆಲ್ಲಾ ಹಳದಿ ಬಣ್ಣವನ್ನು ಬಳಿದುಕೊಳ್ಳುವ ಅವರು 2013ರಿಂದ ಸಿಎಸ್‌ಕೆ ತಂಡದ ಒಂದೂ ಪಂದ್ಯ ತಪ್ಪಿಸಿಲ್ಲ. ಅವರು ಧೋನಿ ಅವರನ್ನು 2017ರಲ್ಲಿ ಬೆಂಗಳೂರಿನಲ್ಲಿ ಮೊದಲ ಬಾರಿ ಭೇಟಿಯಾಗಿದ್ದರು. 'ನನ್ನ ಮಗಳಿಗೆ ದಿಯಾ ಎಂದು ಹೆಸರು ಸೂಚಿಸಿದವರೇ ಧೋನಿ ಸರ್' ಎನ್ನುತ್ತಾರೆ 38 ವರ್ಷ ವಯಸ್ಸಿನ ಸರಣವನ್ ಭಾವನಾತ್ಮಕವಾಗಿ. ಅಷ್ಟರಲ್ಲಿ ಅವರ ಜೊತೆ ಒಂದಷ್ಟು ಮಂದಿ ಸೆಲ್ಫಿಗಾಗಿ ಮುಗಿಬಿದ್ದರು.



ಧೋನಿ ಜೊತೆ ಸರವಣನ್ ಹರಿ

ವೇಷಗಳು ಹಲವು, ಪ್ರೀತಿ ಮಾತ್ರ ಕ್ರಿಕೆಟ್

ನಾನು ಸೇನೆಗೆ ಸೇರಬೇಕೆಂಬ ಕನಸು ಕಂಡಿದ್ದೆ. ಆದರೆ ಅಣ್ಣ ಮೊದಲು ಸೇರಿದ. ಒಂದೇ ಮನೆಯಿಂದ ಇಬ್ಬರು ಬೇಡವೆಂದು ತಂದೆ-ತಾಯಿ ಹೇಳಿದ್ದರಿಂದ ನಾನು ಹೋಗಲಿಲ್ಲ. ಬಾಲ್ಯದಲ್ಲಿ ನನಗೆ ಕ್ರೀಡೆ ಮತ್ತು ಛದ್ಮವೇಷದಲ್ಲಿ ಆಸಕ್ತಿ. ಫ್ಯಾನ್ಸಿ ಡ್ರೆಸ್‌ಗಳಲ್ಲಿ ಬಹುಮಾನಗಳು ಬರುತ್ತಿದ್ದವು. ಕ್ರಿಕೆಟ್ ಪಂದ್ಯಗಳಿಗೆ ಜನರು ಬಣ್ಣದ ವಿಗ್‌ಹಾಕಿಕೊಂಡು ಹೋಗುತ್ತಿರುವುದನ್ನು ನೋಡುತ್ತಿದ್ದೆ, ಒಮ್ಮೆ ಮೇಕಪ್ ಮ್ಯಾನ್‌ನನ್ನು ಕರೆಸಿ ಮೈಸೂರು ಮಹಾರಾಜರ ದಿರಿಸಿನಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯವೊಂದಕ್ಕೆ ಹೋಗಿದ್ದೆ. ಮಾಧ್ಯಮಗಳು ಸೇರಿದಂತೆ ಎಲ್ಲರ ಗಮನ ನನ್ನ ಮೇಲೆ ಬಿತ್ತು. ಮರುದಿನ ಪತ್ರಿಕೆಗಳಲ್ಲಿ ಚಿತ್ರವೂ ಬಂತು. ಜನಸಾಮಾನ್ಯನಾಗಿ ಇದು ನನಗೆ ಬಹಳ ಖುಷಿ ಕೊಟ್ಟಿತು.

ಮಾತೃಭಾಷೆ ತೆಲುಗು ಆದರೂ, ಬೆಂಗಳೂರಿನಲ್ಲಿ ಹುಟ್ಟಿ, ಕನ್ನಡಿಗನಾಗಿ ಬೆಳೆದ ನನಗೆ ಕನ್ನಡದ ಮೇಲೆ ಪ್ರೀತಿ. ಬಸವಣ್ಣ, ಸಂಗೊಳ್ಳಿ ರಾಯಣ್ಣ, ಟಿಪ್ಪು ಸುಲ್ತಾನ್, ವೀರಗಾಸೆ ವೇಷ ತೊಟ್ಟು ಪಂದ್ಯಗಳಿಗೆ ಹೋಗುತ್ತಿದ್ದೆ. ಆದರೆ ಬೇರೆ ರಾಜ್ಯಗಳಿಗೆ ಹೋಗುವಾಗ ಅಲ್ಲಿನ ಸಾಂಪ್ರದಾಯಿಕ ಉಡುಗೆ, ವೇಷಭೂಷಣ ತೊಡುತ್ತೇನೆ. 2019ರ ಏಕದಿನ ವಿಶ್ವಕಪ್‌ನಲ್ಲಿ ಟೀಮ್ ಇಂಡಿಯಾ ಬೆಂಬಲಿಸಲು ಇಂಗ್ಲೆಂಡ್‌ಗೆ ಹೋಗಿದ್ದೆ. ಅಲ್ಲಿ ಭಾರತ- ಪಾಕ್ ಪಂದ್ಯಕ್ಕೆ ಮೊದಲು ನನಗೆ 'ಗ್ಲೋಬಲ್ ಸ್ಪೋರ್ಟ್ಸ್‌ಮ್ಯಾನ್' ಪ್ರಶಸ್ತಿ ನೀಡಿದರು.

ಆಸ್ಟ್ರೇಲಿಯಾದ ದಿಗ್ಗಜ ಸ್ಟೀವ್ ವಾ ಅವರು 2021ರಲ್ಲಿ ಬರೆದಿರುವ 'ಸ್ಪಿರಿಟ್ ಆಫ್ ಕ್ರಿಕೆಟ್' ಕೃತಿಯಲ್ಲಿ ಭಾರತೀಯರ ಕ್ರಿಕೆಟ್ ಹುಚ್ಚಿನ ಬಗ್ಗೆ ಬರೆದಿದ್ದಾರೆ. ಅದರಲ್ಲಿ ನನ್ನ ಬಗ್ಗೆ ಎರಡು ಪುಟ ಬರೆದಿದ್ದಾರೆ. ನಾನು 'ಕೆರಿ ಇಂಡೆವ್ ಲಾಜಿಸ್ಟಿಕ್ಸ್' ಹೆಸರಿನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಕಂಪನಿಯ ಮಾಲೀಕ ಎಸ್.ಕ್ಸೇವಿಯರ್ ಬ್ರಿಟ್ಟೊ ಅವರು ನನ್ನ ಪಾಲಿಗೆ ದೇವರಿದ್ದಂತೆ. ನನ್ನ ಕ್ರೀಡಾಪ್ರೇಮ ಕೆಲಸ ಪ್ರೋತ್ಸಾಹಿಸುತ್ತಾರೆ. ಕ್ರೀಡಾ ರಾಯಭಾರಿಯ ಸ್ಥಾನ ಕೊಟ್ಟಿದ್ದಾರೆ. ನನ್ನ ಪತ್ನಿ ಸುಮಾ ಅವರೂ ಬೆನ್ನಿಗೆ ನಿಂತಿದ್ದರಿಂದ ನಾನು ಬೇರೆ ಬೇರೆ ಕಡೆ ಹೋಗಲು ಆಗುತ್ತಿದೆ.

ಸುಗುಮಾರ್, ಬೆಂಗಳೂರು

ಮುನ್ನೋಟ 10-12-2023 ರಿಂದ -16-12-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಪ್ರಶಾಂತವಾಗಿರಲು ಯತ್ನಿಸಿದರೂ ನಿಮ್ಮ ಸಂಗಾತಿಯು ಅದಕ್ಕೆ ಆಸ್ಪದ ಕೊಡುವುದಿಲ್ಲ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಲಲಿತ ಕಲೆಗಳನ್ನು ಅಭ್ಯಾಸ ಮಾಡುತ್ತಿರುವವರಿಗೆ ಉತ್ತಮ ಮಾರ್ಗದರ್ಶನ ಸಿಗುತ್ತದೆ. ನಿಮ್ಮ ವ್ಯವಹಾರಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಹೊಸ ವಾಹನ ಖರೀದಿಯ ಯೋಗವಿದೆ. ವಿದ್ಯಾರ್ಥಿಗಳಿಗೆ ಅಷ್ಟೇನೂ ಯಶಸ್ಸು ಇರುವುದಿಲ್ಲ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ವಾರದ ಆರಂಭದಲ್ಲಿ ಸಂಗೀತಗಾರರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ. ಸರಿಯಾದ ನಿರ್ಧಾರಗಳಿಲ್ಲದೇ ಸ್ವಲ್ಪ ದ್ವಂದ್ವಕ್ಕೆ ಸಿಲುಕುವಿರಿ. ಹಿರಿಯರಿಂದ ನಿಮ್ಮ ಸಂಸಾರಕ್ಕೆ ಸಾಕಷ್ಟು ಸಹಕಾರ ದೊರೆಯುತ್ತದೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಹೆಚ್ಚು ಕೆಲಸ ದೊರೆಯುತ್ತದೆ. ಲೆಕ್ಕತಜ್ಞರಿಗೆ ಮುಜುಗರ ಏರ್ಪಡುವ ಸಂದರ್ಭ ಇದೆ. ರಾಜಕೀಯ ನಾಯಕರುಗಳಿಗೆ ಪ್ರಜೆಗಳ ಸಹಕಾರ ಸಿಗಬಹುದು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ನಿಮ್ಮಲ್ಲಿ ದೃಢತೆ ಇದ್ದು ವೃತ್ತಿಯಲ್ಲಿ ಬದ್ಧತೆಯನ್ನು ತೋರುವಿರಿ. ಸಂಗೀತಗಾರರಿಗೆ, ನಾಟ್ಯ ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ದೇಹದಲ್ಲಿ ತೊಂದರೆ ಇದ್ದು ಶಸ್ತ್ರಚಿಕಿತ್ಸೆ ಮಾಡಬೇಕಾದ ಸಂದರ್ಭಗಳು ಬರಬಹುದು. ಕೃಷಿ ಭೂಮಿಯನ್ನು ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಬಹಳ ಯಶಸ್ಸು ಇರುತ್ತದೆ. ತೆರಿಗೆ ತಜ್ಞರಿಗೆ ಹೆಚ್ಚು ಬೇಡಿಕೆ ಬರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ನಡವಳಿಕೆಯಲ್ಲಿ ಆಲಸೀತನವನ್ನು ಕಾಣಬಹುದು. ಆಸ್ತಿ ಕೊಳ್ಳಲು ಬೇಕಾದ ಹಣಕ್ಕೆ ಸೂಕ್ತಮಾರ್ಗಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಮಧ್ಯಮ ಯಶಸ್ಸಿರುತ್ತದೆ. ಕೆಲವು ರಕ್ತದ ದೋಷಗಳು ಕಾಡಬಹುದು. ಸಂಸಾರದಲ್ಲಿ ಸಾಕಷ್ಟು ಕಾವಿದ್ದರೂ ಸಂಬಂಧಗಳು ಕೆಡುವುದಿಲ್ಲ. ಸ್ತ್ರೀಯರು ನಡೆಸುವ ವ್ಯವಹಾರಗಳಲ್ಲಿ ಆದಾಯ ಕಡಿಮೆ ಇರುತ್ತದೆ. ಸಂಗಾತಿಯ ಕಠಿಣ ಮಾತುಗಳು ಮುಜುಗರ ತರುತ್ತವೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಕೃಷಿ ಪಂಡಿತರಿಗೆ ಹೆಚ್ಚಿನ ಗೌರವ ದೊರೆಯುತ್ತದೆ. ಮಾತನಾಡುವಾಗ ಸ್ವಲ್ಪ ಎಚ್ಚರವಿರಲಿ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಬಹಳ ಚುರುಕಾಗಿ ಕೆಲಸ ಕಾರ್ಯವನ್ನು ಮಾಡಿ ಎಲ್ಲರ ಗಮನ ಸೆಳೆಯುವಿರಿ. ಕ್ರೀಡಾಪಟುಗಳಿಗೆ ಹೆಚ್ಚಿನ ಸಾಧನೆ ಮಾಡುವ ಯೋಗವಿದೆ. ಸ್ವಲ್ಪ ಅಜೀರ್ಣ ನಿಮ್ಮನ್ನು ಕಾಡಬಹುದು. ವೃತ್ತಿಯಲ್ಲಿ ಸ್ವಲ್ಪ ಮಟ್ಟಿನ ಆದಾಯ ಏರಿಕೆ ಇರುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಆಲಸೀತನ ಆವರಿಸಿಕೊಳ್ಳಬಹುದು. ಹಣದ ಒಳಹರಿವು ಉತ್ತಮವಾಗಿದ್ದರೂ ಖರ್ಚು ಹೆಚ್ಚಾಗುವ ಸಂದರ್ಭವಿದೆ. ಸೌಂದರ್ಯ ಹಾಗೂ ಅಲಂಕಾರಿಕ ವಸ್ತುಗಳನ್ನು ಕೊಳ್ಳಲು ಹೆಚ್ಚು ಖರ್ಚು ಮಾಡುವಿರಿ. ಹಿರಿಯರ ನಡುವೆ ಹೊಂದಾಣಿಕೆ ಮಾಡಿಕೊಳ್ಳುವುದು ಬಹಳ ಮುಖ್ಯ. ವ್ಯಾಪಾರಿಗಳಿಗೆ ಅವರ ವ್ಯಾಪಾರವನ್ನು ಅಭಿವೃದ್ಧಿ ಮಾಡಲು ಹೊಸ ಅವಕಾಶಗಳು ದೊರೆಯುತ್ತವೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಅತಿಯಾದ ಬುದ್ಧಿವಂತಿಕೆಯಿಂದ ವ್ಯವಹರಿಸುವಿರಿ. ನಿಮ್ಮ ಬಂಧುಗಳ ಜೊತೆ ಸ್ವಲ್ಪ ಕಾವೇರಿದ ವಾತಾವರಣವಿರುತ್ತದೆ. ಕೃಷಿಯಲ್ಲಿ ಹೆಚ್ಚು ಆಸಕ್ತಿ ತಾಳುವಿರಿ. ಕೃಷಿಭೂಮಿಯನ್ನು ಅಭಿವೃದ್ಧಿಪಡಿಸಲು ಮುಂದಾಗುವಿರಿ. ರಾಜಕೀಯವನ್ನು ಸೇರಬೇಕೆನ್ನುವವರಿಗೆ ನಾಯಕರುಗಳ ಒಲವು ದೊರೆತು ದಾರಿ ಒದಗುತ್ತದೆ. ವಿದೇಶಿ ತಯಾರಿಕಾ ಕಂಪನಿಗಳ ಜೊತೆ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಸ್ವಾಭಿಮಾನ ಬಹಳ ಇರುತ್ತದೆ. ಕುಸ್ತಿಪಟುಗಳಿಗೆ ಹೆಚ್ಚಿನ ಅವಕಾಶ ದೊರೆಯುವ ಸಾಧ್ಯತೆ ಇದೆ. ಹಣದ ಒಳಹರಿವು ಅಗತ್ಯವನ್ನು ಪೂರೈಸುತ್ತದೆ. ವಿಮಾನಯಾನ ತಂತ್ರಜ್ಞಾನವನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇರುತ್ತದೆ. ಲೇವಾದೇವಿ ವ್ಯವಹಾರದಲ್ಲಿ ಅಂತಹ ಯಶಸ್ಸು ಇರುವುದಿಲ್ಲ. ಸಂಗಾತಿಯ ಒಡವೆ ವಸ್ತುಗಳಿಗಾಗಿ ಹಣ ಖರ್ಚಾಗುತ್ತದೆ. ಕೆಲವರಿಗೆ ಅನಿರೀಕ್ಷಿತ ಗೌರವಗಳು ದೊರೆಯಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಬುದ್ಧಿವಂತಿಕೆ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಮಾತುಗಳು ನಯವಾಗಿದ್ದರೂ, ಅದರಲ್ಲಿನ ಆಜ್ಞೆಗಳು ತಲುಪಬೇಕಾದವರನ್ನು ತಲುಪುತ್ತವೆ. ನಿಮ್ಮ ಚಾಣಾಕ್ಷ ನಡೆಗಳಿಗೆ ವೈರಿಗಳು ಕಕ್ಕಾಬಿಕ್ಕಿಯಾಗುವರು. ಉದ್ದಿಮೆದಾರರಿಗೆ ಹೊಸ ಸಂಕಷ್ಟಗಳೆದುರಾದರೂ ಪರಿಹಾರವಾಗುತ್ತದೆ. ಮನೆಯ ಪಾಠ ಮಾಡುವ ಉಪಾಧ್ಯಾಯರುಗಳಿಗೆ ಹೆಚ್ಚಿನ ಬೇಡಿಕೆ ಬರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ನ್ಯಾಯಮಾರ್ಗದಲ್ಲಿ ಕೆಲಸ ಮಾಡುವಿರಿ. ಹಣದ ಒಳಹರಿವು ಕಡಿಮೆ ಇದ್ದರೂ ಖರ್ಚನ್ನು ಸರಿಯಾಗಿ ನಿರ್ವಹಿಸುವಿರಿ. ಸರಕು ಸಾಗಣೆ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಆಸೆಪಟ್ಟಿದ್ದ ಆಸ್ತಿಯನ್ನು ಕೊಳ್ಳಲು ಕಾಲಾವಕಾಶ ದೊರೆಯುತ್ತದೆ. ವೃತ್ತಿಯಲ್ಲಿ ಎಲ್ಲರ ಸಹಕಾರ ದೊರೆತು ಆನಂದ ಪಡುವಿರಿ. ಕೃಷಿ ವಿಜ್ಞಾನಿಗಳು ಹೊಸ ತಳಿಯೊಂದನ್ನು ಕಂಡು ಹಿಡಿಯಬಹುದು.


ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಅನ್ಯಾಯ ಮಾರ್ಗದಲ್ಲಿ ಹಣ ಸಂಪಾದನೆ ಮಾಡುತ್ತಿರುವವರಿಗೆ ಧನಮೂಲ ನಿಲ್ಲುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವವರಿಗೆ ದಾಖಲೆಗಳಲ್ಲಿ ತೊಂದರೆ ಎದುರಾಗಬಹುದು. ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಿಕೊಂಡ ವಿಷಯಗಳಲ್ಲಿ ಉತ್ತಮ ಫಲಿತಾಂಶ ದೊರೆಯುತ್ತದೆ. ಕಟ್ಟಡ ನಿರ್ಮಾಣ ಮಾಡುವವರಿಗೆ ಹೆಚ್ಚು ಕೆಲಸಗಳು ದೊರೆತು ಹೆಚ್ಚು ಸಂಪಾದನೆ ಆಗುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಅತಿಯಾದ ಕೋಪದಿಂದ ನಿಮ್ಮ ಬಂಧುಗಳು ಅಥವಾ ಸ್ನೇಹಿತರು ದೂರವಾಗುವರು. ಅತಿ ಬುದ್ಧಿವಂತಿಕೆಯಿಂದ ಕೆಲಸದಲ್ಲಿ ಸಿಕ್ಕಿ ಬೀಳುವ ಸಾಧ್ಯತೆಗಳಿವೆ. ನಿಂತಿದ್ದ ವಿದ್ಯೆಗಳನ್ನು ಈಗ ಮುಂದುವರೆಸಬಹುದು. ದೇಹದಲ್ಲಿ ಶಕ್ತಿ ಉಡುಗಿದಂತೆ ಅನಿಸಿದಲ್ಲಿ ಚಿಕಿತ್ಸೆ ಪಡೆಯುವುದು ಒಳ್ಳೆಯದು. ಸಂಗಾತಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇರಲಿ. ಹಿರಿಯರ ವ್ಯವಹಾರಗಳಲ್ಲಿ ಪಾಲು ದೊರೆಯುತ್ತದೆ.

ಪದಬಂಧ 2819



ಮೇಲಿನಿಂದ ಕೆಳಕ್ಕೆ

1. ಆಕಾಶವಾಣಿ, ದೂರದರ್ಶನಗಳ ಬಿತ್ತರ 3
2. ಶ್ರೇಷ್ಠವಾದ ಏಳು ಬೆಟ್ಟಗಳ ಒಡೆಯ 5
3. ಕ್ಷೀರಕ್ಕಾಗಿ ಮೀಸಲಿಟ್ಟ ಮಣ್ಣಿನ ಪಾತ್ರೆ 5
4. ಧರ್ಮದಿಂದ ಕುರುಡನಾದವ 3
7. ಹನ್ನೆರಡರಿಂದ ಇಪ್ಪತ್ತರೊಳಗಿನ ನೆಲಕಾಣದ ವಯಸ್ಸು 5
9. ಹಸುವಿನಂತಹ ಮುಖ 3
13. ಕೆಡಕನ್ನು ಮಾಡಲು ಹೂಡಿದ ಉಪಾಯ 5
14. ಅಕ್ರಮವನ್ನೆಲ್ಲಾ ಸರಿಪಡಿಸಿ ವ್ಯವಸ್ಥೆಯಲ್ಲಿಟ್ಟದ್ದು 3
15. ಗೌರವದಿಂದ ತಲೆಯನ್ನು ಬಗ್ಗಿಸಿದ ಸುಸಂಸ್ಕೃತ 5
16. ಕಾಲಕ್ಕೆ ತಕ್ಕ ಅರಿವು 5
19. ಕರ್ನಾಟಕದ ಹಸನಾದ ಜಿಲ್ಲೆಯೇ ಇದು 3
21. ಮರಿಹಾಕಬಲ್ಲ ಜೀವಜಾತಿ 3

ಎಡದಿಂದ ಬಲಕ್ಕೆ

1. ಜನತೆಯ ಒಡೆಯ ಈ ಬ್ರಹ್ಮ 4
3. ದಾರಿಯ ಪಕ್ಕ ಸಿಗುವ ಹಳ್ಳಿ 4
5. ತಲೆಗೆ ಸುತ್ತಿಕೊಳ್ಳಬಹುದಾದ ಕರವಸ್ತ್ರ 3
6. ಕನ್ನಡ ಲಿಖಿತಕ್ಕೊಂದು ಕಂಪ್ಯೂಟರ್ ತಂತ್ರಾಂಶ 3
8. ಸಜಾತಿ ಪ್ರೇಮಕ್ಕೆ ಪಾತ್ರನಾದ ನೆಂಟ 5
10. ಲೇಡಿಯ ಮಧ್ಯೆ ಬರುವ ಗೇಲಿ 3
11. ಆಸೆಯೆಲ್ಲಾ ಭಗ್ನನಾದವ 3
12. ಅನ್ಯರಿಗೆ ಅನಿಷ್ಟವನ್ನುಂಟು ಮಾಡುವ ಕೆಟ್ಟ ಬುದ್ಧಿ 5
14. ಆಪತ್ಕಾಲಕ್ಕೆ ನೀಡುವ ನೆರವಿನ ಹಣ 5
16. ಲೀಲಳ ಜೊತೆಯಾಗುವ ಸುಸಂಸ್ಕೃತ ನೀರು 3
17. ಕನ್ನಡ ಭಾಷೆಯಲ್ಲಿ ಸಂಸ್ಕೃತಕ್ಕೆ ಸರಿಗಟ್ಟುವ ಪದ 3
18. ಕೈವಲ್ಯಪತಿ ಅತಿ ಶ್ರೇಷ್ಠ ಪವಾಡ ಪುರುಷ 5
20. ಸುಸಂಸ್ಕೃತ ಕಳ್ಳ 3
22. ಹಿಂದಿನ ಕಾಲದ ಒಳ್ಳೆಯ ಶ್ರೇಷ್ಠ ಬ್ರಾಹ್ಮಣ 3
23. ಮೂರನೆಯ ಲಿಂಗ 4
24. ಗಲಾಟೆಗಳನ್ನು ತಡೆಯುವ ಪ್ರತಿಬಂಧಕ ಕಟ್ಟಳೆ ಹಿಂದುಮುಂದಾಗಿದೆ 4

ಪದಬಂಧ ಉತ್ತರ -2818


ಮೇಲಿಂದ ಕೆಳಕ್ಕೆ

1.ಭಾರತವಾಣಿ 2.ಗತಾಗತ 3.ಕುರಿಮರಿ 4.ಬೇಲಿಹಾರು 8.ಕಾರಣ 9.ಬೆದರಿಸು 11.ದ್ರಾಕ್ಷಿಫಲ 12.ಪಲ್ಲವ 13.ಕುಮಾರರಾಮ 14.ಮಲೆನಾಡು 16.ಜೀವನಾಡಿ 17.ಶಿವಶಿವ

ಎಡದಿಂದ ಬಲಕ್ಕೆ

1. ಭಾವೋದ್ವೇಗ 3.ಕುಲುಮೆ 4.ಬೇಸರ 5.ತಾಳೆಗರಿ 6.ತಲಭಾಗ 7.ತರಕಾರಿಬೆಲೆ 10.ರುದ್ರಾಣಿ 12.ಪರಿಗ್ರಹಣ 13.ಕುಸುಮ 15.ಜಲಜೀವರಾಶಿ 18.ವಡೋದರ 19.ನಾಮರಾಶಿ 20.ರಾಯುಡು 21.ಮುನ್ನುಡಿ 22.ವನಧಾಮ

ನಂಜುಂಡಸ್ವಾಮಿ ಹೋರಾಟದ ಆ ಬೆಂಗಳೂರು...


ಪ್ರೊ. ಎಂ.ಡಿ. ನಂಜುಂಡಸ್ವಾಮಿ

ಆತ್ಮ ಕಥನ

ಸಾವಣ್ಣ ಪ್ರಕಾಶನ ಹೊರತಂದಿರುವ ಟಿ.ಎನ್. ಸೀತಾರಾಮ್ ಅವರ 'ನೆನಪಿನ ಪುಟಗಳು' ಪುಸ್ತಕ ಇಂದು (ಡಿಸೆಂಬರ್ 10) ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಬಿಡುಗಡೆಯಾಗಲಿದೆ. ಪುಸ್ತಕದಲ್ಲಿನ ಒಂದು ಭಾಗ ಇಲ್ಲಿದೆ.

ಎಪ್ಪತ್ತರ ದಶಕದಲ್ಲಿ ನಾನು ಮಲ್ಲೇಶ್ವರದ ಬಳಿ ಸ್ವಿಮ್ಮಿಂಗ್ ಪೂಲ್ ಬಡಾವಣೆಯಲ್ಲಿರುವ ನನ್ನ ಸ್ನೇಹಿತ ಕೃಷ್ಣಮೂರ್ತಿಯವರ ಮನೆಯ ಔಟ್‌ಹೌಸ್‌ನಲ್ಲಿ ವಾಸವಿದ್ದೆ.

ನಾನು ಬಾಡಿಗೆಗೆಂದು ಅಲ್ಲಿ ಹೋಗಿದ್ದು. ಅಲ್ಲಿ ಗೆಳೆಯ ಕೃಷ್ಣಪ್ಪ ಕೂಡ ನನ್ನ ಜತೆಗಿದ್ದರು. ಕೃಷ್ಣಪ್ಪ ನಾಟಕ ನಿರ್ದೇಶಕರು ಮತ್ತು ಈಗಿನ ಖ್ಯಾತ ಚಿತ್ರ ನಟಿ ಶ್ವೇತಾ ಶ್ರೀವಾಸ್ತವ್ ಅವರ ತಂದೆ.

ನಮ್ಮ ಆರ್ಥಿಕ ಕಷ್ಟ ಕಂಡದ್ದಕ್ಕಿಂತ ಹೆಚ್ಚಾಗಿ ಅವರಿಗೆ ನನ್ನ ಮೇಲೆ ಇದ್ದ ಪ್ರೀತಿಯಿಂದಾಗಿ ಕೃಷ್ಣಮೂರ್ತಿಯವರ ತಂದೆ ಎಂದೂ ಬಾಡಿಗೆಯನ್ನು ತೆಗೆದುಕೊಳ್ಳಲಿಲ್ಲ. ಬದಲಾಗಿ ಅವರ ಮನೆಯಲ್ಲಿಯೇ ಎರಡು ಹೊತ್ತೂ ಊಟವನ್ನೂ ಬೆಳಗಿನ ತಿಂಡಿಯನ್ನೂ ಮಾಡಬೇಕೆಂದು ಅಪ್ಪಣೆ ಮಾಡಿದ್ದರು. ಅಂಥ ಪ್ರಿಯವಾದ ಅಪ್ಪಣೆಗಳನ್ನು ಪಾಲಿಸಿಕೊಂಡು ಅನೇಕ ವರ್ಷಗಳ ಕಾಲ ನಾನು ಪೇಯಿಂಗ್ ಗೆಸ್ಟ್ ಆಗಿ ಇದ್ದೆ. ಆಗ ಸಾಮಾನ್ಯವಾಗಿ ಪ್ರತಿದಿನ ಸಂಜೆ ಸ್ಕೂಟರ್‌ನಲ್ಲಿ ಗುರುಗಳಾದ ಲಂಕೇಶ್ ಮೇಷ್ಟ್ರ ಮನೆಗೆ ಹೋಗಿಬಿಡುತ್ತಿದ್ದೆ.

ಅವರ ಮನೆ ಗಾಂಧಿ ಬಜಾರ್‌ನ ಗೋವಿಂದಪ್ಪ ರಸ್ತೆಯಲ್ಲಿತ್ತು. ಅವರ ಮನೆಗೆ ಏಳೆಂಟು ಗೆಳೆಯರು ಬಂದಿರುತ್ತಿದ್ದರು. ಅಲ್ಲಿ ಹರಟೆ ಹೊಡೆದು ವಾಪಸ್ ಆಗುತ್ತಿದ್ದೆವು.

ಮೇಷ್ಟ್ರಿಗೆ ಅಸಾಧ್ಯವಾದ ಹಾಸ್ಯಪ್ರಜ್ಞೆ ಇತ್ತು. ಮಲ್ಲೇಶ್ವರದಿಂದ ಅಲ್ಲಿಗೆ ಕೇವಲ ಹತ್ತರಿಂದ ಹನ್ನೆರಡು ನಿಮಿಷಗಳಲ್ಲಿ ಹೋಗಿಬಿಡುತ್ತಿದ್ದೆವು. ಆಗೆ ಟ್ರಾಫಿಕ್ ತೀರ ಕಮ್ಮಿ.

ಒಂದು ಸಂಜೆ ಹೀಗೆ ಮೇಷ್ಟ್ರ ಮನೆಗೆ ಹೋಗುವ ವೇಳೆಗೆ ಅಲ್ಲಿ ಪ್ರೊಫೆಸರ್ ಎಮ್.ಡಿ. ನಂಜುಂಡಸ್ವಾಮಿಯವರು ಬಂದು ಕೂತಿದ್ದರು. ಅವರು ಒಂದೆರಡು ವರ್ಷದ ಹಿಂದೆ ತಾನೆ ಜರ್ಮನಿಯಿಂದ ಬಂದಿದ್ದರು. ಅತ್ಯಂತ ಕುಶಾಗ್ರಮತಿ. ಸಮಾಜವಾದಿ ಯುವಜನ ಸಭಾದಲ್ಲಿ ತೊಡಗಿಸಿಕೊಂಡು ಚಳವಳಿ ಮತ್ತು ಹೋರಾಟಗಳಲ್ಲಿ ಕ್ರಿಯಾಶೀಲರಾಗಿದ್ದರು. ಅವರ ಪ್ರತಿಯೊಂದು ಹೋರಾಟಕ್ಕೂ ಆಳವಾದ ಸಮಾಜಮುಖಿ ಚಿಂತನೆ ಇರುತ್ತಿತ್ತು. ನಮ್ಮನ್ನೂ ಅದರಲ್ಲಿ ಇಳಿಸಿ ಅನೇಕ ಬಾರಿ ಪೊಲೀಸ್ ಸ್ಟೇಷನ್, ಕೋರ್ಟು ನೋಡುವಂತೆ ಆಗುತ್ತಿತ್ತು.

ಅವತ್ತು ತಾನೇ ಸಿ.ಐ.ಟಿ.ಬಿಯನ್ನು ಬಿ.ಡಿ.ಎ ಮಾಡುವುದಾಗಿ ಸರ್ಕಾರ ಘೋಷಿಸಿತ್ತು. (ಸಿ.ಐ.ಟಿ.ಬಿ ಅಂದರೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್. ಮುಂಚೆ ಬಿ.ಡಿ.ಎ ಕೆಲಸವನ್ನು ಅದು ಮಾಡುತ್ತಿತ್ತು. ಬಡಾವಣೆಗಳನ್ನು ಮಾಡಿ, ಸೈಟುಗಳನ್ನು ಮಾಡಿ ಹಂಚುವುದು ಮುಂತಾದ ಕೆಲಸಗಳು.)

ನಾನು ಹೋದ ಮೇಲೆ, ನನ್ನ ಅವರ ಮಧ್ಯೆ ಹೀಗೆ ಮಾತುಕತೆ ನಡೆಯಿತು...

ಎಲ್ಲಿಂದ ಬಂದ್ರಿ?

ಮಲ್ಲೇಶ್ವರದಿಂದ ಸರ್.


ಎಷ್ಟು ಹೊತ್ತು ಹಿಡೀತು ಅಲ್ಲಿಂದ ಇಲ್ಲಿಗೆ ಬರೋಕೆ.

ಕಾಲು ಗಂಟೆ ಸರ್. ಯಾಕೆ?

ಇನ್ನು ಐದು ವರ್ಷ ಮುಗಿಯೋದ್ರೊಳಗೆ ಅರ್ಧ ಗಂಟೆ ಬೇಕಾಗುತ್ತೆ. ಅಲ್ಲಿಂದ ಇಲ್ಲಿ ಬರೋಕೆ. ನಾಳೆ ಒಂದು ಸ್ಟ್ರೈಕ್ ಆರ್ಗನೈಜ್ ಮಾಡೋಣ ಬನ್ನಿ. ನಿಮ್ಮ ಫ್ರೆಂಡ್ಸ್‌ನೂ ಕರ್ಕೊಂಡು ಬನ್ನಿ ಎಂದರು.

ನನಗೇನೂ ಅರ್ಥವಾಗಲಿಲ್ಲ. ಏನ್ಸಾರ್ ಹೀಗೆ ಮಾತಾಡ್ತಿದ್ದೀರಿ. ಎಂದು ಕೇಳಿದೆ.

ಇವತ್ತು ಸರ್ಕಾರದ ನಿರ್ಧಾರ ಪೇಪರ್‌ನಲ್ಲಿ ಓದಿಲ್ಲವ. ಈ ಅವಿವೇಕಿಗಳು ಮಾಡಿರೋ ಕೆಲಸ ನೋಡಿ. ಸಿ.ಐ.ಟಿ.ಬಿ.ನ ಬಿ.ಡಿ.ಎ. ಮಾಡ್ತಾರಂತೆ. ಬ್ಯಾಂಗಲೋರ್ ಡೆವಲಪ್‌ಮೆಂಟ್ ಅಥಾರಿಟಿ. ಬೆಂಗಳೂರು ಡೆವಲಪ್ ಆಗಿರೋದು ಸಾಲದಾ? ಕೆಂಪೇಗೌಡರ ಗೋಪುರದಿಂದ ಮೂರು ಮೂರು ಕಿಲೋಮೀಟರ್ ಆಚೆ ತನಕ ಬೆಳೆದಿದೆ. ಇನ್ನಾ ಬೇಕಾ. ಇನ್ನಾ ಇವರು ಬಡಾವಣೆಗಳು ಮಾಡ್ತಾ ಕೂತರೆ ದೇಶದಲ್ಲಿರೊ ವ್ಯಾಪಾರಿಗಳೆಲ್ಲ ಇಲ್ಲಿ ಬಂದು ಕೂತ್ಕೋತಾರೆ. ಎಲ್ಲರಿಗೂ ಬೆಂಗಳೂರೇ ಬೇಕು. ಏರ್ ಕಂಡೀಶನ್ಡ್ ಸಿಟಿ ಅಲ್ವಾ. ಎಲ್ಲ ರಾಜ್ಯದೋರೂ ಬಂದು ಇಲ್ಲಿ ವಕ್ರಿಸ್ತಾರೆ. ಎಲ್ಲ ಇಂಡಸ್ಟ್ರಿಯಲಿಸ್ಟುಗಳೂ ಇಲ್ಲಿ ಕಾರ್ಖಾನೆ ತೆಗೀತೀವಿ ಅಂತಾರೆ. ಸರ್ಕಾರದೋರು ಅವರಿಗೆ 10-20 ಎಕರೆ ಜಮೀನು ಕೊಡ್ತಾರೆ. ಕನ್ನಡದೋರು ಆಮೇಲೆ ಸಿಕ್ಕೋದೇ ಇಲ್ಲ ಬೆಂಗಳೂರಿನಲ್ಲಿ. ಎಲ್ಲರೂ ಕಾರುಗಳು ತಗೊಂತಾರಪ್ಪ. ಸೈಕಲ್‌ಗಳಿಗೆ ಈ ರೋಡುಗಳನ್ನು ಮಾಡಿರೋದು. ಮನೇಗೊಂದು ಕಾರ್ ಬಂದ್ರೆ ರೋಡುಗಳು ತಡೆಯುತ್ವಾ? ಟ್ರಾಫಿಕ್ ಜಾಮ್‌ಗಳು ಶುರು ಆಗುತ್ತೆ. ನೀವು ಕಾಲು ಗಂಟೇಗೆ ಅಲ್ಲಿಂದ ಇಲ್ಲಿ ಬರೋಕೆ ಆಗುತ್ತಾ. ಸೈಟುಗಳು ಈಗ ಇಪ್ಪತ್ತು, ಮೂವತ್ತು ಸಾವಿರಕ್ಕೆ ಸಿಗ್ತಾ ಇದೆ. ಐದು ವರ್ಷ ಹೋಗಲಿ. ಒಂದೊಂದು ಸೈಟೂ ಮೂವತ್ತು, ನಲವತ್ತು ಲಕ್ಷ ಆಗುತ್ತೆ. ಸಾಮಾನ್ಯ ಜನ ಕೊಂಡುಕೊಳ್ಳೋಕೆ ಆಗುತ್ತಾ.



ಇಷ್ಟು ಸಾಲದು ಎಂದು ನಮ್ಮ ರಾಜ್ಯದಲ್ಲಿರೋ ಎಲ್ಲರೂ ಬೆಂಗಳೂರಿನಲ್ಲಿ ಒಂದು ಮನೆ ಬೇಕು ಎಂದು ಇಲ್ಲಿ ಬಂದು ಸೆಟಲ್ ಆಗ್ತಾರೆ. ಇಲ್ಲಿ ಬೀಳೋ ಕಸಾನ ಎತ್ತಿಹಾಕೋಕೆ ಜಾಗ ಇರಲ್ಲ. ಸರೀನಾ ಈ ಮು.ಗಂಡರು ಮಾಡಿರೋದು. ಅದಕ್ಕೇ ಸ್ಟ್ರೈಕ್ ಮಾಡಬೇಕು.

ಏನಂತ ಸ್ಟ್ರೈಕ್ ಮಾಡೋದು ಸರ್.

ನಮಗೆ ಬಿ.ಡಿ.ಎ. ಬೇಡ. ಬಿ.ಎಮ್.ಎ. ಶುರು ಮಾಡಿ ಅಂತ.

ಬಿ.ಎಮ್.ಎ?

ಬ್ಯಾಂಗಲೋರ್ ಮೈಂಟೆನೆನ್ಸ್ ಅಥಾರಿಟಿ. ನಮಗೆ ಡೆವಲಪ್‌ಮೆಂಟ್ ಬೇಡ. ಮೈಂಟೆನೆನ್ಸ್ ಬೇಕು ಅಷ್ಟೇ. ಬೆಂಗಳೂರು ಇನ್ನು ಬೆಳೀಬಾರದು ಎಂದು ಸ್ಟ್ರೈಕ್ ಮಾಡಬೇಕು.

ಮತ್ತೆ ಉದ್ಯಮಿಗಳು ಬಂದು ಕೈಗಾರಿಕೆ ತೆಗೀದೆ ಇದ್ರೆ ನಮಗೇ ನಷ್ಟ ಅಲ್ವ ಸರ್?

ಏನ್ ಬೆಂಗಳೂರೇ ಬೇಕಾ ಫ್ಯಾಕ್ಟರಿ ತೆಗೆಯೋಕೆ. ಹಾಸನದಲ್ಲಿ ತೆಗೀಲಿ. ಚಾಮರಾಜನಗರದಲ್ಲಿ ತೆಗೀಲಿ. ನಿಮ್ಮ ಗೌರಿಬಿದನೂರಿನಲ್ಲಿ ತೆಗೀಲಿ. ಆ ಊರುಗಳೂ ಅಭಿವೃದ್ಧಿ ಆಗುತ್ತವೆ. ಬೆಂಗಳೂರೂ ಶಾಂತವಾಗಿರುತ್ತೆ.

ಎರಡನೇ ದಿನ ಕಬ್ಬನ್ ಪಾರ್ಕ್‌ನಲ್ಲಿ ಕೂತು ಸ್ಟ್ರೈಕೂ ಮಾಡಿದಿವಿ. ಘಾಳಪ್ಪ ಅನ್ನೋ ಮಂತ್ರಿಗೆ ಘೇರಾವ್ ಕೂಡ ಮಾಡಿದಿವಿ. ಪತ್ರಿಕಾಗೋಷ್ಠೀನೂ ಮಾಡಿದಿವಿ. ಸರ್ಕಾರ ಕ್ಯಾರೇ ಅನ್ನಲಿಲ್ಲ. ಅದು ನಂಜುಂಡಸ್ವಾಮಿಗಳ ಭ್ರಮೆ ಅಂದುಬಿಟ್ಟರು.

ಇತ್ತೀಚೆಗೆ ಸಂಜೆ ನಾನು ಮಲ್ಲೇಶ್ವರದಿಂದ ಗಾಂಧಿ ಬಜಾರ್‌ಗೆ ಬರೋಕೆ ಸರಿಯಾಗಿ ಒಂದೂವರೆ ಗಂಟೆ ಕಾಲ ಹಿಡಿಯಿತು. ನಮ್ಮ ಏರಿಯಾದಲ್ಲಿ ಒಂದು ಸೈಟು ಮೂರೂ ಕಾಲು ಕೋಟಿ ಎಂದರು ಯಾರೋ. ನಂಜುಂಡಸ್ವಾಮಿಯವರಿಗೆ ಎಂಥಾ ವಿಷನ್ ಇತ್ತು. ಅವರು ಮುಖ್ಯಮಂತ್ರಿಯಾಗಬೇಕಿತ್ತು.

ಸಂವೇದನಾಶೀಲ ಸಂಘರ್ಷದ ಮಾದರಿ


ಎಂ.ಎಸ್. ಆಶಾದೇವಿ

ವಿಮರ್ಶೆ

ಸಮಕಾಲೀನ ಕರ್ನಾಟಕದ ಸಾಂಸ್ಕೃತಿಕ ಹಾಗೂ ಬೌದ್ಧಿಕ ವಿನ್ಯಾಸಗಳನ್ನು ಕಟ್ಟುತ್ತಿರುವವರಲ್ಲಿ ರಹಮತ್ ಅವರ ಪಾತ್ರ ದೊಡ್ಡದು. ಕಟ್ಟುವುದು ಎಂದಾಗ ಈಗಾಗಲೇ ಇರುವುದನ್ನು ಕೆಡವುವುದು ಎಂದೂ ಅರ್ಥ, ವಿಸ್ತರಿಸುವುದು, ಮುರಿದು ಕಟ್ಟುವುದು ಎಂದೂ ಅರ್ಥ. ರಹಮತ್ ಕನ್ನಡದ ಮಟ್ಟಿಗೆ ಈ ಎಲ್ಲವನ್ನೂ ಮಾಡುತ್ತಾ ಬಂದಿದ್ದಾರೆ. ಭಾರತದ ಬೌದ್ಧಿಕ ಪರಂಪರೆಯನ್ನು, ಅನುಭಾವಿಕ ಪರಂಪರೆಯನ್ನು ಅಲಕ್ಷಿತ ನೆಲೆಗಳ ಮೂಲಕ ಕಟ್ಟುವ ಮಹತ್ವಾಕಾಂಕ್ಷೆಯ ಮಹಾಪ್ರಯಾಣವನ್ನು ಡಿ.ಆರ್.ಎನ್. ಅಪಾರ ತಯಾರಿಯಲ್ಲಿ ಶುರು ಮಾಡಿದರು. ಇದಕ್ಕೆ ಡಿ.ಆರ್. ಅವರ ಸ್ಫೋಟಕ ಪ್ರತಿಭೆ ಮತ್ತು ಅಗಾಧ ಬೌದ್ಧಿಕ ಒಳನೋಟಗಳು ಕಾರಣ. ರಹಮತ್ ಅವರು ಈ ವಿನ್ಯಾಸವನ್ನು ಸಮರ್ಥನೀಯವಾಗಿ ಮುಂದುವರಿಸುತ್ತಾ, ಬಹುನೆಲೆಗಳಲ್ಲಿ ವಿಸ್ತರಿಸುತ್ತಾ ಬರುತ್ತಿದ್ದಾರೆ.

ತರೀಕೆರೆಯಿಂದ ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯದ ತನಕದ ಇವರ ಪ್ರಯಾಣ 'ಕುಲುಮೆ'ಯಲ್ಲಿ ಸೃಜನಶೀಲ ಕೃತಿಯಂತೆ ನಿರೂಪಿತವಾಗಿದೆ. ರಹಮತ್ ತರೀಕೆರೆಯವರ 'ಬಾಳ ಚಿತ್ರಗಳು' ಅವರ ಬಾಳಿನದ್ದಷ್ಟೇ ಅಲ್ಲದೆ ಅವರ ಬಾಳನ್ನು ರೂಪಿಸಿದವರ, ಪ್ರಭಾವಿಸಿದ ವ್ಯಕ್ತಿಗಳ, ಸಂಸ್ಥೆಗಳ, ಚಳವಳಿಗಳ, ತಾತ್ವಿಕತೆಗಳ ಚಿತ್ರಗಳೂ ಆಗಿರುವುದೇ ಈ ಕೃತಿಯ ವಿಶೇಷ. ಈ ಕೃತಿಯಲ್ಲಿ ರಹಮತ್ ಅವರು ತಾವು ಕೇಂದ್ರವಾಗಬಹುದಾದ ಸಹಜತೆಯನ್ನು ಉದ್ದೇಶಪೂರ್ವಕವಾಗಿಯೇ ವಿಸರ್ಜಿಸಿದಂತೆ ಕಾಣುತ್ತದೆ. ವ್ಯಕ್ತಿಯೊಬ್ಬನ/ಳ ಬದುಕು ಸ್ವತಂತ್ರವಾಗಿರಲು, ಸ್ವಾಯತ್ತವಾಗಿರಲು ಸಾಧ್ಯವಿಲ್ಲ, ಅದನ್ನು ತನ್ನದು ಮಾತ್ರ ಎಂದು ನೋಡುವುದರಲ್ಲಿಯೇ ಏನೋ ತೊಡಕಿದೆ ಎನ್ನುವುದು ಇವರ ನಂಬಿಕೆಯಾಗಿರುವಂತೆ ತೋರುತ್ತದೆ.

ಈ ಅಂಶವೇ ಒಟ್ಟಾರೆಯಾಗಿ ರಹಮತ್ ಅವರ ಬದುಕು ಮತ್ತು ವ್ಯಕ್ತಿತ್ವವನ್ನು ಧ್ವನಿಸುತ್ತದೆ. ಸಮಕಾಲೀನ ಭಾರತದ ಹುಡುಕಾಟ, ಸವಾಲುಗಳು, ದುರಂತಗಳು ಇದೆಲ್ಲದರ ಹಿಂದೆ ಭಾರತದ ಪ್ರಜ್ಞಾವಂತ, ಸಂವೇದನಾಶೀಲ ಮನಸ್ಸಿನ ಸಂಘರ್ಷ ಇದ್ದೇ ಇದೆ ಎನ್ನುವುದಾದರೆ ಆ ಸಂಘರ್ಷದ ಒಂದು ಮಾದರಿ 'ಕುಲುಮೆ'ಯಲ್ಲಿದೆ. ಶಿಕ್ಷಣವೆನ್ನುವ ಮಾಯಾದಂಡವು ಭಾರತದ ಅನೇಕ ಸವಾಲುಗಳಿಗೆ ಉತ್ತರವಾಗಬಲ್ಲದು ಎನ್ನುವ ಘಟ್ಟದಲ್ಲಿ ಶಿಕ್ಷಣವನ್ನು ಪಡೆದ ರಹಮತ್ ಅದೇ ಶಿಕ್ಷಣದ ಬೆಳಕಿಂಡಿಯಿಂದ ಭಾರತದ ವಾಸ್ತವವನ್ನು ನೋಡುತ್ತಾ ಹೋಗುತ್ತಾರೆ. ವಾಸ್ತವದ ಗ್ರಹಿಕೆಯಲ್ಲಿ ರಹಮತರು ತಳೆಯುವ ನಿಲುವು ಈ ಕೃತಿಯ ಮಹತ್ವವನ್ನು ಹೆಚ್ಚಿಸುತ್ತದೆ. ಯಾವುದೇ ಸ್ಥಾಪಿತ ತಾತ್ವಿಕ ನಿಲುವುಗಳಿಂದಾಗಲೀ, ಕಟು ವಾಸ್ತವವನ್ನು ಕುರಿತ ಕಹಿಯಾದ, ಸಿನಿಕ ದೃಷ್ಟಿಯಿಂದಾಗಲೀ ಈ ನಿರೂಪಣೆ ರೂಪುಗೊಂಡಿಲ್ಲ. ಬದಲಿಗೆ ಇದನ್ನು ಎದುರಿಸುವ ಅದಮ್ಯ ಜೀವಶಕ್ತಿಯೊಂದು ಬದುಕಿನ ಎಂಥದ್ದೇ ಕಡುಕಷ್ಟಗಳನ್ನು ನಿಭಾಯಿಸುವ ಛಾತಿಯನ್ನು ಕೊಡುತ್ತದೆ ಎನ್ನುವುದನ್ನು ಹೇಳುವ ಕ್ರಮದಲ್ಲಿಯೇ ಈ ಕೃತಿ ಪ್ರತಿರೋಧದ ಮಾದರಿಯನ್ನು ಕಟ್ಟಿಬಿಡುತ್ತದೆ. ಊರನ್ನೇ ಕೊಳ್ಳುವ ಫ್ಯೂಡಲ್ ಶಕ್ತಿಗಳೆದುರು, ಸಂತೆಯಲ್ಲಿ ತಂದ ಕಾರ ಮಂಡಕ್ಕಿಯನ್ನು ತಿನ್ನುವ ಸಂತೋಷ ಲೋಕದ ಅತಿದೊಡ್ಡ ಸುಖ ಎನ್ನುವಂತೆ ಬದುಕಬಹುದಾದ ಸಾಧ್ಯತೆಯನ್ನು, ಒಂದು ಎಳನೀರು, ಶಾಲೆಯಲ್ಲಿ ಸಿಕ್ಕ ಒಂದು ಮೆಚ್ಚುಗೆ, ಹಾಕಿಕೊಂಡ ಒಂದು ಹೊಸ ಬಟ್ಟೆ... ಈ ಎಲ್ಲವೂ ಬಡತನವನ್ನು ಹುಸಿಭಾವುಕತೆಯಲ್ಲಿ, ಭ್ರಮೆಯಲ್ಲಿ ನೀಗಿಕೊಳ್ಳುವ ಸಂಗತಿಗಳಲ್ಲವೇ ಅಲ್ಲ. ಆ ಬದುಕಿನಲ್ಲಿಯೂ ಇರುವ ಸಮೃದ್ಧತೆ, ಜೀವಂತಿಕೆ, ಬದುಕಿನ ಗುಣಮಟ್ಟ, ಸಂಬಂಧಗಳ ಚೆಲುವು ಇವುಗಳನ್ನು ರಹಮತ್ ಮನದಟ್ಟಾಗುವಂತೆ ಚಿತ್ರಿಸುತ್ತಾರೆ. ಉದ್ದಕ್ಕೂ ಬಳಸಿಕೊಂಡಿರುವ ಲೋಮೈಮೆಸಿಸ್ ಇದಕ್ಕೆ ಪೂರಕವಾಗಿ ಕೃತಿಯನ್ನು ಪರಿಣಾಮಕಾರಿಯಾಗಿಸುತ್ತಾ ಹೋಗಿದೆ. ಇದು ಅಳುನುಂಗಿ ನಗುವ ನಗುವಲ್ಲ; ಅಳಲೇಕೆ, ನಕ್ಕು ಆನಂದಿಸಲು ಕಾರಣಗಳಿರುವಾಗ ಎನ್ನುವ ಜೀವಪ್ರೀತಿಯಿಂದ ಹುಟ್ಟಿದ್ದು. ಹಲವು ಕಡೆಗಳಲ್ಲಿ ವ್ಯಂಗ್ಯ ಇದರ ಸೊಗಸನ್ನು ಹಾಳುಮಾಡುತ್ತದೆ ಎನ್ನಿಸುವುದೂ ಉಂಟು.



ಪು: 312
₹330

ಕುಲುಮೆ
ಲೇ: ರಹಮತ್ ತರೀಕೆರೆ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662

ಕೃತಿಯಲ್ಲಿ ರಹಮತ್ ಅವರಿಗೆ ಆತ್ಮರತಿಯನ್ನು ನೀಗಿಕೊಳ್ಳಲು ಸಾಧ್ಯವಾಗಿರುವುದೂ ಈ ಕೃತಿಗೆ ಆತ್ಮಕತೆಯ ಚೌಕಟ್ಟನ್ನು ಮೀರಿ ಬೆಳೆಯಲು ಸಾಧ್ಯವಾಗಿದೆ. 1970-80ರ ದಶಕಗಳಲ್ಲಿ ರಹಮತ್ ಅವರ ಬೌದ್ಧಿಕ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯವಾದ ಸಂದರ್ಭಗಳನ್ನು ರಹಮತರು ತಾವು ಅದರ ಫಲ, ಒಂದು ಭಾಗ ಎನ್ನುವ ವಿಕೇಂದ್ರೀಕೃತ, ಸಾರ್ವಜನಿಕ ನೆಲೆಯಲ್ಲಿ ಪ್ರತಿಪಾದಿಸುತ್ತಾರೆ. ಸ್ವಕೇಂದ್ರೀಕರಣದ ಮಿತಿಯಿಂದ ಆತ್ಮಚರಿತ್ರೆಯನ್ನು ಪಾರು ಮಾಡಿದ್ದಾರೆ. ಇದೊಂದು ಮುಖ್ಯವಾದ ಸಂಗತಿ ಎಂದೇ ಅನ್ನಿಸುತ್ತದೆ. ಗಂಡಸರ ಆತ್ಮಚರಿತ್ರೆಗಳ ವಿನ್ಯಾಸವನ್ನೇ ಪಲ್ಲಟಗೊಳಿಸುವ ತಿರುವಿನ ಕೆಲಸವನ್ನೂ ಈ ಮೂಲಕ ಕುಲುಮೆ ಮಾಡುತ್ತದೆ. ವ್ಯಕ್ತಿ ಚರಿತ್ರೆಯು ಸಮುದಾಯದ ಚರಿತ್ರೆಯೂ, ಕಾಲದ ಕಥನವೂ ಆಗಬಹುದಾದ ಸಾಧ್ಯತೆಯನ್ನು ತೆರೆಯುತ್ತದೆ 'ಕುಲುಮೆ'. ರೂಪಕದ ಈ ಶೀರ್ಷಿಕೆ ವಾಸ್ತವದ ಸಂಕೇತವೂ ಆಗುವ ಅಪರೂಪದ್ದು ಎನ್ನುವುದು ರಹಮತರ ಕವಿಪ್ರತಿಭೆಯ ದ್ಯೋತಕವೇ ಇದ್ದೀತು.

ಶಕ್ತಿಗಾಗಿ ಸಂಘಟನಾ ಸಮಾವೇಶ

10ನೇ ಪುಟದಿಂದ...

ಹಾಸನದಲ್ಲಿ ಅಜ್ಜಪ್ಪನವರು ವಿದ್ಯಾರ್ಥಿನಿಲಯ ಕಟ್ಟಡಕ್ಕೆ ನಿವೇಶನ ಪಡೆದರು. ದಾವಣಗೆರೆಯಲ್ಲಿ ಮೂಲಾ ರಾಮಪ್ಪನವರ ಹೆಸರಿನಲ್ಲಿ ಸ್ಥಾಪಿತವಾದ ವಿದ್ಯಾರ್ಥಿನಿಲಯ ಕಟ್ಟಡವನ್ನು ವಿಸ್ತರಿಸಲಾಯಿತು. ಈ ಎಲ್ಲ ಕಾರ್ಯಗಳಿಗೂ ಸ್ಫೂರ್ತಿ ನಿರ್ದೇಶನ ನೀಡಿದವರು ಕೆ.ಎ. ನೆಟ್ಟಕಲ್ಲಪ್ಪನವರು.

ಕೆ.ಎನ್.ಗುರುಸ್ವಾಮಿಯವರು ಸಂಘದ ಅಧ್ಯಕ್ಷ ಸ್ಥಾನದಿಂದ ವಿರಮಿಸಿದಾಗ ಸಂಘದ ನೇತೃತ್ವ ವಹಿಸಿದ ಎಚ್.ಆರ್.ಬಸವರಾಜ್ ಅವರು 1996ರಲ್ಲಿ ಬೆಂಗಳೂರು ಅರಮನೆ ಮೈದಾನದಲ್ಲಿ ಈಡಿಗ ಸಮುದಾಯದ ಮೂರನೇ ಬೃಹತ್ ಸಮ್ಮೇಳನ ನಡೆಸಿ ಸಮಾಜದ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು. ಹೆಂಡ, ಸಾರಾಯಿ ನಿಷೇಧ ಕ್ರಮದಿಂದ ಕಸುಬಿನಿಂದ ವಂಚಿತರಾಗುವ ಈಡಿಗರಿಗೆ ಪುನರ್ವಸತಿಗೆ ಸೂಕ್ತ ವ್ಯವಸ್ಥೆ ಆಗುವಂತೆ ಆ ಸಮ್ಮೇಳನದಲ್ಲಿ ಒತ್ತಾಯಿಸಲಾಯಿತು.

ಬಸವರಾಜ್ ನಂತರ ಸಂಘದ ನೇತೃತ್ವ ವಹಿಸಿದ ಡಿ. ದಾಸಪ್ಪನವರು ವಿದ್ಯಾರ್ಥಿನಿಲಯಗಳ ಸುಧಾರಣೆಗೆ ಆದ್ಯತೆ ನೀಡಿದರು. ನಂತರ ಬಂದ ಜೆ.ಪಿ.ನಾರಾಯಣಸ್ವಾಮಿಯವರು ಸಂಘದ ಕಟ್ಟಡವನ್ನು ವಿಸ್ತರಿಸಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದರು. 2017ರಲ್ಲಿ ಸಂಘದ ಅಧ್ಯಕ್ಷಸ್ಥಾನಕ್ಕೆ ಬಂದಿರುವ ಡಾ.ಎಂ. ತಿಮ್ಮೇಗೌಡರು ಈಡಿಗ ಸಮುದಾಯಕ್ಕೆ ಸೇರಿದ ಎಲ್ಲ ಪಂಗಡಗಳನ್ನು ಒಗ್ಗೂಡಿಸಿ ಡಿಸೆಂಬರ್ 10ರಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತಮಹೋತ್ಸವ ಆಚರಣೆಗೆ ಸಜ್ಜಾಗಿದ್ದಾರೆ. ಈ ಸಂದರ್ಭದಲ್ಲಿ ಬೃಹತ್ ಜಾಗೃತ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ರಾಜ್ಯದ ವಿವಿಧ ಭಾಗಗಳಲ್ಲಿ ಈಚಿನ ವರ್ಷಗಳಲ್ಲಿ ಅಸ್ತಿತ್ವಕ್ಕೆ ಬಂದ ಧಾರ್ಮಿಕ ಪೀಠಗಳ ಸ್ವಾಮೀಜಿಗಳು ಸಾಕ್ಷಿಯಾಗಲಿದ್ದಾರೆ.

'ವಿದ್ಯೆಯಿಂದ ಸ್ವತಂತ್ರರಾಗಿ, ಸಂಘಟನೆಯಿಂದ ಬಲಯುತರಾಗಿ' ಎಂಬ ಪರಮಗುರು ಶ್ರೀ ನಾರಾಯಣಗುರುಗಳ ಆಶಯವನ್ನು ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘವು ಈ ಬೃಹತ್ ಸಮಾವೇಶದ ಮೂಲಕ ಸಾಕಾರಗೊಳಿಸುವ ದೃಢ ಹೆಜ್ಜೆಯನ್ನು ಇರಿಸಿದೆ.

2ಎ ಪ್ರವರ್ಗದಲ್ಲಿ: ಎಪ್ಪತ್ತರ ದಶಕದಲ್ಲಿ ರಚನೆಯಾಗಿದ್ದ ಹಾವನೂರು ಆಯೋಗವು ಈಡಿಗ ಸಮುದಾಯದ ಅಡಿಯಲ್ಲಿ ವಿಭಿನ್ನ ಹೆಸರುಗಳ ಮೂಲಕ ಗುರುತಿಸಿಕೊಳ್ಳುತ್ತಿರುವ ಇಲ್ಲಾವನ್, ಇಳಿಗ, ಈಡಿಗ, ಎಳವ, ಎಳಿಗ, ಕಲಾಲ್, ಗಾಮಲ್ಲ, ಗೂಂಡ್ಲ ತಿಯನ್, ಗೌಂಡ್ಲ ಥಿಯಾನ್, ಥಿಯ್ಯ ಥಿಯ್ಯಾನ್, ದೀವರ, ದೀವರಮಕ್ಕಳು, ದೇವರ, ದೇವರಮಕ್ಕಳು, ದೇಶಭಂಡಾರಿ, ನಾಡಾರ್, ನಾಮಧಾರಿ, ಪೂಜಾರಿ, ಬಂಢಾರಿ, ಬಿಲ್ಲವ, ಬೆಲ್ಚಡ, ಮಲೆಯಾಳಿ ಬಿಲ್ಲವ, ಹಳೇಪೈಕರು, ಹಾಲಕ್ಷತ್ರಿಯ ಜಾತಿಗಳನ್ನು ಸೇರಿಸಿದೆ. 1971ರ ಜನಗಣತಿಯನ್ನು ಆಧರಿಸಿದ ಹಾವನೂರು ಆಯೋಗವು ರಾಜ್ಯದ ಜನಸಂಖ್ಯೆಯಲ್ಲಿ ಈಡಿಗರ ಸಂಖ್ಯಾ ಪ್ರಮಾಣ ಶೇ 2.51 ಎಂಬುದನ್ನು ಲೆಕ್ಕ ಹಾಕಿದೆ.


ಜನರೊಂದಿಗೆ ಮಾತುಕತೆಯಲ್ಲಿ ತೊಡಗಿರುವ ರೂಬಿ
ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಕಬ್ಬನ್ ಉದ್ಯಾನದಲ್ಲಿ ಕಾವ್ಯದಾನ

ನಮ್ಮೊಟ್ಟಿಗೆ ಬದುಕುವವರೊಂದಿಗೇ ಮಾತನಾಡಲು ಸಮಯವಿಲ್ಲ ಎನ್ನುವಂತಹ ದಿನಗಳಲ್ಲಿ ನಾವಿದ್ದೇವೆ. ಆದರೆ ಇಲ್ಲೊಬ್ಬರಿದ್ದಾರೆ; ಅವರಿಗೂ ನಮಗೂ ಸಂಬಂಧವೇ ಇಲ್ಲ. ಈ ವೇಗದ ಬದುಕಿನ ನಡುವೆಯೂ ಅವರು ನಮ್ಮ ಮಾತಿಗೆ ಕಿವಿಯಾಗುತ್ತಾರೆ. ಅದರಿಂದ ಸಂಬಂಧ ಸಾಧ್ಯವಾಗಿ, ಕಡೆಗೆ ಅದೇ ಕವಿತೆಯಾಗುತ್ತದೆ.

ಸುಕೃತ ಎಸ್.

ಹುಡುಕಾಟ ತುಂಬಿದ ನಗು
ಮತ್ತು ಗುಳಿಗಳ ಆಳದಲ್ಲಿ ನೆಲೆಕಂಡ ಪ್ರಶ್ನೆಗಳು...
... ಪಯಣಿಸುತ್ತೇನೆ
ನಿನ್ನ ಕಣ್ಣುಗಳಲ್ಲಿರುವ ಕನಸನ್ನು ನನಸಾಗಿಸಲು
ನನ್ನ ಕಣ್ಣುಗಳಲ್ಲಿರುವ ಬಯಕೆಯನ್ನು ಗೆಲ್ಲಲು...

ಈ ಅರ್ಥ ಬರುವ ಇಂಗ್ಲಿಷ್ ಪದ್ಯವನ್ನು ನನ್ನ ಕೈಗಿತ್ತ ರೂಬಿ, 'ಪದ್ಯ ಹೇಗಿದೆ?' ಎಂದು ಕೇಳಿದರು. ಕಾವ್ಯದ ವಸ್ತುವಾಗುವುದೇ ಪುಳಕ ಅಲ್ಲವೇ? ನಾನೂ ಪುಳಕಿತಳಾಗಿದ್ದೆ. ಕಾವ್ಯಕ್ಕೆ ವಸ್ತುವಾದೆನೆಂಬ ಖುಷಿಯು ತೇಲಿಸಿತ್ತು. ಇದು ಅಲ್ಲಿಗೆ ಬಂದ ಎಲ್ಲರಿಗೂ ಆಗಿತ್ತು. 'ಚೆನ್ನಾಗಿದೆ' ಎಂದೆ.

ಅವರ ಪೂರ್ಣ ಹೆಸರು ರೂಬಿ ನಾಜ್. 'ನನಗೆ ಬರೆಯುವುದೇ ಕೆಲಸ' ಎನ್ನುತ್ತಾರೆ ಅವರು. ಪ್ರತಿ ಶನಿವಾರವೂ ಬೆಂಗಳೂರಿನ ಕಬ್ಬನ್ ಉದ್ಯಾನವು ಕಾವ್ಯಮಯವಾಗುತ್ತದೆ. ದೂರದ ಊರಿಂದ, ಪಕ್ಕದ ರಾಜ್ಯಗಳಿಂದಲೂ ರೂಬಿ ಅವರಲ್ಲಿ ಕವಿತೆ ಬರೆಸಿಕೊಂಡು ಹೋಗಲು ಜನರು ಬರುತ್ತಾರೆ. ರೂಬಿ ಇಂಗ್ಲಿಷ್‌ನಲ್ಲಿ ಕವಿತೆ ಬರೆಯುತ್ತಾರೆ. ಅವರಿಗೆ ಕನ್ನಡ ಮಾತನಾಡಲು ಬರುತ್ತದಷ್ಟೆ.

ರೂಬಿ ಬಳಿ ಕೂತು ಯಾರೇ ಆಗಲಿ, ಕಥೆ ಹೇಳಬಹುದು. ಮೌನವಾಗಿಯೂ ಕುಳಿತುಕೊಳ್ಳಬಹುದು. ಆಗ ಅವರೇ ಮಾತನಾಡಿಸುತ್ತಾರೆ. ಅದಕ್ಕೆ ಉತ್ತರ ಕೊಟ್ಟರೂ ಸಾಕು. ಐದು ನಿಮಿಷದ ಮಾತುಕತೆ ಅಥವಾ ಮೌನ ಸಂವಾದವೇ ಕವಿತೆಯಾಗುತ್ತದೆ. ಹತ್ತೇ ನಿಮಿಷದಲ್ಲಿ ಕವಿತೆ ತಯಾರಾಗಿ, ಕೈ ಸೇರುತ್ತದೆ. ಈ ಇಡೀ ಪ್ರಕ್ರಿಯೆಯಲ್ಲಿ ಗಮನಸೆಳೆಯುವುದು ಟೈಪ್‌ರೈಟರ್‌ನ ಸದ್ದು. ಎ4 ಹಾಳೆಯನ್ನು ಮೇಲಿಂದ ಕೆಳಗೆ ಸಮನಾಗಿ ಹರಿದು ಎರಡು ಭಾಗ ಮಾಡಿದ ಹಾಳೆಯಲ್ಲಿ ರೂಬಿ ಟೈಪ್‌ರೈಟರ್‌ನಲ್ಲಿ ಕವನ ಬರೆದುಕೊಡುತ್ತಾರೆ.

ಕವಿತೆ ಬರೆದುಕೊಟ್ಟ ಮೇಲೆ ಅದನ್ನು ಅವರ ಮುಂದೆ ಓದಬೇಕು ಎನ್ನುವುದು ರೂಬಿ ವಿಧಿಸುವ ಷರತ್ತು. ಕವಿತೆ ಓದುವುದೇ ಅವರ 'ಪೇಮೆಂಟ್'. ಕವಿತೆ ಓದಿ ನಿಮಗೆ ತುಂಬಾ ಸಂತೋಷವಾಯಿತು ಎಂದಿಟ್ಟುಕೊಳ್ಳಿ, ನೀವು ಅವರನ್ನು ಹೋಗಿ ಅಪ್ಪಬಹುದು. ಅವರಿಗಾಗಿ ಚಾಕೊಲೇಟ್ ತಂದುಕೊಡಬಹುದು, ನಿಮಗೆ ಇಷ್ಟವೆನಿಸಿದ ಏನನ್ನೂ ಉಡುಗೊರೆಯಾಗಿ ನೀಡಬಹುದು. ಆದರೆ, ಹಣವನ್ನು ಮಾತ್ರ ಅವರು ಪಡೆದುಕೊಳ್ಳುವುದಿಲ್ಲ.

'ಒಂದು ದಿನ ನಾನು ಮತ್ತು ನನ್ನ ಸ್ನೇಹಿತ ಉದ್ಯಾನದಲ್ಲಿ ಕುಳಿತಿದ್ದೆವು. ಮೇಲೆ ನೀಲಿ ಆಕಾಶ. ಸುತ್ತ ಹಸಿರು. ಇದ್ದಕ್ಕಿದ್ದ ಹಾಗೆ ಕವಿತೆ ಬರೆಯಬೇಕೆಸಿತು. ಬರೆದೆ ಅಷ್ಟೆ. ಸ್ನೇಹಿತರಿಗಾಗಿ ಕವಿತೆ ಬರೆದೆ. ಹೀಗೆ ಪ್ರತಿ ವಾರವೂ ಬರುವುದು, ಕವಿತೆ ಬರೆಯುವುದು ರೂಢಿಯಾಯಿತು. ನನ್ನ ಇನ್‌ಸ್ಟಾಗ್ರಾಂನಲ್ಲಿಯೂ ಈ ಬಗ್ಗೆ ಬರೆದುಕೊಂಡೆ. ಈಗ ಬೇರೆ ರಾಜ್ಯಗಳಿಂದಲೂ ಜನರು ನನ್ನ ಕವಿತೆ ಹುಡುಕಿಕೊಂಡು ಬರುತ್ತಾರೆ' ಎಂದರು ರೂಬಿ.

ಈ ಕವಿತಾ ಪ್ರಕ್ರಿಯೆಯಿಂದಲೇ ಇಡೀ ವಾತಾವರಣದಲ್ಲಿ ಆತ್ಮೀಯತೆ ಮಡುಗಟ್ಟಿ ಬಿಡುತ್ತದೆ. ಪ್ರೀತಿ, ಗೆಳೆತನ ಕೊನೆಗೊಂಡಿದ್ದಕ್ಕೋ, ಪ್ರಿಯತಮೆಗೆ, ಪ್ರಿಯಕರನಿಗೆ ಕವಿತೆಯೊಂದನ್ನು ಉಡುಗೊರೆಯಾಗಿ ಕೊಡುವುದಕ್ಕೋ, ಹೆಂಡತಿಗೆ ಸರ್ಪ್ರೈಸ್ ಕೊಡುವುದಕ್ಕೋ ಜನರು ರೂಬಿ ಅವರಿಂದ ಕವಿತೆ ಬರೆಸಿಕೊಂಡು ಹೋಗಲು ಬರುತ್ತಾರೆ.

ಹೆಂಡತಿಗೆ ಸರ್ಪ್ರೈಸ್ ಕೊಡಬೇಕು ಎಂದು ಗಂಡ ಹಲವು ದಿನಗಳ ಹಿಂದೆಯೇ ಇನ್‌ಸ್ಟಾಗ್ರಾಂನಲ್ಲಿ ರೂಬಿ ಅವರಲ್ಲಿ ಹೇಳಿಕೊಂಡಿದ್ದರು. ಒಂದು ಶನಿವಾರ ಸಂಜೆ ಆ ದಂಪತಿ ರೂಬಿ ಮುಂದೆ ಕುಳಿತು ತಮ್ಮ ಸಮಸ್ಯೆ ಹೇಳಿಕೊಂಡರು. ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಹೆಂಡತಿ ಮಗು ಆದಮೇಲೆ ನಟಿಸುವುದನ್ನು ಬಿಟ್ಟಿದ್ದರು. 'ಅವರು ತಮ್ಮ ನೆಚ್ಚಿನ ಕೆಲಸ ಬಿಟ್ಟು ಮನೆಯಲ್ಲಿದ್ದಾರೆ. ಹೀಗಾಗಿ ಹೆಚ್ಚು ಒತ್ತಡ ಇರುತ್ತದೆ. ನೀವು ಅವರಿಗೆ ನಟನೆ ಮಾಡಲು ಬಿಡಿ'-ಗಂಡನಿಗೆ ರೂಬಿ ಹೇಳಿದ ಮಾತಿದು.

